ಸೋಮವಾರ, ಜೂನ್ 5, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 155 | ಪುಟ 12
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
'ವಿಧಿ ವಿಜ್ಞಾನ' ಪದವಿ ಕೋರ್ಸ್‌ಗಳ ಕುರಿತ ಮಾಹಿತಿ ಇಲ್ಲಿದೆ.

ಆಳ–ಅಗಲ
ಪ್ಲಾಸ್ಟಿಕ್ ಮಾಲಿನ್ಯವನ್ನು ತಡೆಯೋಣ

ಇಂದು ವಿಶ್ವ ಪರಿಸರ ದಿನ

ಮಣಿಪುರ ಹಿಂಸಾಚಾರ: ನಿವೃತ್ತ ಹೈಕೋರ್ಟ್ ಸಿಜೆಗೆ ತನಿಖೆಯ ಹೊಣೆ 9

ಲೋಕಸಭೆ ಚುನಾವಣೆ: ಬಿಜೆಪಿ– ಜೆಡಿಎಸ್ ಮೈತ್ರಿ? 4

ಹಿಂಬಾಕಿಯ ಭಾರವೂ ಸೇರಿ ಜೂನ್ ತಿಂಗಳ ಬಿಲ್ ಬಲು ದುಬಾರಿ

ದರ ಹೆಚ್ಚಳದ ಕರೆಂಟ್ ಶಾಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿ ಯೂನಿಟ್ ವಿದ್ಯುತ್ ದರದಲ್ಲಿ 70 ಪೈಸೆಯಷ್ಟು ಹೆಚ್ಚಳ ಮಾಡುವ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ (ಕೆಇಆರ್‌ಸಿ) ಆದೇಶ ಈ ತಿಂಗಳಿನಿಂದಲೇ ಜಾರಿಯಾಗಿದೆ. ಏಪ್ರಿಲ್ ತಿಂಗಳ ಹಿಂಬಾಕಿ, ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚ ಹೊಂದಾಣಿಕೆಯ ಹಿಂಬಾಕಿಯೂ ಸೇರಿ ಈ ತಿಂಗಳ ಬಿಲ್‌ನಲ್ಲಿ ಗ್ರಾಹಕರಿಗೆ ಭಾರಿ ಹೊರೆ ಬೀಳಲಿದೆ.

ವಿದ್ಯುತ್ ಸರಬರಾಜು ಕಂಪನಿಗಳ (ಎಸ್ಕಾಂ) ವರಮಾನದ ಕೊರತೆ ಸರಿದೂಗಿಸಲು ಪ್ರತಿ ಯೂನಿಟ್ ವಿದ್ಯುತ್ ದರವನ್ನು 70 ಪೈಸೆಯಷ್ಟು ಹೆಚ್ಚಳ ಮಾಡಲು ಒಪ್ಪಿಗೆ ನೀಡಿ ಕೆಇಆರ್‌ಸಿ ಮೇ 12ರಂದು ಆದೇಶ ಹೊರಡಿಸಿತ್ತು. ಆಯೋಗದ ನಿರ್ದೇಶನದಂತೆ ದರ ಹೆಚ್ಚಳವನ್ನು ಜೂನ್‌ನಿಂದ ಅನುಷ್ಠಾನಕ್ಕೆ ತರಲಾಗಿದೆ. ಬೆಸ್ಕಾಂ ಮಾತ್ರ ಈ ತಿಂಗಳು ಭಾಗಶಃ ದರ ಹೆಚ್ಚಳ ಮಾಡಿದ್ದರೆ, ಉಳಿದ ಎಲ್ಲ ಎಸ್ಕಾಂಗಳು ಪ್ರತಿ ಯೂನಿಟ್‌ಗೆ 70 ಪೈಸೆ ಹೆಚ್ಚಳ ಮಾಡಿವೆ.

ದರ ಹೆಚ್ಚಳ ಏಪ್ರಿಲ್ 1ರಿಂದಲೇ ಪೂರ್ವಾನ್ವಯವಾಗಲಿದೆ. ಗ್ರಾಹಕರು ಏಪ್ರಿಲ್ ತಿಂಗಳಿನಲ್ಲಿ ಬಳಸಿರುವ ವಿದ್ಯುತ್‌ಗೆ ಪ್ರತಿ ಯೂನಿಟ್‌ಗೆ 70 ಪೈಸೆಯಂತೆ ಹಿಂಬಾಕಿಯನ್ನು ಈ ತಿಂಗಳ ಬಿಲ್‌ನಲ್ಲಿ ಪಾವತಿಸಬೇಕಿದೆ. ಎಲ್ಲ ಎಸ್ಕಾಂಗಳಲ್ಲಿ ವಿದ್ಯುತ್ ಬಿಲ್ಲಿಂಗ್ ಪ್ರಕ್ರಿಯೆ ಆರಂಭವಾಗಿದ್ದು, ಏಪ್ರಿಲ್‌ನ ಹಿಂಬಾಕಿ ಸೇರಿಸಿ ಬಿಲ್ ನೀಡಲಾಗುತ್ತಿದೆ.

ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚ ಹೊಂದಾಣಿಕೆ (*ಪೈಸೆಗಳಲ್ಲಿ)		
ಎಸ್ಕಾಂ	ಜುಲೈನಿಂದ ಸೆಪ್ಟೆಂಬರ್	ಅಕ್ಟೋಬರ್‌ನಿಂದ ಡಿಸೆಂಬರ್
ಬೆಸ್ಕಾಂ	51	50
ಮೆಸ್ಕಾಂ	47	46
ಸೆಸ್ಕ್	41	41
ಹೆಸ್ಕಾಂ	50	50
ಜೆಸ್ಕಾಂ	34	33

ಆರು ತಿಂಗಳ ಕಾಲಾವಕಾಶ

2023ರ ಜನವರಿಯಿಂದ ಮಾರ್ಚ್ ತಿಂಗಳ ಅವಧಿಯಲ್ಲಿನ ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚ ಹೊಂದಾಣಿಕೆ ಹೆಚ್ಚಳದ ಮೊತ್ತವನ್ನು ಏಪ್ರಿಲ್‌ನಿಂದ ಜೂನ್ ಅವಧಿಯ ಬಿಲ್‌ಗಳಲ್ಲಿ ವಸೂಲಿ ಮಾಡಬೇಕಿತ್ತು. ಆದರೆ, ಗ್ರಾಹಕರಿಗೆ ಒಂದೇ ಬಾರಿಗೆ ಹೆಚ್ಚಿನ ಹೊರೆ ಬೀಳುತ್ತದೆ ಎಂಬ ಎಸ್ಕಾಂಗಳ ಮನವಿಯನ್ನು ಪರಿಗಣಿಸಿರುವ ಕೆಇಆರ್‌ಸಿ, ಜುಲೈನಿಂದ ಡಿಸೆಂಬರ್ ವರೆಗಿನ ಅವಧಿಯಲ್ಲಿ ಎರಡು ಹಂತದಲ್ಲಿ ವಸೂಲಿ ಮಾಡಲು ಅವಕಾಶ ನೀಡಿದೆ.

ಆಯೋಗದ ಹಿಂದಿನ ಆದೇಶದ ಪ್ರಕಾರ, ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚ ಹೊಂದಾಣಿಕೆ ಹೆಚ್ಚಳದ ಬಾಬ್ತು ಹಿಂಬಾಕಿಯನ್ನು ಜೂನ್ ತಿಂಗಳ ಬಿಲ್‌ನಲ್ಲಿ ₹1.49 ಹಾಗೂ ಜುಲೈ ತಿಂಗಳ ಬಿಲ್‌ನಲ್ಲಿ ₹1.81 ವಸೂಲಿ ಮಾಡಬೇಕಿತ್ತು. ಈ ಮೊತ್ತವನ್ನು ಆರು ತಿಂಗಳ ಅವಧಿಯಲ್ಲಿ ಎರಡು ಕಂತುಗಳಲ್ಲಿ ವಸೂಲಿ ಮಾಡಲು ಅನುಮತಿ ನೀಡಿ ಆಯೋಗವು ಜೂನ್ 2ರಂದು ಪರಿಷ್ಕೃತ ಆದೇಶ ಹೊರಡಿಸಿದೆ.

ಹೊಂದಾಣಿಕೆ ಹೊರೆ: 2022ರ ಇಂಧನ ಮತ್ತು ವಿದ್ಯುತ್ ಖರೀದಿಯ ವೆಚ್ಚ ಹೊಂದಾಣಿಕೆಯ ಹಿಂಬಾಕಿಯನ್ನೂ ಈಗಲೇ ಗ್ರಾಹಕರಿಂದ ವಸೂಲಿ ಮಾಡಬೇಕಿದೆ. ಪ್ರತಿ ಎಸ್ಕಾಂನ ಇಂಧನ, ವಿದ್ಯುತ್ ಖರೀದಿ ವೆಚ್ಚದ ಆಧಾರದಲ್ಲಿ ಮೊತ್ತ ನಿರ್ಧಾರವಾಗಿದೆ.

'ಈ ತಿಂಗಳ ವಿದ್ಯುತ್ ಬಿಲ್‌ನಲ್ಲಿ ಪ್ರತಿ ಯೂನಿಟ್‌ಗೆ ಸರಾಸರಿ ₹2.50ರಿಂದ ₹3 ರವರೆಗೆ ಹೆಚ್ಚಳ ಆಗುವ ಸಾಧ್ಯತೆ ಇದೆ' ಎಂದು ಇಂಧನ ಇಲಾಖೆ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

'ಉಚಿತ ವಿದ್ಯುತ್' ನಿರೀಕ್ಷೆ ಮಧ್ಯೆ ಹೊರೆ: ಗೃಹ ಜ್ಯೋತಿ ಯೋಜನೆಯಡಿ ಪ್ರತಿ ಮನೆಗೆ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ಪೂರೈಸುವ 'ಗ್ಯಾರಂಟಿ' ಅನುಷ್ಠಾನಕ್ಕೆ ರಾಜ್ಯ ಸರ್ಕಾರ ಸಿದ್ಧತೆ ನಡೆಸಿದೆ. ಯಾರಿಗೆಲ್ಲ ಉಚಿತ ವಿದ್ಯುತ್ ಸಿಗಬಹುದು ಎಂಬ ಚರ್ಚೆ ಸಾರ್ವಜನಿಕರ ವಲಯದಲ್ಲಿ ಜೋರಾಗಿದೆ. ಈ ಮಧ್ಯದಲ್ಲೇ ವಿದ್ಯುತ್ ದರ ಹೆಚ್ಚಳ, ಹಿಂಬಾಕಿ, ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚ ಹೊಂದಾಣಿಕೆಯ ಹಿಂಬಾಕಿಗಳ ಭಾರ ಗ್ರಾಹಕರ ಮೇಲೆ ಬಿದ್ದಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ





ಬಾಲಸೋರ್ ರೈಲು ಅಪಘಾತದ ಸಂತ್ರಸ್ತರ ರಕ್ಷಣೆ ಮತ್ತು ಶೋಧ ಕಾರ್ಯಾಚರಣೆ ಪೂರ್ಣಗೊಂಡಿದೆ. ರೈಲು ಹಳಿಯನ್ನು ಸರಿಪಡಿಸುವ ಕಾರ್ಯ ಆರಂಭಗೊಂಡಿದೆ – ಪಿಟಿಐ ಚಿತ್ರ

ರೈಲು ಅಪಘಾತ: ಸಿಬಿಐ ತನಿಖೆಗೆ ಶಿಫಾರಸು – ಸಚಿವ

'ವಿಧ್ವಂಸಕ ಕೃತ್ಯದ ಶಂಕೆ'

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ/ಬಾಲಸೋರ್: ಒಡಿಶಾದ ಬಾಲಸೋರ್ ಜಿಲ್ಲೆಯಲ್ಲಿ ರೈಲುಗಳ ಅಪಘಾತವು ಚಾಲಕನ ತಪ್ಪಿನಿಂದಾಗಿ ಸಂಭವಿಸಿದೆ ಎಂಬುದನ್ನು ಭಾರತೀಯ ರೈಲ್ವೆ ಭಾನುವಾರ ತಳ್ಳಿಹಾಕಿದೆ. 'ಎಲೆಕ್ಟ್ರಾನಿಕ್ ಇಂಟರ್‌ಲಾಕಿಂಗ್ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಿರುವುದು ಅಪಘಡಕ್ಕೆ ಕಾರಣ. ವ್ಯವಸ್ಥೆಯಲ್ಲಿ ಮಾಡಿರುವ ಈ ಬದಲಾವಣೆಯು ವಿಧ್ವಂಸಕ ಕೃತ್ಯದ ಸಾಧ್ಯತೆಯತ್ತ ಬೊಟ್ಟು ಮಾಡುತ್ತದೆ' ಎಂದು ಹೇಳಿದೆ.

ಬಾಲಸೋರ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಕೂಡ, 'ಎಲೆಕ್ಟ್ರಾನಿಕ್ ಇಂಟರ್‌ಲಾಕಿಂಗ್ ವ್ಯವಸ್ಥೆ ಹಾಗೂ ಪಾಯಿಂಟ್ ಯಂತ್ರದಲ್ಲಿ ಮಾಡಲಾದ ಬದಲಾವಣೆಯೇ ರೈಲುಗಳ ಅಪಘಾತಕ್ಕೆ ಮೂಲ ಕಾರಣ' ಎಂದು ಹೇಳಿದ್ದಾರೆ.

'ಈ ಅವಘಡಕ್ಕೆ ಹೊಣೆಯಾಗಿ ಇರುವವರನ್ನು ಸಹ ಗುರುತಿಸಲಾಗಿದೆ. ಒಳಗಿನವರು ಅಥವಾ ಹೊರಗಿನವರು ಈ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಿರಬಹುದು. ಇದು ವಿಧ್ವಂಸಕ ಕೃತ್ಯ ಆಗಿರಬಹುದು. ಯಾವ ಸಾಧ್ಯತೆಯನ್ನೂ ನಾವು ತಳ್ಳಿ ಹಾಕುತ್ತಿಲ್ಲ. ಈ ಕುರಿತು ಎಲ್ಲ ಆಯಾಮಗಳಲ್ಲಿ ತನಿಖೆ ನಡೆಸುತ್ತೇವೆ' ಎಂದು ಅವರು ಸ್ಪಷ್ಟಪಡಿಸಿದರು.

> ಹಳಿಗಳನ್ನು ಮರುಸ್ಥಾಪಿಸುವ ಕಾರ್ಯ ಭರದಿಂದ ಸಾಗಿದ್ದು, ಮಂಗಳವಾರದ ವೇಳೆ ಈ ಮಾರ್ಗವು ರೈಲುಗಳ ಸಂಚಾರಕ್ಕೆ ಮುಕ್ತವಾಗಲಿದೆ
>
> **ಧರ್ಮೇಂದ್ರ ಪ್ರಧಾನ್**
> ಕೇಂದ್ರ ಸಚಿವ

> ರೈಲ್ವೆಯಲ್ಲಿ ಹುದ್ದೆಗಳು ಖಾಲಿ ಇವೆ. ಪ್ರಮುಖ ವಿಭಾಗಗಳಿಗೆ ಅನುದಾನದ ಕೊರತೆ ಇದೆ. ಈ ವಿಚಾರಕ್ಕೆ ಸಂಬಂಧಿಸಿ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗುತ್ತದೆ?
>
> **ಪ್ರಿಯಾಂಕಾ ಗಾಂಧಿ ವಾದ್ರಾ**
> ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

'ರಾಷ್ಟ್ರೀಯ ರೈಲು ಸಂರಕ್ಷಣಾ ಕೋಶಕ್ಕೆ ಅನುದಾನ ಕಡಿತಗೊಳಿಸಿದ್ದೇಕೆ?'

ನವದೆಹಲಿ (ಪಿಟಿಐ): 'ರಾಷ್ಟ್ರೀಯ ರೈಲು ಸಂರಕ್ಷಣಾ ಕೋಶಕ್ಕೆ (ಆರ್‌ಆರ್‌ಎಸ್‌ಕೆ) ನೀಡುವ ಅನುದಾನದಲ್ಲಿ ಶೇ 79ರಷ್ಟು ಕಡಿತಗೊಳಿಸಲಾಗಿದೆ ಎಂದು ಸಿಎಜಿ ವರದಿ ಹೇಳುತ್ತದೆ. ಇಷ್ಟೊಂದು ಪ್ರಮಾಣದ ಅನುದಾನ ಕಡಿತ ಮಾಡಿದ್ದು ಏಕೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭಾನುವಾರ ಪ್ರಶ್ನಿಸಿದ್ದಾರೆ.

9ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 9

ಟಿವಿ, ರೇಡಿಯೊದಲ್ಲಿ ಪ್ರಕೃತಿ ವಿಕೋಪ ಮುನ್ಸೂಚನೆ ಶೀಘ್ರ

ನವದೆಹಲಿ (ಪಿಟಿಐ): ಪ್ರಕೃತಿ ವಿಕೋಪದ ಕುರಿತ ಎಚ್ಚರಿಕೆ ಸಂದೇಶವನ್ನು ಟಿವಿ ಪರದೆ ಮತ್ತು ರೇಡಿಯೊಗಳಲ್ಲಿ ಬಿತ್ತರಿಸುವ ಯೋಜನೆಗೆ ಶೀಘ್ರದಲ್ಲೇ ಚಾಲನೆ ನೀಡಲಾಗುವುದು ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ (ಎನ್‌ಡಿಎಂಎ) ಅಧಿಕಾರಿಗಳು ತಿಳಿಸಿದ್ದಾರೆ.

ಭಾರಿ ಮಳೆ, ಗುಡುಗು ಸಮೇತ ಬಿರುಗಾಳಿ ಮಳೆ, ಬಿಸಿ ಗಾಳಿ ಮತ್ತಿತರ ಹವಾಮಾನ ಬದಲಾವಣೆ ಕುರಿತು ಜನರಿಗೆ ಎಚ್ಚರಿಕೆ ನೀಡುವ ಸಲುವಾಗಿ ಮೊಬೈಲ್ ಸಂದೇಶಗಳನ್ನು ಕಳಿಸುವ ಯೋಜನೆಗೆ ಎನ್‌ಡಿಎಂಎ ಇತ್ತೀಚೆಗೆ ಚಾಲನೆ ನೀಡಿತ್ತು. ಇದು ಮೊದಲನೇ ಹಂತವಾಗಿದ್ದು, ಎರಡನೇ ಹಂತದಲ್ಲಿ ವಿಕೋಪ ಕುರಿತ ಎಚ್ಚರಿಕೆ ಸಂದೇಶಗಳನ್ನು ಟಿವಿ ಮತ್ತು ರೇಡಿಯೊಗಳಲ್ಲಿ ಬಿತ್ತರಿಸಲಾಗುವುದು. ಸಂದೇಶಗಳನ್ನು ಪ್ರಾದೇಶಿಕ ಭಾಷೆ ಸೇರಿ ಎರಡು ಭಾಷೆಗಳಲ್ಲಿ ಬಿತ್ತರಿಸಲಾಗುವುದು. ಈ ಯೋಜನೆಯು ವರ್ಷಾಂತ್ಯದಲ್ಲಿ ಜಾರಿಗೆ ಬರಲಿದೆ ಎಂದಿದ್ದಾರೆ.

ರೈತರಿಂದ ಖರೀದಿಸುವ ಹಾಲಿನ ದರ ಕಡಿತ ಸಲ್ಲದು: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರೈತರಿಂದ ಖರೀದಿಸುವ ಹಾಲಿಗೆ ನಿಗದಿಪಡಿಸಿರುವ ದರದಲ್ಲಿ ಯಾವುದೇ ಕಡಿತ ಮಾಡಬಾರದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ಕರ್ನಾಟಕ ಹಾಲು ಮಹಾ ಮಂಡಳದ (ಕೆಎಂಎಫ್) ವ್ಯವಸ್ಥಾಪಕ ನಿರ್ದೇಶಕರ ಜೊತೆ ಮಾತನಾಡಿದ ಮುಖ್ಯಮಂತ್ರಿ, 'ಏಕಾಏಕಿ ದರ ಕಡಿತ ಮಾಡುವಂತಿಲ್ಲ. ಸರ್ಕಾರದ ಜೊತೆ ಚರ್ಚಿಸಬೇಕು' ಎಂದಿದ್ದಾರೆ.

ಬೇಸಿಗೆ ಸಮಯದಲ್ಲಿ ಹಾಲಿನ ಉತ್ಪಾದನೆ ಕಡಿಮೆಯಾದ್ದರಿಂದ ಬೆಂಗಳೂರು ಹಾಲು ಉತ್ಪಾದಕರ ಒಕ್ಕೂಟ (ಬಮೂಲ್) ಏಪ್ರಿಲ್ 1ರಿಂದ ಮೇ 31ರವರೆಗೆ ಪ್ರತಿ ಲೀಟರ್ ಹಾಲಿಗೆ ₹2.85 ವಿಶೇಷ ಪ್ರೋತ್ಸಾಹ ಧನ ಘೋಷಿಸಿತ್ತು. ಈಗ ಹಾಲಿನ ಉತ್ಪಾದನೆ ಹೆಚ್ಚಳವಾಗಿದೆ. ಈ ಕಾರಣಕ್ಕೆ ಪ್ರೋತ್ಸಾಹಧನದಲ್ಲಿ ₹1.50 ಕಡಿತಗೊಳಿಸಿ ಆದೇಶ ಹೊರಡಿಸಲಾಗಿತ್ತು.



ಶ್ರೀ ಸಿದ್ದರಾಮಯ್ಯ – ಸನ್ಮಾನ್ಯ ಮುಖ್ಯಮಂತ್ರಿಗಳು
ಶ್ರೀ ಡಿ.ಕೆ. ಶಿವಕುಮಾರ್ – ಸನ್ಮಾನ್ಯ ಉಪ ಮುಖ್ಯಮಂತ್ರಿಗಳು
ಶ್ರೀ ಎಂ.ಬಿ.ಪಾಟೀಲ್ – ಬೃಹತ್ ಕೈಗಾರಿಕೆ ಸಚಿವರು
ಶ್ರೀ ರಾಮಲಿಂಗಾರೆಡ್ಡಿ – ಸಾರಿಗೆ, ಮುಜರಾಯಿ ಸಚಿವರು
ಶ್ರೀ ಈಶ್ವರ ಖಂಡ್ರೆ – ಅರಣ್ಯ ಸಚಿವರು
ಶ್ರೀ ಶರಣಬಸಪ್ಪ ದರ್ಶನಪುರ – ಸಣ್ಣ ಕೈಗಾರಿಕಾ ಸಚಿವರು
ಶ್ರೀ ಡಿ. ಕೆ. ಸುರೇಶ್ – ಸಂಸದರು
ಶ್ರೀ ಬಿ. ಶಿವಣ್ಣ – ಶಾಸಕರು, ಆನೇಕಲ್
ಶ್ರೀ ಎ. ಪ್ರಸಾದ್ – ಬಿಐಎ ಮತ್ತು ಬಿಜೆಎಲ್‌ಆರ್ ಅಧ್ಯಕ್ಷರು

ವಿಶ್ವ ಪರಿಸರ ದಿನಾಚರಣೆಯ ಶುಭಾಶಯಗಳು

BIA BJLR INDUSTRIES ASSOCIATION

ಬೊಮ್ಮಸಂದ್ರ ಇಂಡಸ್ಟ್ರೀಸ್ ಅಸೋಸಿಯೇಷನ್

World Environment Day

ಬೊಮ್ಮಸಂದ್ರ ಇಂಡಸ್ಟ್ರೀಸ್ ಅಸೋಸಿಯೇಷನ್ ಆಡಳಿತ ವರ್ಗ



ಶ್ರೀ ಸಂಪತ್‌ಕುಮಾರ್ – ಉಪಾಧ್ಯಕ್ಷರು
ಶ್ರೀ ಆರ್. ನರೇಂದ್ರಕುಮಾರ್ – ಕಾರ್ಯದರ್ಶಿ
ಶ್ರೀ ಎಂ. ಮುರುಳೀಧರ್ – ಜಂಟಿ ಕಾರ್ಯದರ್ಶಿ
ಶ್ರೀ ಸಂಜೀವ್ ಸಾವಂತ್ – ಖಜಾಂಚಿ
ಶ್ರೀ ರಾಜಶೇಖರ್ ಪಾಟೀಲ್ – ಜಂಟಿ ಖಜಾಂಚಿ

ಬೊಮ್ಮಸಂದ್ರ ಇಂಡಸ್ಟ್ರೀಸ್ ಅಸೋಸಿಯೇಷನ್ ನಿರ್ವಹಣಾ ಪರಿಷತ್ ಸದಸ್ಯರು



ಶ್ರೀ ಮಧುಸೂಧನ್ ಟಿ.ಪಿ.
ಶ್ರೀ ಜಿ. ಚಂದ್ರಶೇಖರ್
ಶ್ರೀ ಅಯೋ ಸಿಕ್ವೇರಾ
ಶ್ರೀ ನಾಗರಾಜ ಶೆಟ್ಟಿ
ಶ್ರೀ ಮಲ್ಲಿಕಾರ್ಜುನಪ್ಪ ಸಿ.ಎಸ್.
ಶ್ರೀ ವಾಸು
ಶ್ರೀ ಸತೀಶ್ ಕುಮಾರ್
ಶ್ರೀ ಬಿ.ಎಸ್. ನೀಲಕಂಠಯ್ಯ
ಶ್ರೀ ಜನಾರ್ಧನ್
ಅಶ್ವತ್ ಎಸ್ ಅನಜ
ಶ್ರೀ ಸುಧಾಕರ್ ಶೆಟ್ಟಿ
ಶ್ರೀ ಟಿ.ವಿ. ಶಿವಕುಮಾರನ್

ಸಾಮಾಜಿಕ ಚಟುವಟಿಕೆಗಳಲ್ಲಿ ಮುಂಚೂಣಿ ಬೊಮ್ಮಸಂದ್ರ ಕೈಗಾರಿಕಾ ಸಂಘ

BIA BJLR INDUSTRIES ASSOCIATION

ಬೊಮ್ಮಸಂದ್ರ ಕೈಗಾರಿಕ ಸಂಘವು ವಿವಿಧ ಚಟುವಟಿಕೆಗಳ ಮೂಲಕ ಪರಿಸರ ಸ್ನೇಹಿಯಾಗಿ ಕಾರ್ಯನಿರ್ವಹಿಸುತ್ತಿದೆ. ಕೈಗಾರಿಕ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಪರಿಸರ ಸಂರಕ್ಷಣೆಯ ಕಾರ್ಯದಲ್ಲಿ ತೊಡಗಿಕೊಂಡಿದೆ. ಉದ್ಯಮಿಗಳ ಕಷ್ಟ ಸುಖಗಳಿಗೆ ಸದಾ ಬೆನ್ನೆಲುಬಾಗಿ ಕಾರ್ಯನಿರ್ವಹಿಸುತ್ತಿರುವ ಬೊಮ್ಮಸಂದ್ರ ಕೈಗಾರಿಕ ಸಂಘವು ಇತರೆ ಕೈಗಾರಿಕ ಸಂಘಗಳಿಗೆ ಮಾದರಿಯಾಗಿದೆ.

ಬೊಮ್ಮಸಂದ್ರ ಕೆರೆಗೆ ಹೊಸ ರೂಪ

ಆನೇಕಲ್ ತಾಲ್ಲೂಕಿನ ಬೊಮ್ಮಸಂದ್ರದ (ಕಿತ್ತಗಾನಹಳ್ಳಿ ಕೆರೆ) ಸುಮಾರು 28 ಎಕರೆ ವಿಸ್ತೀರ್ಣದ ಕೆರೆಯನ್ನು ಪುನಶ್ಚೇತನಗೊಳಿಸಿ ಕೆರೆಗೆ ಕಾಯಕಲ್ಪ ನೀಡಿದೆ. ಕೈಗಾರಿಕ ಸಂಘವು ಸುಮಾರು 9ಕೋಟಿ ವೆಚ್ಚದಲ್ಲಿ ಕೆರೆಗೆ ಹೊಸ ರೂಪ ನೀಡಲು ನಿರ್ಧರಿಸಿ ಕಾರ್ಯರೂಪಕ್ಕೆ ತಂದಿದೆ. ಕೆರೆಯನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಿ ಕೆರೆಯ ಸುತ್ತ ವಾಕಿಂಗ್ ಟ್ರ್ಯಾಕ್ ನಿರ್ಮಿಸಿದೆ. ಕೆರೆಯ ಒಂದು ಭಾಗದಲ್ಲಿ ಮಿಯಾವಾಕಿ ಅರಣ್ಯವನ್ನು ನಿರ್ಮಿಸಿದೆ. ಪುಟಾಣಿಗಳಿಗೆ ಆಟವಾಡಲು ಪ್ರತ್ಯೇಕ ಪಾರ್ಕ್, ಕೆರೆಯ ನೀರನ್ನು ಜೈವಿಕವಾಗಿ ಶುದ್ಧಗೊಳಿಸುವ ನಿಟ್ಟಿನಲ್ಲಿ ಕೆರೆಯಲ್ಲಿ ಮೀನುಗಳನ್ನು ಬಿಡಲಾಗಿದೆ. ಕೆರೆಯ ಸುತ್ತಲೂ ಬೇಲಿ ಅಳವಡಿಸಿ ಕಲುಷಿತ ನೀರು ಕೆರೆಗೆ ಬಾರದಂತೆ ತಡೆಗಟ್ಟಿ ಸ್ವಚ್ಛತೆಗೆ ಒತ್ತು ನೀಡಿದ್ದು ಸುಂದರ ಕೆರೆಯಾಗಿದ್ದು ಕಣ್ಮನ ತಣಿಸುವಂತಿದೆ.





ಕೆರೆ ಅಭಿವೃದ್ಧಿ ಕಾಮಗಾರಿಗೆ ರಾಮಲಿಂಗಾ ರೆಡ್ಡಿ ಮತ್ತು ಡಾ. ದೇವಿ ಶೆಟ್ಟಿಯವರು ಚಾಲನೆ ನೀಡಿದ ಸಂದರ್ಭ.





ಅಭಿವೃದ್ಧಿಪಡಿಸಿರುವ ಬೊಮ್ಮಸಂದ್ರ ಕೆರೆಯ ನೋಟ



ಕೆರೆಯ ಸುತ್ತ ನಿರ್ಮಿಸಿರುವ ವಾಕಿಂಗ್ ಟ್ರ್ಯಾಕ್



ಕೆರೆಯ ಪಕ್ಕ ನಿರ್ಮಿಸಿರುವ ಮಿಯಾವಾಕಿ ಅರಣ್ಯ


ಘನತ್ಯಾಜ್ಯ ವಿಲೇವಾರಿ

ಬೊಮ್ಮಸಂದ್ರ ಕೈಗಾರಿಕ ಸಂಘ, ಸನ್‌ಸೇರಾ ಫೌಂಡೇಷನ್ ಮತ್ತು ಬೊಮ್ಮಸಂದ್ರ ಪುರಸಭಾ ಸಹಭಾಗಿತ್ವದಲ್ಲಿ 3.5ಕೋಟಿ ರೂ. ವೆಚ್ಚದಲ್ಲಿ ಘನತ್ಯಾಜ್ಯ ಸಂಸ್ಕರಣಾ ಘಟಕ ಸ್ಥಾಪಿಸಲಾಗಿದೆ. ಸ್ಥಳೀಯ ಕೈಗಾರಿಕೆಗಳಾದ ಸನ್‌ಸೇರಾ, ಯುನಿಲಿವರ್, ಟ್ರಾಕ್ಶ್ಯಾನ್, ಯುಕೆ ಗವರ್ನಮೆಂಟ್ ಸಹಭಾಗಿತ್ವದಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ.

ತ್ಯಾಜ್ಯದಿಂದ ಗೊಬ್ಬರ ತಯಾರಿಕೆ

ಕೈಗಾರಿಕ ಪ್ರದೇಶದ ಕಾರ್ಖಾನೆಗಳಿಂದ ತ್ಯಾಜ್ಯವನ್ನು ಟ್ರಾಕ್ಟರ್ ಮೂಲಕ ಸಂಗ್ರಹಿಸಿ ಈ ತ್ಯಾಜ್ಯದಿಂದ ಗೊಬ್ಬರ ತಯಾರಿಸಿ ರೈತರಿಗೆ ಉಚಿತವಾಗಿ ನೀಡಲಾಗುತ್ತಿದೆ.

ಕೊಳಚೆ ನೀರು ಸಂಸ್ಕರಣೆ



ಬೊಮ್ಮಸಂದ್ರ ಕೈಗಾರಿಕ ಸಂಘ ಪುರಸಭೆ ಸಹಕಾರದೊಂದಿಗೆ ಎಸ್‌ಟಿಪಿ ಘಟಕ ಸ್ಥಾಪಿಸಿ ಕೈಗಾರಿಕ ಪ್ರದೇಶದ ಸುತ್ತಮುತ್ತಲಿನ ಕೊಳಚೆ ನೀರನ್ನು ಶುದ್ಧೀಕರಣ ಮಾಡುವ ನಿಟ್ಟಿನಲ್ಲಿ ದಿಟ್ಟ ಹೆಜ್ಜೆ ಇಟ್ಟಿದೆ. ಅಂದಾಜು 3ಕೋಟಿ ರೂ. ವೆಚ್ಚದಲ್ಲಿ ಘಟಕವನ್ನು ಸ್ಥಾಪಿಸಿದ್ದು ಕಾರ್ಖಾನೆಗಳಲ್ಲಿ ಬಳಕೆಯಾಗುವ ತ್ಯಾಜ್ಯ ನೀರನ್ನು ಸಂಸ್ಕರಿಸಿ ಮರು ಬಳಕೆ ಮಾಡಲಾಗುತ್ತಿರುವುದು ಈ ಭಾಗದ ಪರಿಸರ ಸಂರಕ್ಷಣೆಯಲ್ಲಿ ಕೈಗಾರಿಕ ಸಂಘವು ಮಹತ್ವದ ಪಾತ್ರ ವಹಿಸಿದೆ.



"ಪರಿಸರ ಸಂರಕ್ಷಿಸಿದರೆ ಪರಿಸರ ನಮ್ಮನ್ನು ರಕ್ಷಿಸುತ್ತದೆ, ಮುಂದಿನ ಪೀಳಿಗೆ ನೆಮ್ಮದಿಯ ಜೀವನ ನಡೆಸಲು ಸಾಧ್ಯವಾಗುತ್ತದೆ. ಭವಿಷ್ಯಕ್ಕಾಗಿ ಪರಿಸರವನ್ನು ಸಂರಕ್ಷಿಸಲು ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದಲ್ಲಿ ಪರಿಸರ ಸಂರಕ್ಷಣೆಗೆ ಪ್ರಥಮ ಆದ್ಯತೆ ನೀಡುವುದು ಕೈಗಾರಿಕ ಸಂಘದ ಗುರಿಯಾಗಿದೆ. ಮುಂದಿನ ಪೀಳಿಗೆಗೆ ಪರಿಸರವನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಪ್ರತಿಯೊಬ್ಬರು ಗಿಡ ನೆಟ್ಟು ಬೆಳೆಸುವ ಮೂಲಕ ಪರಿಸರಕ್ಕೆ ಕೊಡುಗೆ ನೀಡಬೇಕು.

ಎ.ಪ್ರಸಾದ್, ಅಧ್ಯಕ್ಷರು, ಬೊಮ್ಮಸಂದ್ರ ಕೈಗಾರಿಕ ಸಂಘ

ಉಚಿತ ಆಂಬ್ಯುಲೆನ್ಸ್‌ಸೇವೆ



ಬೊಮ್ಮಸಂದ್ರ ಕೈಗಾರಿಕಾ ಸಂಘ ಮತ್ತು ಒನ್ ಹೆಲ್ತ್ ಆರ್ಗನೈಸೇಷನ್ ಸಹಭಾಗಿತ್ವದಲ್ಲಿ ಕಾರ್ಮಿಕರಿಗೆ ಉಚಿತ ಆಂಬ್ಯುಲೆನ್ಸ್‌ಸೇವೆ ಒದಗಿಸಲಾಗುತ್ತಿದೆ.



ಕುಡಿಯುವ ನೀರಿನ ಘಟಕ

ಬೊಮ್ಮಸಂದ್ರ ಕೈಗಾರಿಕ ಸಂಘ ಮತ್ತು ಸನ್‌ಸೇರಾ ಫೌಂಡೇಷನ್ ಸಹಭಾಗಿತ್ವದಲ್ಲಿ ಬೊಮ್ಮಸಂದ್ರ ಪುರಸಭೆ ವ್ಯಾಪ್ತಿಯ ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ಘಟಕಗಳನ್ನು ನಿರ್ಮಿಸಿಕೊಡಲಾಗಿದೆ.

ಹಸಿರೀಕರಣ

ಗಿಡಗಳನ್ನು ನೆಡುವುದರ ಜೊತೆಗೆ ಅವುಗಳನ್ನು ಕಾಪಾಡುವುದು ಒಂದು ಜವಬ್ದಾರಿಯಾಗಿದೆ. ಈ ನಿಟ್ಟಿನಲ್ಲಿ ಬೊಮ್ಮಸಂದ್ರ ಕೈಗಾರಿಕ ಸಂಘವು 2ಸಾವಿರ ಗಿಡಗಳನ್ನು ನೆಟ್ಟು ಕಾಪಾಡುತ್ತಿದೆ. ಪ್ರತಿ ವರ್ಷ ಐದು ಸಾವಿರ ಗಿಡಗಳನ್ನು ನೆಡುವ ಯೋಜನೆ ರೂಪಿಸಲಾಗಿದೆ. ಇದು ಕೈಗಾರಿಕ ಸಂಘದ ಪರಿಸರ ಸ್ನೇಹಿ ಕಾರ್ಯಕ್ಕೆ ಸಾಕ್ಷಿಯಾಗಿದೆ.

ಕ್ರೀಡಾಂಗಣ

ಕಾರ್ಮಿಕರು ಮತ್ತು ಸ್ಥಳೀಯ ಯುವಕರಲ್ಲಿ ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವ ದಿಸೆಯಲ್ಲಿ ಕ್ರೀಡಾಂಗಣ ನಿರ್ಮಿಸಿ ವಾಲಿಬಾಲ್, ಬ್ಯಾಸ್ಕಟ್ ಬಾಲ್, ಕಬಡ್ಡಿ ಕೋರ್ಟ್ ನಿರ್ಮಿಸುವ ಗುರಿ ಹೊಂದಲಾಗಿದೆ.

ಬೈಯಪ್ಪನಹಳ್ಳಿ ಟರ್ಮಿನಲ್‌ನಿಂದ ಭಾನುವಾರ ನಿಗದಿತ ಸಮಯಕ್ಕೂ ಮೊದಲೇ ಹೊರಟ ಮೂರು ರೈಲುಗಳು

ರೈಲುಗಳು ರದ್ದು: ಕಾರ್ಮಿಕರ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಡಿಶಾದ ರೈಲು ದುರಂತದಿಂದಾಗಿ ಆ ಮಾರ್ಗದಲ್ಲಿ ತೆರಳಬೇಕಿದ್ದ ಹಲವು ರೈಲುಗಳ ಸಂಚಾರ ರದ್ದತಿಯಿಂದಾಗಿ ನಗರದ ಬೈಯಪ್ಪನಹಳ್ಳಿ ಸರ್. ಎಂ ವಿಶ್ವೇಶ್ವರಯ್ಯ ಟರ್ಮಿನಲ್‌ನಲ್ಲಿ ಉತ್ತರ ಭಾರತದ ನೂರಾರು ಪ್ರಯಾಣಿಕರು ಸಿಲುಕಿದ್ದಾರೆ.

ಭಾನುವಾರ ಮಧ್ಯಾಹ್ನ ದವರೆಗೂ ಬೈಯಪ್ಪನಹಳ್ಳಿ ಟರ್ಮಿನಲ್‌ನಲ್ಲಿಯೇ ಸಾವಿರಾರು ಪ್ರಯಾಣಿಕರು ಸಂಕಷ್ಟಕ್ಕೆ ಸಿಲುಕಿದ್ದರು. ಕೆಲವು ರೈಲುಗಳನ್ನು ಪರ್ಯಾಯ ಮಾರ್ಗದಲ್ಲಿ ಕಳುಹಿಸಲಾಯಿತು.

ಈ ರೈಲುಗಳಲ್ಲಿ ಒಡಿಶಾ, ಜಾರ್ಖಂಡ್, ಬಿಹಾರ, ಪಶ್ಚಿಮ ಬಂಗಾಳ ಸೇರಿದಂತೆ ಹಲವು ರಾಜ್ಯಗಳ ವಲಸೆ ಕಾರ್ಮಿಕರು ಪ್ರಯಾಣ ಬೆಳೆಸಿದರು. 1,500ಕ್ಕೂ ಹೆಚ್ಚು ಪ್ರಯಾಣಿಕರು ತೊಂದರೆಗೆ ಸಿಲುಕಿದ್ದರು ಎಂದು ರೈಲ್ವೆ ಅಧಿಕಾರಿಗಳು ಹೇಳಿದರು.

ರೈಲು ಸಂಖ್ಯೆ 22305 ಎಸ್.ಎಂ.ವಿ.ಟಿ ಬೆಂಗಳೂರು–ಜೆಸಿಡಿಯೊ ಎಕ್ಸ್‌ಪ್ರೆಸ್, ರೈಲು ಸಂಖ್ಯೆ 12864 ಎಸ್.ಎಂ.ವಿ.ಟಿ–ಹೌರಾ ರೈಲು, ರೈಲು ಸಂಖ್ಯೆ 12246 ಎಸ್.ಎಂ.ವಿ.ಟಿ ಬೆಂಗಳೂರು–ಹೌರಾ ಎಕ್ಸ್‌ಪ್ರೆಸ್ ರೈಲುಗಳು ಭಾನುವಾರ ನಿಗದಿತ ವೇಳೆಗೂ ಮೊದಲೇ ಹೊರಟವು. ಎರಡು ದಿನದಿಂದ ಸಂಕಷ್ಟಕ್ಕೆ ಸಿಲುಕಿದ್ದ ನೂರಾರು ಪ್ರಯಾಣಿಕರು ಇವುಗಳಲ್ಲಿ ತೆರಳಿದರು.

ಊಟದ ವ್ಯವಸ್ಥೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ಮೇರೆಗೆ ರೈಲ್ವೆ ಟರ್ಮಿನಲ್‌ನಲ್ಲಿ ಸಿಲುಕಿದ್ದವರಿಗೆ ಕಾರ್ಮಿಕ ಇಲಾಖೆ ಅಧಿಕಾರಿಗಳು ಊಟ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿದ್ದರು.

ಇಲಾಖೆ ಜೊತೆಗೆ ಸ್ವಯಂ ಸೇವಾ ಸಂಸ್ಥೆಗಳು ಕೈಜೋಡಿಸಿದ್ದವು. ಹೆಚ್ಚುವರಿಯಾಗಿ ಮೊಬೈಲ್ ಶೌಚಾಲಯದ ವ್ಯವಸ್ಥೆ ಮಾಡಲಾಗಿತ್ತು. ರಾತ್ರಿ ವೇಳೆ ಆತಂಕದಿಂದಲೇ ನೂರಾರು ಕಾರ್ಮಿಕರು ಕಾಲ ಕಳೆದಿದ್ದರು.

ಬೆಂಗಳೂರಿಗೆ ಕೆಲಸಕ್ಕೆ ಬಂದಿದ್ದ ಉತ್ತರ ಭಾರತದ ವಲಸೆ ಕಾರ್ಮಿಕರು ಊರಿಗೆ ಮರಳಲು ನಿಲ್ದಾಣಕ್ಕೆ ಬಂದಿದ್ದರು. ಕೆಲವರು ಮುಂಗಡ ಟಿಕೆಟ್ ಕಾಯ್ದಿರಿಸಿದ್ದರು. ಎಲ್ಲವನ್ನೂ ಪರಿಶೀಲಿಸಿ ರೈಲು ವ್ಯವಸ್ಥೆ ಮಾಡಿ ಕಳುಹಿಸಲಾಗಿದೆ. ಗುವಾಹಟಿಗೆ ಹೋಗುವ ಕಾರ್ಮಿಕರು ನಿಲ್ದಾಣದಲ್ಲೇ ಉಳಿದಿದ್ದು ಅವರನ್ನೂ ಕಳುಹಿಸಿಕೊಡಲಾಗುವುದು ಎಂದು ರೈಲ್ವೆ ಪೊಲೀಸರು ತಿಳಿಸಿದ್ದಾರೆ.

ಬೈಯಪ್ಪನಹಳ್ಳಿ ಟರ್ಮಿನಲ್‌ನಲ್ಲೂ ಸಹಾಯವಾಣಿ ತೆರೆಯಲಾಗಿತ್ತು. ದುರಂತಕ್ಕೀಡಾದ ಬೆಂಗಳೂರು–ಹೌರಾ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್‌ನಲ್ಲಿ ತೆರಳಿದ್ದವರ ಬಗ್ಗೆ ವಿಚಾರಿಸಲು ನೂರಾರು ಮಂದಿ ಕರೆ ಮಾಡಿದ್ದರು. ಅಲ್ಲಿನ ರೈಲ್ವೆ ಇಲಾಖೆ ಅಧಿಕಾರಿಗಳನ್ನು ಸಂಪರ್ಕಿಸಿ ಪ್ರಯಾಣಿಕರ ಸುರಕ್ಷತೆಯ ಬಗ್ಗೆ ಮಾಹಿತಿ ನೀಡಲಾಗಿತ್ತು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.




ಬೈಯಪ್ಪನಹಳ್ಳಿಯ ರೈಲ್ವೆ ಟರ್ಮಿನಲ್‌ನಲ್ಲಿ ಸಿಲುಕಿದ್ದ ಉತ್ತರ ಭಾರತದ ಪ್ರಯಾಣಿಕರಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು (ಎಡ ಚಿತ್ರ). ಟರ್ಮಿನಲ್ ಆವರಣದಲ್ಲಿಯೇ ಉಳಿದಿದ್ದ ಪ್ರಯಾಣಿಕರು
ಪ್ರಜಾವಾಣಿ ಚಿತ್ರ/ಎಸ್.ಕೆ.ದಿನೇಶ್

ಬೆಂಗಳೂರು ಹೋಟೆಲ್‌ನಲ್ಲಿದ್ದ ಕಾರ್ಮಿಕ ಮೃತ

ಒಡಿಶಾದ ಅಪಘಾತದಲ್ಲಿ ಬೆಂಗಳೂರು ಹೋಟೆಲ್ ಕಾರ್ಮಿಕ, ಪಶ್ಚಿಮ ಬಂಗಾಳದ ಜಲ್ಪೈಗುರಿಯ ನಿವಾಸಿ ಸಾಗರ್ ಖೆರಿಯಾ (30) ಮೃತಪಟ್ಟಿದ್ದಾರೆ. ಇವರು ಊರಿಗೆ ಬೆಂಗಳೂರು– ಹೌರಾ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್‌ನಲ್ಲಿ ಪ್ರಯಾಣಿಸುತ್ತಿದ್ದರು. ಇವರೊಂದಿಗೆ ಜಲ್ಪೈಗುರಿಯ 13 ಮಂದಿ ಇದ್ದರು. ಧರ್ಮನಾಥ್ ಸಿಂಗ್ (19) ಹಾಗೂ ಅಮಾನ್ (24) ಗಾಯಗೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

‘ಮಾನವೀಯ ಕಾಳಜಿ ಶ್ಲಾಘನೀಯ’

‘ಬೈಯಪ್ಪನಹಳ್ಳಿ ರೈಲು ನಿಲ್ದಾಣದಲ್ಲಿ ಸಿಲುಕಿದ್ದ 1,500 ಕಾರ್ಮಿಕರಿಗೆ ಆಹಾರ, ಕುಡಿಯುವ ನೀರು, ಸಂಚಾರ ಶೌಚಾಲಯ ಹಾಗೂ ವೈದ್ಯಕೀಯ ಸೌಲಭ್ಯ ಒದಗಿಸುವ ಮೂಲಕ ಸಂಕಷ್ಟದಲ್ಲಿದ್ದವರ ನೆರವಿಗೆ ನಿಂತಿದ್ದೇವೆ. ನಮ್ಮ ಈ ಕಾರ್ಯಕ್ಕೆ ಜೆಎಂಸಿ, ಕೆ2ಕೆ, ಡಿಮಾರ್ಟ್, ಐಡಿಸಿ, ಕೆಎಂಎಫ್ ಸೇರಿದಂತೆ ಹಲವು ಸಂಸ್ಥೆಗಳು ಕೈಜೋಡಿಸಿದ್ದವು. ಮರ್ಸಿ ಫೌಂಡೇಷನ್, ತೌಸೀಫ್, ತನ್ವೀರ್, ಕ್ಲಿಫ್ಟಿನ್ ಹಾಗೂ ಮೈತ್ರಿ ತಂಡದವರು ಸ್ವಯಂ ಸೇವಕರಾಗಿ ಕೆಲಸ ಮಾಡಿದ್ದಾರೆ. ಅವರಿಗೆ ಧನ್ಯವಾದಗಳು. ಇಂಥ ಸಂಕಷ್ಟದ ಸಮಯದಲ್ಲಿ ತಾವು ತೋರಿದ ಮಾನವೀಯ ಕಾಳಜಿ ಶ್ಲಾಘನೀಯ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಎಸ್‌.ಆರ್. ಬೊಮ್ಮಾಯಿ ಜನ್ಮ ಶತಮಾನೋತ್ಸವ

ಬೆಂಗಳೂರು: ಮಾಜಿ ಮುಖ್ಯಮಂತ್ರಿ ದಿವಂಗತ ಎಸ್.ಆರ್.ಬೊಮ್ಮಾಯಿ ಅವರ ಜನ್ಮ ಶತಮಾನೋತ್ಸವದ ಉದ್ಘಾಟನೆ ನಗರದ ಗಾಂಧಿ ಭವನದಲ್ಲಿ ಮಂಗಳವಾರ (ಜೂನ್ 6) ಸಂಜೆ 5 ಗಂಟೆಗೆ ನಡೆಯಲಿದೆ.

ಈ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ಮಾಹಿತಿ ನೀಡಿರುವ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ‘ನಮ್ಮ ತಂದೆ ದಿವಂಗತ ಎಸ್.ಆರ್. ಬೊಮ್ಮಾಯಿ ಅವರ 99ನೇ ಜನ್ಮ ದಿನಾಚರಣೆಯನ್ನು ಶ್ರೀಮತಿ ಗಂಗಮ್ಮ ಸೋಮಪ್ಪ ಬೊಮ್ಮಾಯಿ ಎಜುಕೇಷನ್ ಮತ್ತು ವೆಲ್‌ಫೇರ್ ಫೌಂಡೇಶನ್‌ನಿಂದ ಹಮ್ಮಿಕೊಳ್ಳಲಾಗಿದೆ. ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನಿಧ್ಯದಲ್ಲಿ ಬಿಜೆಪಿ ರಾಷ್ಟ್ರೀಯ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ’ ಎಂದು ತಿಳಿಸಿದ್ದಾರೆ.

‘ಸರ್ಕಾರಿ ಆದೇಶಗಳಲ್ಲಿ ತಪ್ಪಾಗಿ ಕನ್ನಡ ಬಳಕೆ’

ಕಸಾಪ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ ಬೇಸರ ● ‘ಮಾಧ್ಯಮ ಭಾಷಾ ದೀಪಿಕೆ’ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರಿ ಆದೇಶಗಳಲ್ಲಿ ಈಗಲೂ ಕನ್ನಡ ಭಾಷೆಯನ್ನು ತಪ್ಪಾಗಿ ಬಳಸಲಾಗುತ್ತಿದೆ. ಆದ್ದರಿಂದ, ಮೊದಲು ಸರ್ಕಾರಿ ಅಧಿಕಾರಿಗಳಿಗೆ ವ್ಯಾಕರಣ ಕಲಿಸಬೇಕು’ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ ಹೇಳಿದರು.

ಮಾಧ್ಯಮ ಚಿಂತನ ವೇದಿಕೆ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಪದ್ಮರಾಜ ದಂಡಾವತಿ ಅವರ ‘ಮಾಧ್ಯಮ ಭಾಷಾ ದೀಪಿಕೆ’ ಕೃತಿ ಬಿಡುಗಡೆ ಮಾಡಿ, ಮಾತನಾಡಿದರು.

‘ವಿಧಾನಸೌಧ, ವಿಕಾಸಸೌಧ ಹಾಗೂ ಬಹುಮಹಡಿ ಕಟ್ಟಡದಲ್ಲಿನ ಅಧಿಕಾರಿಗಳಿಗೆ ವ್ಯಾಕರಣದ ಪುಸ್ತಕಗಳನ್ನು ನೀಡಬೇಕು. ‘ಸರ್ಕಾರವು ಆದೇಶ ಹೊರಡಿಸಲಾಗಿದೆ’ ಎಂದು ಬರೆಯುತ್ತಾರೆ. ಇದನ್ನು ಓದಿ ಕಕ್ಕಾಬಿಕ್ಕಿ ಆಗಬೇಕು. 4ನೇ ತರಗತಿಯ ವ್ಯಾಕರಣವೂ ಅವರಿಗೆ ತಿಳಿದಿರುವುದಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

ಬಹುಭಾಷಾ ವಿದ್ವಾಂಸ ಮಲ್ಲೇಪುರಂ ಜಿ.ವೆಂಕಟೇಶ್, ‘ಪ್ರತಿ ಕ್ಷೇತ್ರಕ್ಕೂ ಒಂದು ಭಾಷಾ ದೀಪಿಕೆ ಅಗತ್ಯ. ಪತ್ರಿಕಾ ಸಮೂಹದಲ್ಲಿದ್ದ ಅನೇಕರು ಭಾಷೆ ಬಳಕೆ ಹಾಗೂ ಪ್ರಯೋಗವನ್ನು ತಿಳಿಸಿಕೊಟ್ಟಿದ್ದಾರೆ. ಈಗ ಬರವಣಿಗೆಯಲ್ಲಿ ವ್ಯಾಕರಣ ಸ್ಪಷ್ಟತೆ ಇಲ್ಲವಾಗಿದೆ. ಆದ್ದರಿಂದ ಎಲ್ಲಾ ಮಾಧ್ಯಮ ಸಂಸ್ಥೆಗಳು ಪತ್ರಕರ್ತರಿಗೆ ‘ಮಾಧ್ಯಮ ಭಾಷಾ ದೀಪಿಕೆ’, ತೀ.ನಂ. ಶ್ರೀಕಂಠಯ್ಯ ಅವರ ‘ಕನ್ನಡ ಮಧ್ಯಮ ವ್ಯಾಕರಣ’ ಹಾಗೂ ‘ಕನ್ನಡ ನಿಘಂಟು’ ನೀಡಬೇಕು. ವ್ಯಾಕರಣ ನಮ್ಮ ಸಂಗಾತಿಯಾಗಬೇಕು’ ಎಂದರು.

ಕೃತಿಯ ಲೇಖಕ ಪದ್ಮರಾಜ ದಂಡಾವತಿ, ‘ಜನರಿಗೆ ಮಾದರಿ ಹಾಗೂ ಸರಿಯಾದ ಮಾಹಿತಿ ನೀಡುವ ಜವಾಬ್ದಾರಿಯನ್ನು ಪತ್ರಿಕೆಗಳು ಹೊಂದಿವೆ. ಪತ್ರಿಕೋದ್ಯಮ ನನಗೆ ಎಲ್ಲವನ್ನೂ ನೀಡಿದೆ. ಈ ಕ್ಷೇತ್ರಕ್ಕೆ ಏನನ್ನಾದರೂ ನೀಡಬೇಕು ಅಂದುಕೊಂಡು ಈ ಕೃತಿ ರಚಿಸಿದೆ’ ಎಂದು ಹೇಳಿದರು.

ಕೃತಿಯ ಮೊದಲ ಪ್ರತಿಯನ್ನು ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್‌ನ ನಿರ್ದೇಶಕರಾದ ಕೆ.ಎನ್. ಶಾಂತ ಕುಮಾರ್ ಸ್ವೀಕರಿಸಿದರು.



ಕಾರ್ಯಕ್ರಮದಲ್ಲಿ ಮಲ್ಲೇಪುರಂ ಜಿ.ವೆಂಕಟೇಶ್ ಹಾಗೂ ಮನು ಬಳಿಗಾರ ಅವರು ‘ಮಾಧ್ಯಮ ಭಾಷಾ ದೀಪಿಕೆ’ ಕೃತಿ ಬಿಡುಗಡೆ ಮಾಡಿದರು. ಕರ್ನಾಟಕ ಉನ್ನತ ಶಿಕ್ಷಣ ಪರಿಷತ್ತಿನ ಸದಸ್ಯೆ ಪ್ರೊ.ಉಷಾರಾಣಿ ಮತ್ತು ಪದ್ಮರಾಜ ದಂಡಾವತಿ ಇದ್ದಾರೆ ಪ್ರಜಾವಾಣಿ ಚಿತ್ರ

ಪರಿಸರ ಜಾಗೃತಿ ವಿಡಿಯೊ ಅನಾವರಣ ಇಂದು

ಪ್ರಜಾವಾಣಿ ವಾರ್ತೆ



ವಿನಯ್ ಶಿಂಧೆ

ಬೆಂಗಳೂರು: ನಗರದ ವಿಮೊವ್ ಫೌಂಡೇಷನ್ ಸೋಮವಾರ ಬೆಳಿಗ್ಗೆ 11ಕ್ಕೆ ನ್ಯೂ ಹಾರಿಜನ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ‘ಆಲ್ಟರ್ನೆಟಿವ್ 23’ (ಪರ್ಯಾಯ) ಶೀರ್ಷಿಕೆಯಡಿ ಪರಿಸರ ಸಂರಕ್ಷಣೆ ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡಿದೆ.

ಫೌಂಡೇಷನ್‌ನ ಸಂಸ್ಥಾಪಕ ವಿನಯ್ ಶಿಂಧೆ ನೇತೃತ್ವದಲ್ಲಿ ಕಾರ್ಯಕ್ರಮಗಳು ನಡೆಯಲಿವೆ. ಆನ್‌ಲೈನ್‌ನಲ್ಲಿಯೂ ನೇರ ಪ್ರಸಾರ ಇರಲಿದೆ. ಪರಿಸರ ಜಾಗೃತಿಗೆ ಸಂಬಂಧಿಸಿದ 6 ನಿಮಿಷಗಳ ವಿಡಿಯೊವನ್ನು ಕಾರ್ಯಕ್ರಮದಲ್ಲಿ ಅನಾವರಣ ಮಾಡಲಾಗುತ್ತದೆ. ಈ ವಿಡಿಯೊ ನಮ್ಮ ಮೆಟ್ರೊ ರೈಲು ನಿಲ್ದಾಣ ಹಾಗೂ ನಮ್ಮ ಮೆಟ್ರೊ ರೈಲುಗಳ ಎಲ್‌ಇಡಿ ಪರದೆಗಳ ಮೇಲೆ ಪ್ರಸಾರ ಆಗಲಿದೆ.

ಸಂಗೀತಗಾರ್ತಿ ಆಮ್ರಪಾಲಿ ಶಿಂಧೆ ಗಾಯನದ ಮೂಲಕ ಭೂಮಿಗೆ ಗೌರವ ಸಮರ್ಪಿಸಲಿದ್ದಾರೆ. ಉದ್ಘಾಟನಾ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳ ಪ್ರಮುಖರು ಮಾತನಾಡಲಿದ್ದಾರೆ. ಸೆಲೆಬ್ರಿಟಿಗಳು ಪಾಲ್ಗೊಳ್ಳುತ್ತಾರೆ. ಯುವಜನರಲ್ಲಿ ಪರಿಸರ ಕಾಳಜಿ ಮೂಡಿಸುವುದು, ದೇಶೀ ಉತ್ಪನ್ನಗಳನ್ನು ಪ್ರೋತ್ಸಾಹಿಸುವುದು ಕಾರ್ಯಕ್ರಮದ ಉದ್ದೇಶ’ ಎಂದು ವಿನಯ್ ಶಿಂಧೆ ತಿಳಿಸಿದ್ದಾರೆ.

‘ಪರಿಸರಕ್ಕೆ ಹಾನಿಕಾರವಾದ ಪ್ಲಾಸ್ಟಿಕ್‌ಗೆ ಪರ್ಯಾಯವಾಗಿ ದೊರಕುವ ವಸ್ತುಗಳನ್ನು ಬಳಸಬೇಕು’ ಎಂದು ಹೇಳಿದ್ದಾರೆ.

ಶೇಷಾದ್ರಿ ರಸ್ತೆಯಲ್ಲಿ ಅವಘಡ; ಕೆಎಸ್‌ಆರ್‌ಟಿಸಿ ಚಾಲಕನ ಬಂಧನ

ಬಸ್ ಹರಿದು ಮಹಿಳಾ ಅಧಿಕಾರಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೇಷಾದ್ರಿ ರಸ್ತೆಯಲ್ಲಿ ಭಾನುವಾರ ಮಧ್ಯಾಹ್ನ ಕೆಎಸ್‌ಆರ್‌ಟಿಸಿ ಬಸ್ ಚಕ್ರ ತಲೆ ಮೇಲೆ ಹರಿದು, ಹೆಬ್ಬಾಳ ಕೆಂಪಾಪುರದ ನಿವಾಸಿ ಲತಾ (55) ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

'ಇವರು ಪ್ರಧಾನ ಮಹಾಲೇಖಪಾಲರ (ಎ.ಜಿ) ಕಚೇರಿಯಲ್ಲಿ ಗೆಜೆಟೆಡ್ ಅಧಿಕಾರಿಯಾಗಿದ್ದರು. ಎಂಜಿನಿಯರ್ ಆಗಿದ್ದ ಪತಿ ಅನಂತ ರಾಮಕೃಷ್ಣ ಜೊತೆ ದ್ವಿಚಕ್ರವಾಹನದಲ್ಲಿ ಹೊರಟಿದ್ದರು' ಎಂದು ಉಪ್ಪಾರಪೇಟೆ ಸಂಚಾರ ಪೊಲೀಸರು ಹೇಳಿದರು.

'ಇಬ್ಬರೂ ಬಟ್ಟೆತರಲೆಂದು ಗಾಂಧಿನಗರದಲ್ಲಿರುವ ಮಳಿಗೆಗೆ ಹೊರಟಿದ್ದರು. ಆನಂದರಾವ್ ವೃತ್ತದ ಡೌನ್ ರ್‍ಯಾಂಪ್ ಸರ್ವಿಸ್ ರಸ್ತೆ ಮೂಲಕ ಸಾಗಿ ಶೇಷಾದ್ರಿ ರಸ್ತೆಗೆ ಸೇರಿದ್ದರು. ಚಿಂತಾಮಣಿಗೆ ಹೊರಟಿದ್ದ ಕೆಎಸ್‌ಆರ್‌ಟಿಸಿ ಬಸ್, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಮೇಲ್ಸೇತುವೆಯಿಂದ ರಸ್ತೆಗೆ ಇಳಿಯುತ್ತಿದ್ದಂತೆ, ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿತ್ತು. ಕೆಳಗೆ ಬಿದ್ದ ಲತಾ ಅವರ ತಲೆ ಮೇಲೇ ಬಸ್ಸಿನ ಚಕ್ರ ಹರಿದಿದ್ದು, ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ' ಎಂದು ಪೊಲೀಸರು ತಿಳಿಸಿದರು.

'ಬಸ್ (ಕೆಎ 40 ಎಫ್ 932) ಚಾಲಕನ ನಿರ್ಲಕ್ಷ್ಯ ಹಾಗೂ ಅತೀ ವೇಗದ ಚಾಲನೆಯಿಂದ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಚಾಲಕ ವಿಶ್ವನಾಥ್ ಅವರನ್ನು ಬಂಧಿಸಿ, ಬಸ್ ಜಪ್ತಿ ಮಾಡಲಾಗಿದೆ' ಎಂದು ತಿಳಿಸಿದರು.

ಸಂಚಾರ ದಟ್ಟಣೆ: ಅಪಘಾತದಿಂದಾಗಿ ಶೇಷಾದ್ರಿ ರಸ್ತೆಯಲ್ಲಿ ಕೆಲಹೊತ್ತು ವಾಹನಗಳ ಸಂಚಾರ ಬಂದ್ ಮಾಡಲಾಗಿತ್ತು. ಮೆಜೆಸ್ಟಿಕ್‌ನಿಂದ ಕೆ.ಆರ್. ವೃತ್ತದತ್ತ ಹೊರಟಿದ್ದ ಬಸ್‌ಗಳು ಮೇಲ್ಸೇತುವೆ ಮೇಲೆ ನಿಂತುಕೊಂಡಿದ್ದು, ವಾಹನಗಳ ದಟ್ಟಣೆ ಉಂಟಾಯಿತು. ಮೃತದೇಹ ಹಾಗೂ ದ್ವಿಚಕ್ರ ವಾಹನ–ಬಸ್ ತೆರವು ಮಾಡಿದ ನಂತರವೇ ಸಂಚಾರ ಸ್ಥಿತಿ ಯಥಾಸ್ಥಿತಿಗೆ ಮರಳಿತು.

ಭೀಕರ ಅಪಘಾತ ನಾಲ್ವರು ಸಾವು

ಅಪರಾಧ ಸುದ್ದಿ

ನಾಗಮಂಗಲ: ತಾಲ್ಲೂಕಿನ ತಿರುಮಲಾಪುರ ಗ್ರಾಮದ ಬಳಿ ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಭಾನುವಾರ ಬೆಳಗಿನ ಜಾವ 4.30ರ ಸುಮಾರಿಗೆ ವೇಗವಾಗಿ ಚಲಿಸುತ್ತಿದ್ದ ಕಾರೊಂದು ಲಾರಿಗೆ ಹಿಂಬದಿಯಿಂದ ಡಿಕ್ಕಿ ಹೊಡೆದಿದ್ದು, ಕಾರಿನಲ್ಲಿದ್ದ ನಾಲ್ವರು ಯುವಕರು ಮೃತಪಟ್ಟಿದ್ದಾರೆ.

ಮಾಗಡಿ ತಾಲ್ಲೂಕಿನ ಲಕ್ಕೇನಹಳ್ಳಿಯ ಹೇಮಂತ್ ಕುಮಾರ್ (22), ಶಿವಮೊಗ್ಗದ ಎನ್.ಎಂ.ಧೀರಜ್ (22), ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ಚಂಡೂರಪುರ ಗ್ರಾಮದ ಪಿ.ಯೋಗೇಶ್ ಗೌಡ(23), ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕಂಪನಹಳ್ಳಿಯ ಕೆ.ಶರತ್ (22) ಮೃತಪಟ್ಟವರು. ಇವರು ಶರತ್ ಜನ್ಮದಿನದ ಹಿನ್ನೆಲೆಯಲ್ಲಿ ಬೆಂಗಳೂರಿನಿಂದ ಹಾಸನದ ಕಡೆಗೆ ಸಾಗುತ್ತಿದ್ದರು ಎಂಬ ಮಾಹಿತಿ ಲಭಿಸಿದೆ.

ಡೇಟಿಂಗ್ ಆ್ಯಪ್ ಸ್ನೇಹ: ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನ್‌ಲೈನ್ ಡೇಟಿಂಗ್ ಆ್ಯಪ್‌ವೊಂದರಲ್ಲಿ ಪರಿಚಯವಾದ ಜೆ.ಪಿ.ನಗರದ 5ನೇ ಹಂತದ ನಿವಾಸಿಯಾಗಿರುವ ಮಹಿಳೆಯೊಬ್ಬರು, ವ್ಯಕ್ತಿಯೊಬ್ಬರನ್ನು ಮನೆಗೆ ಕರೆದು ಸುಲಿಗೆ ಮಾಡಿದ್ದು, ಈ ಬಗ್ಗೆ ಪುಟ್ಟೇನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ವೈಟ್‌ಫೀಲ್ಡ್ ನಿವಾಸಿ ದೂರು ನೀಡಿದ್ದಾರೆ. ಇವರು ಡೇಟಿಂಗ್ ಆ್ಯಪ್‌ನಲ್ಲಿ ಖಾತೆ ತೆರೆದಿದ್ದರು. ಅಲ್ಲಿಯೇ ಮಹಿಳೆ ಪರಿಚಯವಾಗಿತ್ತು. ಇಬ್ಬರೂ ಚಾಟಿಂಗ್ ಮಾಡಲಾರಂಭಿಸಿದ್ದರು. 'ಪತಿ ದುಬೈನಲ್ಲಿದ್ದಾರೆ. ಸಂಗಾತಿ ಬೇಕಾಗಿದೆ. ಮನೆಗೆ ಬಾ' ಎಂದು ಮಹಿಳೆ ಸಂದೇಶ ಕಳುಹಿಸಿದ್ದರು. ನಂಬಿದ್ದ ದೂರುದಾರ ಮನೆಗೆ ಹೋಗಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮನೆಯಲ್ಲಿದ್ದಾಗ ಮಹಿಳೆ ಕಡೆಯ ಮೂವರು ಮನೆಗೆ ನುಗ್ಗಿದ್ದರು. 'ಮಹಿಳೆ ಜೊತೆ ಅಕ್ರಮ ಸಂಬಂಧ ಹೊಂದಿದೆಯಾ. ಈ ವಿಷಯ ಎಲ್ಲರಿಗೂ ತಿಳಿಸುತ್ತೇವೆ. ಬಿಟ್ಟು ಕಳುಹಿಸಲು ₹ 3 ಲಕ್ಷ ಕೊಡು' ಎಂದು ಬೆದರಿಸಿದ್ದರು. ಗಾಬರಿಗೊಂಡಿದ್ದ ದೂರುದಾರ, ಫೋನ್‌ಪೇ ಮೂಲಕ ₹ 21,000 ವರ್ಗಾಯಿಸಿ ತಪ್ಪಿಸಿಕೊಂಡಿದ್ದರು. ಈಗ ಠಾಣೆಗೆ ದೂರು ನೀಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ನಕಲಿ ನೇಮಕಾತಿ: 7 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಸ್ಕಾಂ ಕಿರಿಯ ಎಂಜಿನಿಯರ್ ಹುದ್ದೆ ಹೆಸರಿನಲ್ಲಿ ನಕಲಿ ನೇಮಕಾತಿ ಆದೇಶ ನೀಡಿ ಅಭ್ಯರ್ಥಿಯೊಬ್ಬರಿಂದ ₹ 20 ಲಕ್ಷ ಪಡೆದು ವಂಚಿಸಿದ್ದ ಪ್ರಕರಣದಲ್ಲಿ ಏಳು ಮಂದಿ ಆರೋಪಿಗಳನ್ನು ಹೈಗ್ರೌಂಡ್ಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಬೆಳಗಾವಿಯ ಟಿಳಕವಾಡಿಯ ನಿವಾಸಿ ವೈಭವ್ ಕುಲಕರ್ಣಿ, ನೇಮಕಾತಿ ಆದೇಶ ಪ್ರತಿ ಸಮೇತ ಮೇ 22ರಂದು ಕಚೇರಿಗೆ ಬಂದಿದ್ದರು. ಪತ್ರ ಪರಿಶೀಲಿಸಿದಾಗ, ನಕಲಿ ಎಂಬುದು ಗೊತ್ತಾಗಿತ್ತು. ಈ ಬಗ್ಗೆ ಬೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಕೆ.ಪಿ. ಸೋಮಶೇಖರ್ ದೂರು ನೀಡಿದ್ದರು' ಎಂದು ಪೊಲೀಸರು ಹೇಳಿದರು.

'ಎಫ್‌ಐಆರ್ ದಾಖಲಿಸಿಕೊಂಡು, ವೈಭವ್ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ಕೆಲಸದ ಆಮಿಷವೊಡ್ಡಿ ಅವರಿಂದ ₹ 20 ಲಕ್ಷ ಪಡೆದಿದ್ದ ಆರೋಪಿಗಳ ಮಾಹಿತಿ ಲಭ್ಯವಾಯಿತು. ನಂತರ, ಬೆಂಗಳೂರಿನ ಡಿ. ಪ್ರಜ್ವಲ್ (28), ಪ್ರವೀಣ್ ಸೋಮನಕಟ್ಟಿ ಅಲಿಯಾಸ್ ಬಾಲರಾಜ್ (28), ಎಸ್.ಡಿ. ಪುರುಷೋತ್ತಮ್ (49), ಲೋಹಿತ್ ಗೌಡ (46), ಬೆಳಗಾವಿಯ ಶಿವಪ್ರಸಾದ್ ಚನ್ನಣ್ಣನವರ (28), ವಿಜಯ್‌ಕುಮಾರ್ ಚನ್ನಣ್ಣನವರ (57) ಹಾಗೂ ತುಮಕೂರು ಜಿಲ್ಲೆಯ ಕೆ. ಪ್ರದೀಪ್ (34) ಅವರನ್ನು ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಬಂಧಿತರು ಸರ್ಕಾರದ ವಿವಿಧ ಕಚೇರಿಗಳಿಗೆ ಗುತ್ತಿಗೆ ಆಧಾರದಲ್ಲಿ ಏಜೆನ್ಸಿ ಮೂಲಕ ಉದ್ಯೋಗಿಗಳನ್ನು ನೇಮಿಸುವ ಕೆಲಸ ಮಾಡುತ್ತಿದ್ದರು. ಜೊತೆಯಲ್ಲೇ, ಕಾಯಂ ನೌಕರಿಯ ಆಮಿಷವೊಡ್ಡಿ ಅಭ್ಯರ್ಥಿಗಳಿಂದ ಹಣ ಪಡೆದು ವಂಚಿಸುತ್ತಿದ್ದರು' ಎಂದರು.

ನಕಲಿ ಲೆಟರ್‌ಹೆಡ್, ಸೀಲ್‌ಗಳು: 'ಬೆಸ್ಕಾಂ ಅಧಿಕಾರಿಗಳ ಹೆಸರಿನಲ್ಲಿರುವ ನಕಲಿ ಲೆಟರ್ ಹೆಡ್‌ಗಳು, ನಕಲಿ ಸೀಲ್‌ಗಳು ಆರೋಪಿಗಳ ಬಳಿ ಸಿಕ್ಕಿವೆ. ಆರೋಪಿಗಳು, ಹಲವು ವರ್ಷಗಳಿಂದ ಕೃತ್ಯ ಎಸಗುತ್ತಿರುವ ಮಾಹಿತಿ ಇದೆ' ಎಂದು ಪೊಲೀಸರು ತಿಳಿಸಿದರು.

'ಆರೋಪಿಗಳಿಂದ ಲ್ಯಾಪ್‌ಟಾಪ್, ಪ್ರಿಂಟರ್, ಕಾರು ಹಾಗೂ ₹ 5.50 ಲಕ್ಷ ನಗದು ಜಪ್ತಿ ಮಾಡಲಾಗಿದೆ' ಎಂದರು.

'ನಮ್ಮ 112' ನಾಲ್ಕು ಗಂಟೆ ನಿಷ್ಕ್ರಿಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುರ್ತು ನೆರವಿಗಾಗಿ ಪೊಲೀಸರನ್ನು ಸಂಪರ್ಕಿಸಲು ರೂಪಿಸಿರುವ 'ನಮ್ಮ 112' ನಿಯಂತ್ರಣ ಕೊಠಡಿ ಸಂಖ್ಯೆ ಭಾನುವಾರ ಮಧ್ಯಾಹ್ನದಿಂದ ಸಂಜೆಯವರೆಗೂ ನಿಷ್ಕ್ರಿಯಗೊಂಡಿದ್ದು, ಸಾರ್ವಜನಿಕರಿಗೆ ಸಮಸ್ಯೆ ಉಂಟಾಯಿತು.

ಪೊಲೀಸ್ ಕಮಿಷನರೇಟ್ ಕಚೇರಿಯಲ್ಲಿ ನಿಯಂತ್ರಣ ಕೊಠಡಿಯ ಕಮಾಂಡೊ ಕೇಂದ್ರವಿದೆ. 112 ಸಂಖ್ಯೆಗೆ ಬರುವ ದೂರುಗಳನ್ನು ಸಂಬಂಧಿಸಿದ ಠಾಣೆಗೆ ರವಾನಿಸಲು ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ.

'ನಮ್ಮ 112' ಸಂಖ್ಯೆ ನಿರ್ವಹಣೆ, ವಿಭಾಗವಾರು ಕರೆಗಳ ಹಂಚಿಕೆಗೆ ಬಳಸುವ ಸರ್ವರ್‌ನಲ್ಲಿ ಸಮಸ್ಯೆ ಕಾಣಿಸಿಕೊಂಡಿದ್ದರಿಂದ, 112 ಸಂಖ್ಯೆ ಮಧ್ಯಾಹ್ನ 2 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ನಿಷ್ಕ್ರಿಯಗೊಂಡಿತ್ತು ಎಂದು ಪೊಲೀಸ್ ಮೂಲಗಳು ಹೇಳಿವೆ.

'112ಕ್ಕೆ ಕರೆ ಮಾಡಿದರೆ ಆಯ್ಕೆಗಳು ಬರುತ್ತಿರಲಿಲ್ಲ. ಸಂಪರ್ಕವೂ ಸಾಧ್ಯವಾಗುತ್ತಿರಲಿಲ್ಲ. ಜನರು, ಕಚೇರಿ ದೂರವಾಣಿ ಸಂಖ್ಯೆಗಳಿಗೆ ಕರೆ ಮಾಡಿ ತಿಳಿಸಿದ್ದರು. 112ರ ಬದಲು, 080-22943000 ಪರ್ಯಾಯ ಸಂಖ್ಯೆ ನೀಡಲಾಯಿತು. ಸಾಮಾಜಿಕ ಮಾಧ್ಯಮಗಳ ಮೂಲಕ ಪರ್ಯಾಯ ಸಂಖ್ಯೆ ಬಗ್ಗೆ ಜನರಿಗೆ ಮಾಹಿತಿ ರವಾನಿಸಲಾಯಿತು'. 'ತಾಂತ್ರಿಕ ಸಮಸ್ಯೆ ಸರಿಪಡಿಸಲಾಗಿದೆ. ಸದ್ಯ 'ನಮ್ಮ112' ಯಥಾಪ್ರಕಾರ ಸಕ್ರಿಯವಾಗಿದೆ' ಎಂದು ಮೂಲಗಳು ತಿಳಿಸಿವೆ.

ಮಹಿಳಾ ಠಾಣೆ ಇನ್‌ಸ್ಪೆಕ್ಟರ್ ಅಮಾನತು

ಪ್ರಜಾವಾಣಿ ವಾರ್ತೆ



ಬಿ.ಆರ್. ಸುಮಾ

ಬೆಂಗಳೂರು: ದಾಖಲಾದ ಪ್ರಕರಣಗಳ ಬಗ್ಗೆ ಸಮರ್ಪಕ ತನಿಖೆ ನಡೆಸದೇ ಕರ್ತವ್ಯ ಲೋಪ ಎಸಗಿದ್ದ ಆರೋಪದಡಿ ಪೂರ್ವ ವಿಭಾಗದ ಮಹಿಳಾ ಠಾಣೆ ಇನ್‌ಸ್ಪೆಕ್ಟರ್ ಬಿ.ಆರ್. ಸುಮಾ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಪೂರ್ವ ವಿಭಾಗದ ಡಿಸಿಪಿ ಭೀಮಾಶಂಕರ್ ಗುಳೇದ್, ಕಮಿಷನರ್ ಬಿ.ದಯಾನಂದ್ ಅವರಿಗೆ ಇತ್ತೀಚೆಗೆ ವರದಿ ಸಲ್ಲಿಸಿದ್ದರು. ಇದರ ಆಧಾರದಲ್ಲಿ ಕಮಿಷನರ್ ಅಮಾನತು ಆದೇಶ ಹೊರಡಿಸಿದ್ದಾರೆ.

ಶಿವಾಜಿನಗರದಲ್ಲಿರುವ ಮಹಿಳಾ ಠಾಣೆ ಮೇಲೆ ಇತ್ತೀಚೆಗಷ್ಟೇ ಲೋಕಾಯುಕ್ತ ಪೊಲೀಸರ ದಾಳಿ ಆಗಿತ್ತು. ನಿರೀಕ್ಷಣಾ ಜಾಮೀನು ಪಡೆದಿದ್ದ ಆರೋಪಿಯೊಬ್ಬರ ಬಂಧನ–ಬಿಡುಗಡೆ ಪ್ರಕ್ರಿಯೆ ಪೂರ್ಣಗೊಳಿಸಲು ಪಿಎಸ್‌ಐ ಸವಿತಾ ಅವರು, ₹ 15,000 ಲಂಚಕ್ಕೆ ಬೇಡಿಕೆ ಇರಿಸಿದ್ದರು. ₹ 5 ಸಾವಿರ ತೆಗೆದುಕೊಳ್ಳುವಾಗ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿಬಿದ್ದಿದ್ದರು. ಇದೀಗ, ಇದೇ ಠಾಣೆಯ ಇನ್‌ಸ್ಪೆಕ್ಟರ್ ಅಮಾನತುಗೊಂಡಿದ್ದಾರೆ ಅವರ ಮೇಲೆಯೂ ಭ್ರಷ್ಟಾಚಾರದ ಆರೋಪ ಕೇಳಿಬಂದಿದೆ.

ಮೂರನೇ ವರದಿ: 'ಠಾಣೆ ಇನ್‌ಸ್ಪೆಕ್ಟರ್ ಆಗಿ ಅಧಿಕಾರ ವಹಿಸಿಕೊಂಡ ದಿನದಿಂದಲೂ ಸಮರ್ಪಕವಾಗಿ ಕೆಲಸ ಮಾಡುತ್ತಿರಲಿಲ್ಲ. ತನಿಖೆಯಲ್ಲೂ ಲೋಪ ಎಸಗಿದ್ದರು. ಕರ್ತವ್ಯ ಲೋಪದ ವಿರುದ್ಧ ಡಿಸಿಪಿ ಹಿಂದೆ ಎರಡು ಬಾರಿ ವರದಿ ಸಲ್ಲಿಸಿದ್ದರು. ಇದೀಗ ಮೂರನೇ ಬಾರಿ ಸಲ್ಲಿಸಿದ್ದ ವರದಿಯಿಂದಾಗಿ ಅಮಾನತು ಆಗಿದೆ' ಎಂದು ಮೂಲಗಳು ಹೇಳಿವೆ.

ಪತ್ನಿ ಸಾವು: ಬೇಗೂರು ಪಿಎಸ್‌ಐ ಬಂಧನ

ಬೆಂಗಳೂರು: ಬೇಗೂರು ಠಾಣೆ ವ್ಯಾಪ್ತಿಯಲ್ಲಿ ಶಿಲ್ಪಾ (29) ಎಂಬುವವರು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿರುವ ಪ್ರಕರಣದಲ್ಲಿ, ಅವರ ಪತಿ ಪಿಎಸ್‌ಐ ಎಸ್.ವಿ. ರಮೇಶ್ ಅವರನ್ನು ಪೊಲೀಸರು ಬಂಧಿಸಿದ್ದಾರೆ. 'ಚಿಕ್ಕಬಳ್ಳಾಪುರ ಜಿಲ್ಲೆಯ ರಮೇಶ್, ಬೇಗೂರು ಠಾಣೆಯಲ್ಲಿ ಕೆಲಸ ಮಾಡುತ್ತಿದ್ದ. ಠಾಣೆ ವ್ಯಾಪ್ತಿಯಲ್ಲಿ ವಾಸವಿದ್ದ ಶಿಲ್ಪಾ ಅವರ ಮೃತದೇಹ ನೇಣು ಬಿಗಿದ ಸ್ಥಿತಿಯಲ್ಲಿ ಜೂನ್ 4ರಂದು ಪತ್ತೆಯಾಗಿತ್ತು. ಶಿಲ್ಪಾ ಪೋಷಕರು ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು, ರಮೇಶ್‌ನನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ನಿಧನ ವಾರ್ತೆ

ಯು.ಆರ್. ಮಂಜುನಾಥ್



ಬೆಂಗಳೂರು: ಜಯನಗರ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ ಯು.ಆರ್. ಮಂಜುನಾಥ್ (41) ಅವರು ಅನಾರೋಗ್ಯದಿಂದಾಗಿ ಭಾನುವಾರ ನಿಧನರಾದರು. ಅವರಿಗೆ ಪತ್ನಿ ಹಾಗೂ ಪುತ್ರ ಇದ್ದಾರೆ.

ಹಲವು ತಿಂಗಳಿನಿಂದ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ಮಂಜುನಾಥ್, 15 ದಿನಗಳಿಂದ ರಜೆಯಲ್ಲಿದ್ದರು. ನಗರದ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಪಾರ್ಥಿವ ಶರೀರದ ಅಂತ್ಯಕ್ರಿಯೆ ಹಾಸನದ ಉದ್ದೂರಿನಲ್ಲಿ ನಡೆಯಲಿದೆ. 2007ನೇ ಪಿಎಸ್‌ಐ ಬ್ಯಾಚ್‌ನ ಇವರಿಗೆ ಇನ್‌ಸ್ಪೆಕ್ಟರ್ ಹುದ್ದೆಗೆ ಬಡ್ತಿ ಸಿಕ್ಕಿತ್ತು. ಒಂದೂವರೆ ವರ್ಷದಿಂದ ಜಯನಗರ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದರು. 2021ನೇ ಸಾಲಿನ ಮುಖ್ಯಮಂತ್ರಿ ಪದಕ ಲಭಿಸಿತ್ತು.

ಯುವಕನ ಕೊಲೆ

ತರೀಕೆರೆ: ಪಟ್ಟಣದಲ್ಲಿ ಶನಿವಾರ ರಾತ್ರಿ ಎರಡು ಗುಂಪುಗಳ ನಡುವೆ ಘರ್ಷಣೆ ನಡೆದು ಚೌಡೇಶ್ವರಿ ಕಾಲೊನಿಯ ವರುಣ್ (22) ಕೊಲೆಯಾಗಿದ್ದಾರೆ.

ಶಾಸಕ ಜಿ.ಎಚ್. ಶ್ರೀನಿವಾಸ್ ಅವರ ಅಭಿನಂದನಾ ಸಮಾರಂಭದ ವೇಳೆ ಪಟ್ಟಣದ ಬೀದಿಗಳಲ್ಲಿ ಮೆರವಣಿಗೆ ಸಾಗುವಾಗ ಡಿಜೆ ಹಾಡು ಬದಲಿಸುವ ವಿಚಾರಕ್ಕೆ ಎರಡು ಗುಂಪುಗಳ ನಡುವೆ ಜಗಳ ಆರಂಭವಾಗಿದೆ. ಆ ವೇಳೆ ವರುಣ್ ಅವರಿಗೆ ಇರಿಯಲಾಗಿದೆ. ಜತೆಯಲ್ಲಿದ್ದ ಸಂಜಯ್ ಹಾಗೂ ಮಂಜುನಾಥ ಗೆ ಗಾಯಗಳಾಗಿವೆ. ಆರೋಪಿಗಳಾದ ವೇದಮೂರ್ತಿ, ನವೀನ್, ನಿತಿನ್, ಗೂಳಿ ಶರತ್, ಈಶ್ವರ್, ಗಗನ್, ಧನುಷ್, ಕೀರ್ತಿ ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಪ್ರತಿ ವರ್ಷವೂ ಲಕ್ಷಾಂತರ ಸಸಿ ನೆಡುತ್ತಿದ್ದರೂ ತಗ್ಗದ ತಾಪಮಾನ

ಉದ್ಯಾನ ನಗರ: ನಡೆಯದ ಮರಗಣತಿ

• ಆರ್. ಮಂಜುನಾಥ್

ಬೆಂಗಳೂರು: ಮತ್ತೊಂದು ಪರಿಸರ ದಿನ ಆಚರಣೆಗೆ 'ಹಸಿರಿನ ನಗರಿ' ಬೆಂಗಳೂರು ಸಜ್ಜಾಗುತ್ತಿದೆ. ಸರ್ಕಾರದ ಇಲಾಖೆಗಳು ಸೇರಿದಂತೆ ನೂರಾರು ಸಂಘ–ಸಂಸ್ಥೆಗಳು ಲಕ್ಷಾಂತರ ಸಸಿಗಳನ್ನು ನೆಡುತ್ತಿವೆ. ಆದರೆ, ಹೈಕೋರ್ಟ್‌ನ ಸೂಚನೆಯ ನಂತರವೂ ನಗರದಲ್ಲಿರುವ ಗಿಡ–ಮರಗಳ ಗಣತಿ ಇನ್ನೂ ಆರಂಭವಾಗಿಲ್ಲ.


ಉದ್ಯಾನ ನಗರಿ ಎಂದೂ ಕರೆಯಲಾಗುವ ರಾಜಧಾನಿಯಲ್ಲಿ ಮರಗಳ ಗಣತಿ ಮಾಡಿ, ಸಾರ್ವಜನಿಕವಾಗಿ ಪ್ರಕಟಿಸಬೇಕು. ಮೂರು ತಿಂಗಳಲ್ಲಿ ಪ್ರಕ್ರಿಯೆ ಆರಂಭಿಸಬೇಕು ಎಂದು ಹೈಕೋರ್ಟ್ 2019ರಲ್ಲಿ ಬಿಬಿಎಂಪಿಗೆ ಸೂಚಿಸಿತ್ತು. ಈವರೆಗೆ ಪ್ರಾಯೋಗಿಕ ಕೆಲಸವಷ್ಟೇ ಆಗಿದೆ. ಎಂಟು ಸಂಪುಟದಲ್ಲಿ ವರದಿ ತಯಾರಿಸಲಾಗಿದ್ದು, 46,593 ಮರಗಳ ಮಾಹಿತಿಯನ್ನು ಬಿಬಿಎಂಪಿ ಸದ್ಯಕ್ಕೆ ಹೊಂದಿದೆ.

'ಮರಗಳ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ (ಐಡಬ್ಲ್ಯುಎಸ್‌ಟಿ) ಸಹಯೋಗದೊಂದಿಗೆ ಬಿಬಿಎಂಪಿ ಅಂದಾಜು ₹4 ಕೋಟಿ ವೆಚ್ಚದಲ್ಲಿ ಮರಗಳ ಗಣತಿ ನಡೆಸಿದೆ. ಆದರೆ, ಅದು ಸಮಗ್ರವಾಗಿಲ್ಲ. ಹೊಸ ತಂತ್ರಜ್ಞಾನ, ಆ್ಯಪ್ ಸೇರಿದಂತೆ ಹಲವು ರೀತಿಯಲ್ಲಿ ಗಣತಿ ಕಾರ್ಯ ಕೈಗೊಳ್ಳುವುದಾಗಿ ಬಿಬಿಎಂಪಿಯ ಅರಣ್ಯ ವಿಭಾಗದ ಅಧಿಕಾರಿಗಳು ಹೇಳುತ್ತಿದ್ದರೂ, ನಾಲ್ಕು ವರ್ಷಗಳಿಂದ ಏನು ಆಗಿಲ್ಲ. ಗಣತಿಯಲ್ಲಿ ಮರಗಳ ಜಾತಿ, ಉಪಯೋಗ, ಪರಿಸರ ಮೇಲಿನ ಪರಿಣಾಮ ಕುರಿತ ವಿವರಗಳಿರಲಿವೆ. ಮುಂದೆ ನರ್ಸರಿಗಳಲ್ಲಿ ಸಸಿಗಳನ್ನು ಬೆಳೆಸಲು ಅನುಕೂಲವಾಗಲಿದೆ' ಎಂದು ಮರಗಳ ಗಣತಿಗೆ ಆದೇಶಿಸಬೇಕು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದ ಬೆಂಗಳೂರು ಎನ್ವಿರಾನ್‌ಮೆಂಟ್ ಟ್ರಸ್ಟ್‌ನ ದತ್ತಾತ್ರೇಯ ಟಿ.ದೇವರೆ ಮಾಹಿತಿ ನೀಡಿದರು.

'ಅಭಿವೃದ್ಧಿ ಕಾಮಗಾರಿಗಳಿಗಾಗಿ ಮರಗಳನ್ನು ಕಡಿಯಲಾಗುತ್ತಿದೆ. ಬದಲಿಗೆ ಸಸಿಗಳನ್ನು ನೆಟ್ಟು ಪೋಷಿಸಬೇಕೆಂಬ ಕಾನೂನಿದೆ. ಆದರೆ, 'ನಮ್ಮ ಮೆಟ್ರೊ'ದಂತಹ ಬೃಹತ್ ಕಾಮಗಾರಿಗಳು ನಡೆದಾಗ ಮರ ಕಡಿದ ಸುತ್ತಮುತ್ತ ಸಸಿಗಳನ್ನು ನೆಟ್ಟ ಉದಾಹರಣೆಗಳೇ ಇಲ್ಲ. ಹೊರವಲಯ ಅಥವಾ ಅರಣ್ಯ ಪ್ರದೇಶದಲ್ಲಿ ಸಸಿ ನೆಟ್ಟ ದಾಖಲೆ ತೋರಿಸಲಾಗುತ್ತಿದೆ. ಇದರಿಂದ ಉಪಯೋಗವಾಗುವುದಿಲ್ಲ. ಕಾಮಗಾರಿಗೆ ಮರ ಕಡಿದರೆ, ಆ ಸುತ್ತಮುತ್ತ, ರಸ್ತೆ ಬದಿಯೇ ಸಸಿಗಳನ್ನು ನೆಟ್ಟು ಪೋಷಿಸಿ, ಮರಗಳನ್ನಾಗಿಸಬೇಕು' ಎಂದರು.

20 ಲಕ್ಷ?: 'ಬೆಂಗಳೂರಿನಲ್ಲಿ ಪ್ರತಿ ವರ್ಷ ಲಕ್ಷಾಂತರ ಸಸಿಗಳನ್ನು ನೆಡಲಾಗುತ್ತಿದೆ. ಅದರಲ್ಲೂ ಪರಿಸರ ದಿನಾಚರಣೆ ಸಂದರ್ಭದಲ್ಲಿ ಹಲವು ಸಂಘ–ಸಂಸ್ಥೆಗಳು, ಸರ್ಕಾರಿ ಇಲಾಖೆಗಳು, ಬಿಬಿಎಂಪಿ, ಬಿಡಿಎ, ಬಿಡಬ್ಲ್ಯುಎಸ್‌ಎಸ್‌ಬಿ, ಬಿಎಂಆರ್‌ಸಿಎಲ್ ಕೂಡ ಸಸಿಗಳನ್ನು ನೆಡುತ್ತವೆ. ಆದರೆ, ಬಿಬಿಎಂಪಿ ವ್ಯಾಪ್ತಿಯಲ್ಲಿ ಮರಗಳ ಸಂಖ್ಯೆ 20 ಲಕ್ಷವನ್ನೂ ಮೀರಿಲ್ಲ. ಹೀಗಾಗಿ ನಗರದ ಉಷ್ಣಾಂಶ ಹೆಚ್ಚಾಗುತ್ತಲೇ ಇದೆ' ಎಂದು ಪ್ರೊ. ರಾಮಚಂದ್ರ ಆತಂಕ ವ್ಯಕ್ತಪಡಿಸಿದರು.

ಉಳಿದವೆಷ್ಟು?: 'ಪರಿಸರ ದಿನಾಚರಣೆ ಸಂದರ್ಭದಲ್ಲಿ 'ಕೋಟಿ ವೃಕ್ಷ', 'ಲಕ್ಷ ಸಸಿ' ಎಂಬ ಹೆಸರಿನಲ್ಲಿ ಅಭಿಯಾನ ನಡೆಸಿ ಸಸಿಗಳನ್ನು ನೆಟ್ಟಿದ್ದೇವೆ ಎಂದು ಪ್ರಚಾರ ಪಡೆಯಲಾಗುತ್ತದೆ. ಅವುಗಳಲ್ಲಿ ಮುಂದಿನ ವರ್ಷ ಉಳಿದವೆಷ್ಟು ಎಂದು ಯಾರೂ ನೋಡುವುದಿಲ್ಲ. ಕಳೆದ ಐದಾರು ವರ್ಷಗಳಿಂದ ನೆಟ್ಟಿರುವ ಸಸಿಗಳಲ್ಲಿ ಶೇ 50ರಷ್ಟು ಉಳಿದಿದ್ದರೂ ಈ ವೇಳೆಗೆ ಕನಿಷ್ಠ 50 ಲಕ್ಷ ಮರಗಳಿರಬೇಕಿತ್ತು. ಸಸಿ ನೆಡುವುದಷ್ಟೇ ಅಲ್ಲ, ಪೋಷಿಸಿ ಮರವಾಗಿಸುವ ಬದ್ಧತೆಯೂ ಇರಬೇಕು' ಎಂದು ಪರಿಸರ ಕಾರ್ಯಕರ್ತ ರಾಂಪ್ರಸಾದ್ ಹೇಳಿದರು.




ಕಾಯಿದೆಯಂತೆ ಪ್ರತಿ ಮನೆಗೆ 2 ಮರ

ಕರ್ನಾಟಕ ಮರಗಳ ಸಂರಕ್ಷಣೆ ಕಾಯಿದೆಯ ನಿಯಮಗಳ ಪ್ರಕಾರ, ನಗರ ಪ್ರದೇಶಗಳಲ್ಲಿ 222 ಚದರ ಮೀಟರ್ (2,389 ಚದರ ಅಡಿ) ಮನೆ–ಕಟ್ಟಡಗಳ ನಿವೇಶನಗಳಲ್ಲಿ ಎರಡು ಮರಗಳಿರಬೇಕು. 892 ಚದರ ಮೀಟರ್ (9,600 ಚದರ ಅಡಿ) ಒಳಗಿನ ಕಟ್ಟಡ–ನಿವೇಶನಗಳಲ್ಲಿ ಮೂರು, ನಂತರ ವಿಸ್ತೀರ್ಣದಲ್ಲಿ ನಾಲ್ಕು ಮರಗಳಿರಬೇಕು. ಕೈಗಾರಿಕೆ ಹಾಗೂ ಸಂಸ್ಥೆಗಳ ಆವರಣದಲ್ಲಿ ಪ್ರತಿ ಹೆಕ್ಟೇರ್‌ಗೆ 25 ಮರಗಳಿರಬೇಕು.

'ಆದರೆ, 1.30 ಕೋಟಿ ಜನಸಂಖ್ಯೆಯ ಬೆಂಗಳೂರಿನಲ್ಲಿ ಏಳು ಜನರಿಗೆ ಒಂದು ಮರವಿದೆ. ಚಂಡೀಗಡ ಮತ್ತು ಗಾಂಧಿನಗರಗಳಲ್ಲಿ ಪ್ರತಿ ವ್ಯಕ್ತಿಗೆ ನಾಲ್ಕು ಗಿಡಗಳಿವೆ, ನಾಸಿಕ್‌ನಲ್ಲಿ ಪ್ರತಿಯೊಬ್ಬರಿಗೆ ಎರಡು ಗಿಡಗಳಿವೆ' ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ಪ್ರೊ. ಟಿ.ವಿ. ರಾಮಚಂದ್ರ ಹೇಳಿದರು.

ಗಣತಿಗೆ ಸದ್ಯದಲ್ಲಿಯೇ ನಿರ್ಧಾರ: ಡಿಸಿಎಫ್



ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಗಿಡ–ಮರಗಳ ಗಣತಿ ಕಾರ್ಯವನ್ನು 'ಪೈಲಟ್ ಪ್ರಾಜೆಕ್ಟ್'ನಲ್ಲಿ ಕೈಗೊಳ್ಳಲಾಗಿದೆ. ಸಂಪೂರ್ಣವಾಗಿ ಗಣತಿ ಪ್ರಕ್ರಿಯೆ ನಡೆದಿಲ್ಲ. ಜಿಕೆವಿಕೆ ಸೇರಿ ಹಲವು ಸಂಸ್ಥೆಗಳೊಂದಿಗೆ ಚರ್ಚೆ ನಡೆದಿದೆ. ಸರ್ಕಾರದ ಅನುಮತಿ ಪಡೆದು ಶೀಘ್ರ ಗಣತಿ ಕಾರ್ಯ ಕೈಗೊಳ್ಳಲಾಗುವುದು ಎಂದು ಬಿಬಿಎಂಪಿ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಸರಿನ ಸಿಕ್ಕಲಿಗರ್ ತಿಳಿಸಿದರು.

'ಹೈಕೋರ್ಟ್‌ಗೆ ಮತ್ತೆ ಮೇಲ್ಮನವಿ'

'2019ರಲ್ಲಿ ಹೈಕೋರ್ಟ್ ಆದೇಶ ನೀಡಿದ್ದರೂ ಈವರೆಗೆ ಮರಗಣತಿ ಆರಂಭವಾಗಿಲ್ಲ. ಬಿಬಿಎಂಪಿ ಅಧಿಕಾರಿಗಳು ಇತ್ತ ಗಮನಹರಿಸುತ್ತಿಲ್ಲ. ಸಾಕಷ್ಟು ಬಾರಿ ವಿಚಾರಿಸಿದ್ದೇವೆ. ಏನೇನೋ ಸಬೂಬು ಹೇಳುತ್ತಾರೆ. ಇಂದಿಗೂ ಯೋಜನೆ ಅನುಷ್ಠಾನಗೊಳಿಸುವ ಪ್ರಕ್ರಿಯೆ ಆರಂಭವಾಗಿಲ್ಲ. ಹೀಗಾಗಿ ಹೈಕೋರ್ಟ್‌ಗೆ ಮತ್ತೆ ಮನವಿ ಮಾಡಿಕೊಳ್ಳುತ್ತೇವೆ' ಎಂದು ದತ್ತಾತ್ರೇಯ ಟಿ.ದೇವರೆ ತಿಳಿಸಿದರು.

ಕುಂದು ಕೊರತೆ
ಜನದನಿ

ನಿಮ್ಮ ಅಹವಾಲುಗಳನ್ನು ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು



ಹೂಳು ತೆಗೆದು ಪ್ರವಾಹ ತಡೆಗಟ್ಟಿ


ದೊಮ್ಮಲೂರು ಎರಡನೇ ಹಂತದ 4ನೇ ಮುಖ್ಯರಸ್ತೆ ಬಳಿ ರಾಜಕಾಲುವೆಯಲ್ಲಿ ಹೂಳು ತುಂಬಿದೆ. ಗಿಡಗಂಟಿಗಳು ಆಳೆತ್ತರ ಬೆಳೆದಿವೆ. ಹೀಗೇ ಬಿಟ್ಟರೆ ಈ ಬಾರಿ ಮಳೆಗಾಲದಲ್ಲಿ ನೀರು ಸರಾಗವಾಗಿ ಹರಿಯದೇ ಪ್ರವಾಹ ಉಂಟಾಗಲಿದೆ. ಗಿಡಗಂಟಿಗಳ ತೆರವು ಮತ್ತು ರಾಜಕಾಲುವೆಯಲ್ಲಿ ತುಂಬಿರುವ ಹೂಳೆತ್ತಲು ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳಬೇಕು.

ಸ್ಥಳೀಯರು, ದೊಮ್ಮಲೂರು

ರಸ್ತೆಯಲ್ಲಿ ಸಂಚಾರವೇ ಕಷ್ಟ

ಬೆಳ್ಳಂದೂರು ಕೆರೆ ರಸ್ತೆಯ ದುರಸ್ತಿ ನಡೆದಿದ್ದು, ಮರಾಠಹಳ್ಳಿ ರಸ್ತೆ ಅಥವಾ ಕೋರಮಂಗಲ ರಸ್ತೆ ಮೂಲಕ ಸಂಚರಿಸಬೇಕು. ವಾಹನ ದಟ್ಟಣೆಯಿಂದ ಇಲ್ಲಿ ಸಾಗುವುದೇ ಕಷ್ಟ. ಮಳೆ ಬಂದು ಕೆಸರಿನಿಂದ ರಾಡಿಯಾಗಿದೆ. ನಿತ್ಯವು ಪ್ರಯಾಣಿಕರು ಕಿರಿಕಿರಿ ಅನುಭವಿಸಬೇಕಿದೆ. ಬೆಳ್ಳಂದೂರು ಕೆರೆ ರಸ್ತೆ ದುರಸ್ತಿಯನ್ನು ಕೂಡಲೇ ಮುಗಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು.

ಹೇಮಂತ್ ಕುಮಾರ್, ಸ್ಥಳೀಯರು





ಪಾರ್ಕ್ ದುರಸ್ತಿ ಮಾಡಿ

ಮುನ್ನೇನಕೊಳ್ಳಾಲು ಕೆರೆ ಬಳಿಯಲ್ಲಿರುವ ಬಿಬಿಎಂಪಿ ಪಾರ್ಕ್‌ನಲ್ಲಿ ಆಡುವ ಸಲಕರಣೆಗಳು ಕೆಟ್ಟು ಹೋಗಿವೆ. ಇದರಲ್ಲೇ ಮಕ್ಕಳು ಆಟವಾಡುತ್ತಿದ್ದಾರೆ. ಅಪಾಯ ಉಂಟಾಗುವ ಮೊದಲು ಸಂಬಂಧಪಟ್ಟವರು ದುರಸ್ತಿ ಮಾಡಬೇಕು.

ನಿತೇಶ್, ಸ್ಥಳೀಯರು

ಅಡ್ಡಾದಿಡ್ಡಿ ವಾಹನ ನಿಲುಗಡೆ

ರಾಜರಾಜೇಶ್ವರಿ ನಗರ ಆರ್ಚ್ ಒಳಭಾಗ ಪ್ರವೇಶಿಸಿದ ನಂತರ ಡಬಲ್ ರಸ್ತೆಯಲ್ಲಿ ವಾಹನಗಳು ಅಡ್ಡಾದಿಡ್ಡಿ ನಿಂತಿದ್ದು, ಸಂಚಾರಕ್ಕೆ ಸಮಸ್ಯೆಯಾಗಿದೆ. ಅದರಲ್ಲೂ 1522 ರೆಸ್ಟೋರೆಂಟ್ ಬಳಿ ವಾಹನಗಳನ್ನು ರಾತ್ರಿ 12ರವರೆಗೆ ಬೇಕಾಬಿಟ್ಟಿ ನಿಲ್ಲಿಸಲಾಗಿರುತ್ತದೆ. ಸಂಚಾರ ಪೊಲೀಸರು ಇತ್ತ ಗಮನಹರಿಸಬೇಕು.

ಜಗದೀಶ್, ರಾಜರಾಜೇಶ್ವರಿ ನಗರ

ವರದಿ ಪರಿಣಾಮ

ಹೂಳೆತ್ತುವಿಕೆ ಆರಂಭ

ಮಾಗಡಿ ರಸ್ತೆ ಕೆಂಪಾಪುರದಲ್ಲಿ ಕಾಲುವೆಯಲ್ಲಿ ಹೂಳು ತುಂಬಿರುವ ಬಗ್ಗೆ 'ಪ್ರಜಾವಾಣಿ' ಕುಂದುಕೊರತೆ ವಿಭಾಗದಲ್ಲಿ ಪ್ರಕಟವಾದ ವರದಿಗೆ ಅಧಿಕಾರಿಗಳು ಸ್ಪಂದಿಸಿದ್ದಾರೆ. ಹೂಳು ತೆಗೆಯುವ ಕಾಮಗಾರಿ ಆರಂಭಿಸಿದ್ದಾರೆ. 'ಪ್ರಜಾವಾಣಿ'ಗೆ ಧನ್ಯವಾದಗಳು.

ಉಮಾಶಂಕರಬಾಬು ಎಂ., ಕೆಂಪಾಪುರ ಅಗ್ರಹಾರ, ಮಾಗಡಿರಸ್ತೆ

ಪರಿವರ್ತನಾ ಸಮಾವೇಶದಲ್ಲಿ ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ

'ಸತ್ತ ದನ ತಿಂದು ಬದುಕಿದ್ದ ಪೂರ್ವಜರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜಾಡಳಿತ ಕಾಲದಲ್ಲಿ ದಲಿತರು ಬದುಕುವುದೇ ಕಷ್ಟವಾಗಿತ್ತು. ಸತ್ತ ದನಗಳನ್ನು ತಿಂದು ಬದುಕಿದ್ದರು. ಇಲ್ಲದಿದ್ದರೆ ಹುಳಗಳು ಸಾಯುವಂತೆ ನಮ್ಮ ಪೂರ್ವಜರು ಸಾಯುತ್ತಿದ್ದರು' ಎಂದು ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ ಹೇಳಿದರು.

ಸಮತಾ ಸೈನಿಕ ದಳದಿಂದ ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 139ನೇ ಜಯಂತಿ, ಡಾ.ಎಂ. ವೆಂಕಟಸ್ವಾಮಿ ಅವರ 69ನೇ ಹುಟ್ಟುಹಬ್ಬದ ಪ್ರಯುಕ್ತ ಟೌನ್‌ಹಾಲ್‌ನಲ್ಲಿ ಭಾನುವಾರ ನಡೆದ ಪರಿವರ್ತನಾ ಸಮಾವೇಶದಲ್ಲಿ ಮಾತನಾಡಿದರು.

ಭೂಮಾಲೀಕರು ಮಾತ್ರ ಆ ಕಾಲದಲ್ಲಿ ನೆಮ್ಮದಿಯಾಗಿದ್ದರು. ಜನಸಂಖ್ಯೆಯ ಶೇ 25ರಷ್ಟು ಇರುವ ದಲಿತರನ್ನು ವಿದ್ಯೆ, ಸಂಪತ್ತಿನಿಂದ ಹೊರಗಿಡಲಾಗಿತ್ತು. ಭೂಮಿಯನ್ನೂ ಹೊಂದುವಂತಿರಲಿಲ್ಲ. ನೀರು ಕೊಡುತ್ತಿರಲಿಲ್ಲ. ಭವ್ಯ ಭಾರತದ ಇತಿಹಾಸ ಎನ್ನುವವರಿಗೆ, ಗೋವು ಪವಿತ್ರ ಎನ್ನುವವರಿಗೆ ಈ ಸತ್ಯಗಳು ಗೊತ್ತಿಲ್ಲ ಎಂದು ವಿಷಾದಿಸಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಬಗ್ಗೆ ಪಠ್ಯದಲ್ಲಿ ಬೋಧಿಸಬೇಕು. ಪಠ್ಯದಲ್ಲಿ ಮೌಢ್ಯಗಳನ್ನು ನೀಡಬಾರದು. ವೈಜ್ಞಾನಿಕ ಚಿಂತನಾ ಕ್ರಮ ಬರಬೇಕು ಎಂದು ಅವರು ಆಗ್ರಹಿಸಿದರು.

ಸಮತಾ ಸೈನಿಕ ದಳದ ಅಧ್ಯಕ್ಷ ಎಂ.ವೆಂಕಟಸ್ವಾಮಿ ಅವರು, 'ಪಂಚಾಯತ್, ಸರ್ಕಾರಿ ಕಚೇರಿಗಳಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿಯನ್ನು ಆಚರಿಸಲು ಆದೇಶ ಹೊರಡಿಸಬೇಕು. ವಿಶ್ವವಿದ್ಯಾಲಯಗಳಲ್ಲಿ ಒಡೆಯರ್ ಅಧ್ಯಯನ ಪೀಠ ಸ್ಥಾಪಿಸಬೇಕು. ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ ತಂದು ಎಸ್‌ಸಿ, ಎಸ್‌ಟಿ ಸಮುದಾಯದ ಭೂಮಿ ಹಕ್ಕು ರಕ್ಷಿಸಬೇಕು' ಎಂದು ಆಗ್ರಹಿಸಿದರು.

ಬರಹಗಾರ ಎನ್.ಆರ್. ಶಿವರಾಂ ಅವರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ನೀಡಿ ಗೌರವಿಸಲಾಯಿತು. 'ಸಾಮಾಜಿಕ ನ್ಯಾಯ ಪರಿವರ್ತನೆಯ ಪ್ರವರ್ತಕ' ಪುಸ್ತಕ ಬಿಡುಗಡೆ ಮಾಡಲಾಯಿತು. ಸಾಹಿತಿ ಬಿ.ಟಿ. ಲಲಿತಾ ನಾಯಕ್ ಅಧ್ಯಕ್ಷತೆ ವಹಿಸಿದ್ದರು. ಬಿಕ್ಕು ಸಂಘದ ಜ್ಞಾನಲೋಕ ಬಂತೆ, ಡಿಸಿಪಿ ಸಿದ್ದರಾಜು, ಎ.ಬಿ.ಹೊಸಮನೆ, ಎಚ್.ಎಂ.ನಾರಾಯಣಸ್ವಾಮಿ, ಲೋಲಾಕ್ಷ ಅವರಿದ್ದರು.



'ಪರಿವರ್ತನಾ ಸಮಾವೇಶ'ದಲ್ಲಿ ಹೊಳೆನರಸೀಪುರದ ಡಾ. ಬಿ.ಆರ್. ಅಂಬೇಡ್ಕರ್ ಸಾಹಿತ್ಯ ಕೃತಿ ಬರಹಗಾರ ಎನ್.ಆರ್.ಶಿವರಾಂ ಅವರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು– ಪ್ರಜಾವಾಣಿ ಚಿತ್ರ

ಬಿಜೆಪಿಯಿಂದ ಇಂದು, ನಾಳೆ ಪ್ರತಿಭಟನೆ

ಬೆಂಗಳೂರು: ಜನ ವಿರೋಧಿ ನಿರ್ಧಾರಗಳನ್ನು ಹಿಂಪಡೆಯುವಂತೆ ರಾಜ್ಯ ಸರ್ಕಾರವನ್ನು ಆಗ್ರಹಿಸಿ ಸೋಮವಾರ, ಮಂಗಳವಾರ ರಾಜ್ಯಾದ್ಯಂತ ಪ್ರತಿಭಟಿಸಲಾಗುವುದು ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ಹೇಳಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, '200 ಯೂನಿಟ್‌ವರೆಗೆ ವಿದ್ಯುತ್ ಉಚಿತ ಎಂದಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಈಗ 80 ಯೂನಿಟ್‌ವರೆಗೆ ಎಂದು ಆದೇಶ ಹೊರಡಿಸಿ ಜನ ವಿರೋಧಿ ನೀತಿ ಪ್ರದರ್ಶಿಸಿದ್ದಾರೆ' ಎಂದರು.

'ಅಲ್ಲದೇ, ಈಗ ಒಂದು ಯೂನಿಟ್‌ಗೆ 70 ಪೈಸೆ ಹೆಚ್ಚಿಸಲಾಗಿದೆ. ಅಂದರೆ 80 ಯೂನಿಟ್‌ಗೆ ₹56 ಹೆಚ್ಚಿಸಿದಂತಾಗುತ್ತದೆ. ಶುಲ್ಕ ಹೆಚ್ಚಿಸಿ ಜನರಿಂದಲೇ ಮತ್ತೆ ವಸೂಲಿ ಮಾಡಲಾಗುತ್ತಿದೆ. 70 ಪೈಸೆ ಹೆಚ್ಚಳವನ್ನು ಹಿಂದಕ್ಕೆ ಪಡೆಯಬೇಕು' ಎಂದು ಒತ್ತಾಯಿಸಿದರು.

'ಬಿಜೆಪಿ ಸರ್ಕಾರ ಇದ್ದಾಗ ಹಾಲಿನ ಪ್ರೋತ್ಸಾಹಧನವನ್ನು ಪ್ರತಿಲೀಟರ್‌ಗೆ ₹5 ನೀಡುತ್ತಿತ್ತು. ಕಾಂಗ್ರೆಸ್ ಸರ್ಕಾರ ಅದರಲ್ಲಿ ₹1.5 ಕಡಿಮೆ ಮಾಡಿದೆ. ಇದರಿಂದ ಬಡ ರೈತರಿಗೆ ಸಹಾಯ ಮಾಡಿದಂತಾಯಿತೆ' ಎಂದು ಪ್ರಶ್ನಿಸಿದರು.

ಸಾರಿಗೆ ಅದಾಲತ್ ಇಂದು

ಬೆಂಗಳೂರು: ಕಸ್ತೂರಿನಗರದಲ್ಲಿರುವ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಜೂನ್ 5ರಂದು ಮಧ್ಯಾಹ್ನ 3ಕ್ಕೆ ಸಾರಿಗೆ ಅದಾಲತ್ ನಡೆಯಲಿದೆ. ಇಲಾಖೆ ಹಿರಿಯ ಅಧಿಕಾರಿಗಳು ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸಲಿದ್ದಾರೆ ಎಂದು ಆರ್‌ಟಿಒ ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಇಂದು

'ರಾಮಾಯಣ'ದ ಬಗ್ಗೆ ಅಂತರರಾಷ್ಟ್ರೀಯ ವಿಚಾರಸಂಕಿರಣ: ಆಯೋಜನೆ: ಪೂರ್ಣಪ್ರಜ್ಞಾ ಸಂಶೋಧನಾ ಮಂದಿರ, ಸ್ಥಳ: ಪೂರ್ಣಪ್ರಜ್ಞಾ ವಿದ್ಯಾಪೀಠ, ಕತ್ರಿಗುಪ್ಪೆ ಮುಖ್ಯರಸ್ತೆ, ಬೆಳಿಗ್ಗೆ 9ರಿಂದ

ಎಂ.ಎಸ್. ರಾಮಯ್ಯ ಸ್ಮರಣಾರ್ಥ ಉಪನ್ಯಾಸ: ಅತಿಥಿ: ಕೈಲಾಶ್ ಸತ್ಯಾರ್ಥಿ, ಆಯೋಜನೆ ಹಾಗೂ ಸ್ಥಳ: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಎಂ.ಎಸ್.ರಾಮಯ್ಯ ನಗರ, ಬೆಳಿಗ್ಗೆ 11

'ಪ್ರೊ.ಮಲ್ಲೇಪುರಂ ಸಾಹಿತ್ಯ ಪ್ರಶಸ್ತಿ ಪ್ರದಾನ' ಮತ್ತು 'ಜ್ಞಾನಸೂತ್ರ' ಗ್ರಂಥ ಲೋಕಾರ್ಪಣೆ: ಮನು ಬಳಿಗಾರ್, ಪ್ರಶಸ್ತಿ ಪ್ರದಾನ: ಅಹಲ್ಯಾ ಶರ್ಮಾ, ಪ್ರಶಸ್ತಿ ಸ್ವೀಕಾರ: ಕೆ.ಶಾರದಾ, ಅಭಿನಂದನಾ ನುಡಿ: ಎಚ್. ಡಿ. ಪೋತೆ, ಆಯೋಜನೆ: ಪ್ರೊ. ಮಲ್ಲೇಪುರಂ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಸಂಜೆ 5.30

ವಿಶ್ವ ಪರಿಸರ ದಿನ

ಬಿಬಿಎಂಪಿಯಿಂದ ವಿಶ್ವ ಪರಿಸರ ದಿನ: ಚಾಲನೆ: ಡಿ.ಕೆ. ಶಿವಕುಮಾರ್, ಮುಖ್ಯ ಅತಿಥಿ: ಕೃಷ್ಣ ಬೈರೇಗೌಡ, ಸ್ಥಳ: ರಾಚೇನಹಳ್ಳಿ ಕೆರೆ, ಬ್ಯಾಟರಾಯನಪುರ, ಬೆಳಿಗ್ಗೆ 8

ಸಸಿ ವಿತರಣೆ ಕಾರ್ಯಕ್ರಮ: ಆಯೋಜನೆ: ಸುದಯ ಫೌಂಡೇಷನ್, ಸ್ಥಳ: ನವರಂಗ್ ವೃತ್ತ, ಬೆಳಿಗ್ಗೆ 8

ಕರ್ನಾಟಕ ರಾಜ್ಯ ಪರಿಸರ ಪ್ರಶಸ್ತಿ ಪ್ರದಾನ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಈಶ್ವರ್ ಖಂಡ್ರೆ, ಅಧ್ಯಕ್ಷತೆ: ದಿನೇಶ್ ಗುಂಡೂರಾವ್, ಆಯೋಜನೆ: ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಅರಮನೆ ರಸ್ತೆ, ಬೆಳಿಗ್ಗೆ 10

ವಿಶ್ವ ಪರಿಸರ ದಿನಾಚರಣೆ: ಉದ್ಘಾಟನೆ: ಲೀಲಾದೇವಿ ಆರ್. ಪ್ರಸಾದ್, ಪ್ರಶಸ್ತಿ ಪ್ರದಾನ: ಪರಿಸರವಾದಿ ಶಿವಮಲ್ಲು, ಅಧ್ಯಕ್ಷತೆ: ಎಚ್. ವಿ. ಶಂಕರ್, ಅತಿಥಿಗಳು: ಬಿ.ಎ. ನಂಜುಂಡಸ್ವಾಮಿ, ಸಸಿ ವಿತರಣೆ: ಕೆ. ಮಂಜುಳಾ, ಆಯೋಜನೆ: ಭಾರತೀಯ ಸಮಾಜ ಸೇವಾ ಟ್ರಸ್ಟ್, ಸ್ಥಳ: ಸ್ವಾಮಿ ವಿವೇಕಾನಂದ ಶಿಕ್ಷಣ ಸಂಸ್ಥೆ, ಹನುಮಂತನಗರ, ಬೆಳಿಗ್ಗೆ 10.30



ಲೀಲಾದೇವಿ ಆರ್. ಪ್ರಸಾದ್

ವಿಶ್ವ ಪರಿಸರ ದಿನಾಚರಣೆ: ಅತಿಥಿಗಳು: ಅಜಯ್ ಕುಮಾರ್, ಶ್ರೀಕಾಂತ್ ಕನ್ನಡಿಗ, ಧರ್ಮೇಂದ್ರ ಕುಮಾರ್, ಅಲ್ಫಾನ್ಸ್ ಫರ್ನಾಂಡೀಸ್, ಆಯೋಜನೆ ಹಾಗೂ ಸ್ಥಳ: ಲೊಯೋಲ ಪದವಿ ಕಾಲೇಜು, ಬಿ.ಜಿ. ರಸ್ತೆ, ಸಮಯ: ಮಧ್ಯಾಹ್ನ 1

ಗುಣಮಟ್ಟದ ಶಿಕ್ಷಣರಂಗದಲ್ಲಿ 'ಎಸ್‌ಆರ್‌ಎಸ್' ದಿಟ್ಟ ಹೆಜ್ಜೆ

'ಲಾಂಗ್‌ಟರ್ಮ್' ಆಕಾಂಕ್ಷಿಗಳಿಗೆ ಸೀಟ್ ಗ್ಯಾರಂಟಿ

ಚಿತ್ರದುರ್ಗ: ಇತಿಹಾಸ ಪ್ರಸಿದ್ಧ ಕೋಟೆನಾಡು ಎಂದೇ ಹೆಸರಾಗಿರುವ ಚಿತ್ರದುರ್ಗದ ಹೆಮ್ಮೆಯ ಎಸ್‌ಆರ್‌ಎಸ್ ಸಮೂಹ ಶಿಕ್ಷಣ ಸಂಸ್ಥೆಗಳ ಅಡಿಯಲ್ಲಿ ನಡೆಯುತ್ತಿರುವ ಎಸ್‌ಆರ್‌ಎಸ್ ಪಿಯು ಕಾಲೇಜು ದಾಖಲೆಗಳ ಮೇಲೆ ದಾಖಲೆ ನಿರ್ಮಿಸುತ್ತಿರುವುದು ಎಲ್ಲರಿಗೂ ತಿಳಿದ ಸಂಗತಿಯೇ. 2023ರ ಬೋರ್ಡ್, ಜೆಇಇ ಹಾಗೂ ನೀಟ್ ಫಲಿತಾಂಶಗಳಲ್ಲಿ ಅದ್ವಿತೀಯ ಸಾಧನೆ ಮಾಡಿದೆ.

ಪಿಯು ಎಂದರೆ ಯಾವುದೋ ಸಾಧಾರಣ ಕೋರ್ಸ್ ಅಲ್ಲ ಎಂದು ಸಾಬೀತುಪಡಿಸಿದ, ಮಧ್ಯ ಕರ್ನಾಟಕದಲ್ಲಿ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿರುವ ಎಸ್‌ಆರ್‌ಎಸ್ ಪಿಯು ಕಾಲೇಜು 2009ರಲ್ಲಿ ಕಾರ್ಯಾರಂಭವಾಗಿದೆ. ಸ್ಥಾಪನೆಯಾದ ದಿನದಿಂದ ಇಂದಿನವರೆಗೂ ಪಿಯು ಫಲಿತಾಂಶದಲ್ಲಿ ಜಿಲ್ಲೆಯ ಕೀರ್ತಿಯನ್ನು ಹೆಚ್ಚಿಸಿದೆ. 2013ರ ದ್ವಿತೀಯ ಪಿಯು ವಾರ್ಷಿಕ ಪರೀಕ್ಷೆಯ ಫಲಿತಾಂಶದಲ್ಲಿ ರಾಜ್ಯಕ್ಕೆ 4ನೇ ರ್‍ಯಾಂಕ್, ವೈದ್ಯಕೀಯ ಅರ್ಹತಾ ಪರೀಕ್ಷೆಯಲ್ಲಿ 5ನೇ ರ್‍ಯಾಂಕ್ ಗಳಿಸುವ ಮೂಲಕ ಇಡೀ ರಾಜ್ಯ ಚಿತ್ರದುರ್ಗದ ಎಸ್‌ಆರ್‌ಎಸ್ ಕಡೆ ತಿರುಗಿ ನೋಡುವಂತಾಯಿತು. ಹೀಗೆ ಪ್ರತಿ ವರ್ಷ ರಾಜ್ಯಮಟ್ಟದಲ್ಲಿ ಅತ್ಯುತ್ತಮ ಫಲಿತಾಂಶ ದಾಖಲಿಸುತ್ತ ಬಂದಿದೆ.

ಬೋರ್ಡ್ ಮಾತ್ರವಲ್ಲದೆ ಸಿಇಟಿ, ಜೆಇಇ, ನೀಟ್ ತರಹದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲೂ ಅಸಾಧಾರಣ ಸಾಧನೆ ಮಾಡಿರುವ ಎಸ್‌ಆರ್‌ಎಸ್ ಪಿಯು ಕಾಲೇಜು, ಶಿಕ್ಷಣ ಕ್ರಾಂತಿಯನ್ನೇ ಮಾಡಿದೆ. ಈ ಕಾಲೇಜಿನಲ್ಲಿ ಕಲಿತ ನೂರಾರು ವಿದ್ಯಾರ್ಥಿಗಳು ಮುಂಬೈ, ಖರಗ್‌ಪುರ, ಲಕ್ನೊ ಐಐಟಿಗಳಲ್ಲಿ ಪದವಿ ಪೂರೈಸಿದ್ದಾರೆ. ವೈದ್ಯಕೀಯ ವಿಭಾಗದಲ್ಲಿ ಏಮ್ಸ್, ಬಿಎಂಸಿ, ಎಂಎಂಸಿ, ವಿಮ್ಸ್ ಮುಂತಾದ ಹೆಸರಾಂತ ಕಾಲೇಜುಗಳಲ್ಲಿ ವೈದ್ಯಕೀಯ ಪದವಿ ಪಡೆದು ಉತ್ತಮ ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ರಾಜ್ಯಮಟ್ಟದ ಸಿಇಟಿಯಿಂದ ಜೆಇಇ, ನೀಟ್‌ನಂತಹ ರಾಷ್ಟ್ರಮಟ್ಟದ ಪರೀಕ್ಷೆಗಳಿಗೆ ಉತ್ತಮ ತರಬೇತಿ ನೀಡಲು ಬೇಕಾದ ಪರಿಣತಿ ಸಾಧಿಸಿದೆ. ಸದ್ಯದ ಸ್ಪರ್ಧಾತ್ಮಕ ಯುಗದಲ್ಲಿ ಪಿಯು ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ಅತಿ ಹೆಚ್ಚು ಪ್ರವೇಶ ಪರೀಕ್ಷೆಗಳನ್ನು ಬರೆಯುವ ಅವಕಾಶವಿದೆ.

ಎನ್‌ಸಿಇಆರ್‌ಟಿ ಪಠ್ಯಕ್ರಮ ಜಾರಿಗೆ ಬಂದಾಗಿನಿಂದ ಪಿಯು ಶಿಕ್ಷಣ ಬೇರೆಯ ಮಜಲಿಗೆ ಹೊರಳಿಕೊಂಡಿದೆ. ವಿದ್ಯಾರ್ಥಿಗಳಿಗೆ ಹಾಗೂ ಬೋಧಕರಿಗೆ ಹೊಸ ಸವಾಲುಗಳನ್ನು ಒಡ್ಡಿದೆ. ಇದನ್ನು ಸಮರ್ಥವಾಗಿ ಎದುರಿಸಿ ಯಶಸ್ವಿಯಾದ ಎಸ್‌ಆರ್‌ಎಸ್ ತನ್ನ ಸಾಧನೆಯ ನಾಗಾಲೋಟವನ್ನು ಮುಂದುವರೆಸಿ ಪ್ರತಿ ವರ್ಷ ಹೊಸ ಇತಿಹಾಸ ದಾಖಲಿಸುತ್ತಿದೆ. 2023ನೇ ಸಾಲಿನ ಜೆಇಇ ಮೇನ್ಸ್‌ನಲ್ಲಿ ರಾಷ್ಟ್ರಮಟ್ಟದ 136ನೇ ರ್‍ಯಾಂಕ್‌ಗೆ ಸರಿಸಮನಾಗಿ ನೀಟ್‌ನಲ್ಲಿ ಎಂಟು ವಿದ್ಯಾರ್ಥಿಗಳು 720ಕ್ಕೆ 650ಕ್ಕೂ ಹೆಚ್ಚು ಅಂಕಗಳಿಸಿದ್ದಾರೆ. ಆ ಪೈಕಿ ಒಬ್ಬ ವಿದ್ಯಾರ್ಥಿ 675 ಅಂಕಗಳನ್ನು ಗಳಿಸಿರುವುದು (ಎನ್‌ಟಿಎ ಬಿಡುಗಡೆ ಮಾಡಿರುವ ಕೀ ಆಧಾರದಲ್ಲಿ) ಎಸ್‌ಆರ್‌ಎಸ್ ಹಿರಿಮೆಗೆ ಹೊಸಗರಿ ಮೂಡಿಸಿದೆ.


ಈ ಎಲ್ಲ ಸರಣಿ ಸಾಧನೆಗಳಿಂದ ಉತ್ತೇಜನಗೊಂಡ ಎಸ್‌ಆರ್‌ಎಸ್ ಪಿಯು ಕಾಲೇಜು, ಎರಡು ವರ್ಷಗಳ 'ಮೆಡಿಕಲ್ ಸೀಟ್ ಗ್ಯಾರಂಟಿ' ಯೋಜನೆಯನ್ನು ಪರಿಚಯಿಸುವ ಮೂಲಕ ಪಿಯು ಶಿಕ್ಷಣಕ್ಕೆ ಹೊಸ ಮೆರುಗು ನೀಡಲು ಮುಂದಾಗಿದೆ. ನೀಟ್, ಜೆಇಇ, ಕೋಚಿಂಗ್‌ನಲ್ಲಿ ಈಗಾಗಲೇ ಪರಿಣತಿ ಸಾಧಿಸಿ, ರಾಷ್ಟ್ರಮಟ್ಟದ ರ್‍ಯಾಂಕ್ ಗಳಿಸಿರುವ ಎಸ್‌ಆರ್‌ಎಸ್ ಪಿಯು ಕಾಲೇಜು ಇನ್ನೊಂದು ಹೆಜ್ಜೆ ಮುಂದಿಟ್ಟು ಈ ವರ್ಷದಿಂದ ನೀಟ್ ಲಾಂಗ್‌ಟರ್ಮ್ ಆಕಾಂಕ್ಷಿಗಳಿಗೂ 'ಮೆಡಿಕಲ್ ಸೀಟ್ ಗ್ಯಾರಂಟಿ ಯೋಜನೆ' (ಸ್ಕೀಮ್) ಜಾರಿಗೆ ತಂದಿದೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಈ ಮೆಡಿಕಲ್ ಸೀಟ್ ಗ್ಯಾರಂಟಿ ಯೋಜನೆಯಡಿ ದಾಖಲಾದ ಪ್ರತಿಯೊಬ್ಬರಿಗೂ ವೈದ್ಯಕೀಯ ಸೀಟಿನ ಶೇ 100ರಷ್ಟು ಗ್ಯಾರಂಟಿ (ಖಾತ್ರಿ) ನೀಡಲಾಗುವುದು. ಈಗಾಗಲೇ ಪ್ರಸ್ತುತ ಸಾಲಿನ ಪ್ರಥಮ ಪಿಯುಸಿ ಅಧ್ಯಯನ ಮಾಡುತ್ತಿರುವ ಮೆಡಿಕಲ್ ಸ್ಟಾರ್ ಬ್ಯಾಚಿನ ಹಾಗೂ ಲಾಂಗ್‌ಟರ್ಮ್ ವಿದ್ಯಾರ್ಥಿಗಳಿಗೆ ಸೀಟ್ ಗ್ಯಾರಂಟಿ ಪ್ರೋಗ್ರಾಂ ಅಡಿಯಲ್ಲಿ ತರಬೇತಿ ನೀಡುತ್ತಿದ್ದು, ಸೀಟ್ ಪಡೆಯದಿದ್ದರೆ ಕೋಚಿಂಗ್ ಶುಲ್ಕವನ್ನು ಹಿಂದಿರುಗಿಸಲಾಗುವುದು. ಈ ಸ್ಕೀಮಿಗೆ ನೀಟ್ ತರಬೇತಿ ಕ್ಷೇತ್ರದಲ್ಲಿ ಅಪಾರ ಅನುಭವ ಹೊಂದಿರುವ ವಿಷಯತಜ್ಞರನ್ನು ನೇಮಿಸಲಾಗಿದೆ. ಕೋಟಾ, ಹೈದರಾಬಾದ್ ಹಾಗೂ ದೆಹಲಿಯ ಪ್ರತಿಷ್ಠಿತ ತರಬೇತಿ ಸಂಸ್ಥೆಗಳ ವಿಷಯ ಪರಿಣಿತರಾದ ಇವರು ಪ್ರತಿಷ್ಠಿತ ಖರಗ್‌ಪುರ ಐಐಟಿ ಹಾಗೂ ಚೆನ್ನೈ ಐಐಟಿಯಿಂದ ಡಾಕ್ಟರೇಟ್ ಪದವಿ ಪಡೆದವರಾಗಿದ್ದಾರೆ.

ತಮ್ಮ ಬೋಧನೆ ಹಾಗೂ ತರಬೇತಿಯಿಂದಲೇ ಖ್ಯಾತಿಗಳಿಸಿರುವ ಇವರು, ಈಗಾಗಲೇ ಮಂಗಳೂರು ಹಾಗೂ ಹೈದರಾಬಾದ್‌ನ ಪ್ರತಿಷ್ಠಿತ ಪಿಯು ಕಾಲೇಜುಗಳಲ್ಲಿ ತರಬೇತಿ ನೀಡುತ್ತಿದ್ದಾರೆ. ಇಂತಹ ವಿಷಯತಜ್ಞರೇ ಗ್ಯಾರಂಟಿ ಸ್ಕೀಂನ ಉಸ್ತುವಾರಿ ಹಾಗೂ ಮಾರ್ಗದರ್ಶಕರಾಗಿರುತ್ತಾರೆ. ವೃತ್ತಿಪರ ಹಾಗೂ ಅನುಭವಿ ವಿಷಯ ತಜ್ಞರನ್ನು ಹೊಂದಿ ನೀಟ್, ಜೆಇಇ, ಸಿಇಟಿಯಲ್ಲಿ ಉತ್ತಮ ಫಲಿತಾಂಶ ಗಳಿಸಿರುವ ಎಸ್‌ಆರ್‌ಎಸ್ ಪಿಯು ಕಾಲೇಜಿಗೆ ರಾಷ್ಟ್ರಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಯಾದ ನೀಟ್‌ನಲ್ಲಿ ಹೊಸ ಇತಿಹಾಸ ಬರೆಯುವಲ್ಲಿ ಕಾಲೇಜಿನ ಆಡಳಿತ ಮಂಡಳಿಯ ಈ ನಿರ್ಧಾರ ಮಹತ್ವದ್ದಾಗಿದೆ.

ಕರ್ನಾಟಕದ ಮೂಲೆ ಮೂಲೆಗಳಿಂದ ಬರುವ ಸಾವಿರಾರು ವೈದ್ಯಕೀಯ ಆಕಾಂಕ್ಷಿಗಳಿಗೆ ಸುಮಾರು 12 ಎಕರೆ ದೊಡ್ಡ ಕ್ಯಾಂಪಸ್ ಅನ್ನು ಹೊಂದಿರುವ ಕಾಲೇಜಿನಲ್ಲಿ ಪ್ರತ್ಯೇಕ ಸುಸಜ್ಜಿತ ಹಾಸ್ಟೆಲ್ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟು ನಿರಂತರ ಅಧ್ಯಯನಕ್ಕೆ ಅಣಿಗೊಳಿಸಲಾಗಿದೆ.




ಟಾರ್ಗೆಟ್–700

'ಎಸ್‌ಆರ್‌ಎಸ್ ಪಿಯು ಕಾಲೇಜಿನ 'ಮೆಡಿಕಲ್ ಲಾಂಗ್‌ಟರ್ಮ್' ವಿದ್ಯಾರ್ಥಿಗಳು ಹತ್ತು ತಿಂಗಳ ಅವಧಿಯಲ್ಲಿ ಸುಮಾರು 75,000 – 80,000 ಪ್ರಶ್ನೆಗಳನ್ನು ಅಭ್ಯಾಸ ಮಾಡುತ್ತಾರೆ. ವಿದ್ಯಾರ್ಥಿಗಳು ಒಟ್ಟು 40 ವೀಕೆಂಡ್ ಪರೀಕ್ಷೆ ಹಾಗೂ 60 ಪೂರ್ಣ ಪ್ರಮಾಣದ ಪರೀಕ್ಷೆಗಳನ್ನು ಎದುರಿಸಿಬೇಕಾಗುತ್ತದೆ. ಪ್ರತಿದಿನ ವಿಷಯವಾರು 75 ರಿಂದ 80 ಪ್ರಶ್ನೆಗಳನ್ನು ಪ್ರತಿ ವಿದ್ಯಾರ್ಥಿಯು ಅಭ್ಯಸಿಸಬೇಕಾಗುತ್ತದೆ' ಎಂದು ಎಸ್‌ಆರ್‌ಎಸ್ ಸಮೂಹ ಶಿಕ್ಷಣ ಸಂಸ್ಥೆಯ ಬಿ.ಎ.ಲಿಂಗಾರೆಡ್ಡಿ ತಿಳಿಸಿದ್ದಾರೆ.

'ವಿದ್ಯಾರ್ಥಿಗಳು 200 ದಿನಗಳಲ್ಲಿ 60,000 ಪ್ರಶ್ನೆಗಳು ಹಾಗೂ 100 ಟೆಸ್ಟ್‌ಗಳ ಪ್ರಶ್ನೆಪತ್ರಿಕೆಗಳಿಂದ ಒಟ್ಟು 20,000 ಪ್ರಶ್ನೆಗಳನ್ನು ಅಭ್ಯಾಸ ಮಾಡುತ್ತಾರೆ. ಇದರ ಜೊತೆಗೆ ಕೋಟಾ ಹಾಗೂ ಹೈದರಾಬಾದ್‌ನ ಪ್ರತಿಷ್ಠಿತ ಕಾಲೇಜುಗಳ ಅತ್ಯುತ್ತಮ ಪ್ರಶ್ನೆಪತ್ರಿಕೆಗಳನ್ನೂ ಅಭ್ಯಾಸಕ್ಕಾಗಿ ನೀಡಲಾಗುತ್ತದೆ. ಈ ಮೆಡಿಕಲ್ ಲಾಂಗ್‌ಟರ್ಮ್ ಗ್ಯಾರಂಟಿ ಸ್ಕೀಂ ಅಡಿಯಲ್ಲಿ ಬರುವ ವಿದ್ಯಾರ್ಥಿಗಳು 2023ನೇ ಸಾಲಿನಲ್ಲಿ ಆಯಾ ಮೀಸಲಾತಿ ಅಡಿ ವೈದ್ಯಕೀಯ ತರಬೇತಿ ಅರ್ಹತೆಗಾಗಿ ಎನ್‌ಟಿಎ ನಿಗದಿಪಡಿಸುವ ಅಂಕಗಳನ್ನು ಪ್ರತಿ ವಾರ ಕಾಲೇಜಿನಲ್ಲಿ ನಡೆಸುವ ಟೆಸ್ಟ್‌ಗಳಲ್ಲಿ ಕಾಯ್ದುಕೊಳ್ಳಲೇಬೇಕು' ಎಂದು ಮಾಹಿತಿ ನೀಡಿದ್ದಾರೆ.

'ಜನವರಿ ಹೊತ್ತಿಗೆ 650ಕ್ಕೂ ಹೆಚ್ಚು ಅಂಕಗಳನ್ನು ಗಳಿಸುವ ವಿದ್ಯಾರ್ಥಿಗಳನ್ನು ಗುರುತಿಸಿ ಅವರಿಗೆ ನಿಯಮಿತವಾಗಿ ಆನ್‌ಲೈನ್ ಪರೀಕ್ಷೆಗಳನ್ನು ನೀಡಿ ಅಂತಿಮ ನೀಟ್ ಪರೀಕ್ಷೆಯಲ್ಲಿ 720ಕ್ಕೆ 700 ಅಂಕಗಳಿಸಲು ಶಕ್ತರಾಗುವಂತೆ ತಯಾರು ಮಾಡಲಾಗುತ್ತದೆ' ಎಂಬ ಭರವಸೆ ನೀಡಿದ್ದಾರೆ.



ಶ್ರೀ. ಬಿ.ಎ.ಲಿಂಗಾರೆಡ್ಡಿ
ಅಧ್ಯಕ್ಷರು, ಎಸ್‌ಆರ್‌ಎಸ್ ಸಮೂಹ ಶಿಕ್ಷಣ ಸಂಸ್ಥೆಗಳು, ಚಿತ್ರದುರ್ಗ

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ
ಮೊಬೈಲ್ ಸಂಖ್ಯೆ : 9591453336, 9900000811, 9901852435
ವೆಬ್‌ಸೈಟ್: www.srspucollege.in

ಶಿವಾಜಿ ಕಾಗಣೀಕರ ಪರಿಸರ ಪ್ರೇಮ, ಉತ್ತಮ ಫಲ ಕೊಡುತ್ತಿರುವ ಮರಗಳು

ಹಸಿರು ಹೊದ್ದ ಗುಡ್ಡಗಾಡು

• ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: 'ಬಂಬರಗಾ, ಕಟ್ಟಣಭಾವಿ, ದೇವಗಿರಿ, ನಿಂಗ್ಯಾನಟ್ಟಿ, ಗುರಾಮಟ್ಟಿ, ಇದ್ದಲಹೊಂಡ ಗ್ರಾಮಗಳು ಗುಡ್ಡಗಾಡು ಪ್ರದೇಶದಿಂದ ಕೂಡಿದ್ದವು. ಇಲ್ಲಿ ಗುಡ್ಡ ಕೊರೆದು ರೈತರು ಕೃಷಿ ಮಾಡಿದರೂ, ಉತ್ತಮ ಫಸಲು ಬರುತ್ತಿರಲಿಲ್ಲ. ಅವರಿಗೆ ಅನುಕೂಲವಾಗಲೆಂದು 1995ರಿಂದ 2010ರ ಅವಧಿಯಲ್ಲಿ ಕೃಷಿಭೂಮಿ, ಬದುಗಳು, ಹಳ್ಳ-ಕೆರೆಯ ದಂಡೆಯಲ್ಲಿ ನೆಟ್ಟಿದ್ದ ಸಸಿಗಳಿಂದು ಆಳೆತ್ತರಕ್ಕೆ ಬೆಳೆದುನಿಂತಿವೆ. ಇವು ರೈತರಿಗೆ ಪ್ರತಿವರ್ಷ ಉತ್ತಮ ಆದಾಯ ತಂದುಕೊಡುತ್ತಿವೆ'

–ಹೀಗೆಂದು ಮಾತು ಆರಂಭಿಸಿದವರು ತಾಲ್ಲೂಕಿನ ಕಡೋಲಿಯ ಪರಿಸರವಾದಿ ಶಿವಾಜಿ ಕಾಗಣೀಕರ.

ಕಳೆದ ನಾಲ್ಕು ದಶಕಗಳಿಂದ ಬೆಳಗಾವಿ ತಾಲ್ಲೂಕಿನ ಗಡಿ ಗ್ರಾಮಗಳಲ್ಲಿ ಅವರು ಸದ್ದಿಲ್ಲದೆ 'ಹಸಿರು ಕ್ರಾಂತಿ' ಮಾಡುತ್ತಿದ್ದಾರೆ. ಒಂದು ಕಾಲಕ್ಕೆ ಬೆಟ್ಟ-ಗುಡ್ಡಗಳಿಂದಲೇ ಕೂಡಿದ್ದ ಗ್ರಾಮಗಳು, ಅವರ ಪ್ರಯತ್ನದಿಂದಾಗಿ ಹಸಿರು ಹೊದಿಕೆ ಹೊದ್ದು ನಳನಳಿಸುತ್ತಿವೆ. ತಮ್ಮ ಬದುಕಿಗೆ ಆಧಾರವಾದ ಮರಗಳನ್ನು ಸಾವಿರಾರು ರೈತರು ನಿರ್ವಹಣೆ ಮಾಡುತ್ತಿದ್ದಾರೆ.

2 ಲಕ್ಷ ಸಸಿಗಳು ಸಮೃದ್ಧವಾಗಿ ನಿಂತಿವೆ:

'1985ರಿಂದ ನಿಂಗ್ಯಾನಟ್ಟಿ, ಬಂಬರಗಾ ಶಾಲೆಗಳಲ್ಲಿ ಸಸಿ ನೆಡುವುದನ್ನು ಆರಂಭಿಸಿದೆ. 1995ರಲ್ಲಿ ಜರ್ಮನ್‌ನ ರುಡಾಲ್ಫ್ ಕಂಪನಿ ಹಾಗೂ ಜನ ಜಾಗರಣ ಸಂಸ್ಥೆ ಸಹಯೋಗದಲ್ಲಿ 'ಜಲಾನಯನ ಪ್ರದೇಶ ಅಭಿವೃದ್ಧಿ ಯೋಜನೆ' ಕೈಗೆತ್ತಿಕೊಂಡೆವು. ಈ ಭಾಗದಲ್ಲಿ ಹಸಿರುಮಯ ವಾತಾವರಣ ನಿರ್ಮಾಣದ ಜೊತೆಗೆ ರೈತರಿಗೆ ನೆರವಾಗುವುದು ನಮ್ಮ ಉದ್ದೇಶವಾಗಿತ್ತು. ಇದಕ್ಕೆ ಕಂಪನಿ ₹30 ಲಕ್ಷ ಅನುದಾನ ಕೊಟ್ಟಿತು. ಸತತ 15 ವರ್ಷಗಳ ಕಾಲ 2.5 ಲಕ್ಷ ಸಸಿಗಳನ್ನು ನೆಟ್ಟೆವು. ಅವುಗಳಲ್ಲಿ 2 ಲಕ್ಷ ಬದುಕುಳಿದಿವೆ. ಇಳಿಜಾರು ಪ್ರದೇಶಗಳಲ್ಲಿ ಹರಿದುಹೋಗುತ್ತಿದ್ದ ಮಳೆನೀರನ್ನು ಅಲ್ಲಿಯೇ ಇಂಗಿಸುವ ವ್ಯವಸ್ಥೆ ಮಾಡಿದೆವು. ಗೋಡಂಬಿ, ಹಲಸು, ಮಾವು, ಬಿದಿರಿನ ಮರಗಳು ರೈತರ ಕೈಹಿಡಿದಿವೆ' ಎಂದು ಹೇಳಿದ 74ರ ಹರೆಯದ ಕಾಗಣೀಕರ ಮಾತಿನಲ್ಲಿ ಬೆಳಕಿತ್ತು.

'ನಾವು ಪರಿಸರ ಸಂರಕ್ಷಣೆಯೊಂದಿಗೆ ಜಲಸಂರಕ್ಷಣೆಗೂ ಒತ್ತು ಕೊಟ್ಟಿದ್ದೇವೆ. ನಿಂಗ್ಯಾನಟ್ಟಿಯಲ್ಲಿ ಮೂರು, ಕಟ್ಟಣಭಾವಿಯಲ್ಲಿ ಎರಡು, ಗುರಾಮಟ್ಟಿಯಲ್ಲಿ ಒಂದು ಕೆರೆ ಅಭಿವೃದ್ಧಿಪಡಿಸಿದ್ದೇವೆ. ಕಟ್ಟಣಭಾವಿ, ಗುರಾಮಟ್ಟಿ, ಇದ್ದಲಹೊಂಡದಲ್ಲಿ ತೆರೆದ ಬಾವಿ ಕೊರೆಯಿಸಿದ್ದೇವೆ. ಜೊತೆಗೆ ಹಳ್ಳಗಳು, ಕಾಲುಗೆಗಳನ್ನು ಪುನಶ್ಚೇತನಗೊಳಿಸಿದ್ದರಿಂದ ಈ ಭಾಗದಲ್ಲಿ ಅಂತರ್ಜಲ ಮಟ್ಟ ಹೆಚ್ಚಿದೆ. ನಾವು ಅಭಿವೃದ್ಧಿಗೊಳಿಸಿದ ಜಲಮೂಲಗಳು ಜನ-ಜಾನುವಾರುಗಳ ದಾಹ ನೀಗಿಸುತ್ತಿವೆ' ಎಂದು ವಿವರಿಸಿದರು.

ಶಿವಾಜಿ ಕಾಗಣೀಕರ ಅವರು ಬಂಬರಗಾ, ನಿಂಗ್ಯಾನಟ್ಟಿಯ ರಸ್ತೆಬದಿಯಲ್ಲೂ ಹಲವು ಸಸಿ ಬೆಳೆಸಿದ್ದಾರೆ. ಇದರಿಂದಾಗಿ ಆಹ್ಲಾದಕರ ವಾತಾವರಣ ನಿರ್ಮಾಣವಾಗಿದ್ದು, ನೂರಾರು ಸವಾರರು ಈ ಮಾರ್ಗದಲ್ಲಿ ನಿತ್ಯ ಖುಷಿಯಿಂದ ಸಂಚರಿಸುತ್ತಿದ್ದಾರೆ.

ಪರಿಸರ ಸಂರಕ್ಷಣೆ ಕ್ಷೇತ್ರದಲ್ಲಿ ಶಿವಾಜಿ ಕಾಗಣೀಕರ ಮಾಡಿದ ಸಾಧನೆ ಪರಿಗಣಿಸಿ, ರಾಜ್ಯ ಸರ್ಕಾರ 2019ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. ಡಿ.ದೇವರಾಜ ಅರಸು ಪ್ರಶಸ್ತಿ ಸೇರಿದಂತೆ ಹಲವು ಪುರಸ್ಕಾರಗಳಿಗೆ ಅವರು ಭಾಜನವಾಗಿದ್ದಾರೆ.

'ಮರಗಳೇ ನಮಗೆ ಆಧಾರ'

'ನನ್ನದು 1 ಎಕರೆ, 10 ಗುಂಟೆ ಜಮೀನಿದೆ. ಅಲ್ಲಿ ರಾಗಿ, ಶೇಂಗಾ ಬೆಳೆಯುತ್ತಿದ್ದೆ. ಒಮ್ಮೊಮ್ಮೆ ಉತ್ತಮ ಫಸಲೇ ಬರುತ್ತಿರಲಿಲ್ಲ. ಆದರೆ, ಶಿವಾಜಿ ಕಾಗಣೀಕರ ನೆಟ್ಟು ಪೋಷಿಸಿದ ಮಾವು, ತೆಂಗು, ಚಿಕ್ಕು, ಹಲಸು, ಬೇವಿನ ಮರಗಳೇ ನಮಗೀಗ ಆಧಾರವಾಗಿವೆ. ಅವುಗಳಿಂದ ಉತ್ತಮ ಆದಾಯ ಕೈಗೆಟುಕುತ್ತಿದ್ದು, ನೆಮ್ಮದಿಯಿಂದ ಬದುಕು ಸಾಗಿಸುವಂತಾಗಿದೆ' ಎಂದು ನಿಂಗ್ಯಾನಟ್ಟಿಯ ಶಂಕರ ಹಿರೇಮಠ ಹೇಳಿದರು.



ಬೆಳಗಾವಿ ತಾಲ್ಲೂಕಿನ ನಿಂಗ್ಯಾನಟ್ಟಿನಲ್ಲಿ ತಾವು ನೆಟ್ಟು ಪೋಷಿಸಿದ ಮರ ತೋರಿಸುತ್ತಿರುವ ಪರಿಸರವಾದಿ ಶಿವಾಜಿ ಕಾಗಣೀಕರ /ಪ್ರಜಾವಾಣಿ ಚಿತ್ರ

ಅಂದು ಮಾಡಿದ ಕೆಲಸ ಈಗ ಫಲ ಕೊಡುತ್ತಿದೆ. 2 ಲಕ್ಷ ಸಸಿಗಳು ಸಮೃದ್ಧವಾಗಿ ಬೆಳೆದುನಿಂತಿವೆ
ಶಿವಾಜಿ ಕಾಗಣೀಕರ, ಪರಿಸರವಾದಿ

ಹಸಿರೇ ಉಸಿರು ಎನ್ನುವುದು ಬರೀ ಮಾತಾದರೆ ಸಾಲದು. ಅದು ನಿತ್ಯದ ಕಾಯಕದಲ್ಲೂ ಒಡಮೂಡಿದರೆ ಹಸಿರೇ ಹೊನ್ನು ಆದೀತು. ಅಂಥ ಹೊನ್ನಿನ ಕಾಯಕ ನಿರತರಾದವರ ಹಸಿರಿನ ಕಥೆಗಳು ಇಲ್ಲಿವೆ

ನಾನು ಹಸಿರಾಗಿದ್ದೇನೆ...

• ರಾಜೇಂದ್ರ ಹೆಗಡೆ

ಶಿರಸಿ: ಅಜಮಾಸು 400 ಎಕರೆ ಬೆಟ್ಟದ ಹರವಿನಲ್ಲಿ ಪುಟ್ಟಪುಟ್ಟ ಸಹಸ್ರಾರು ಹೊಸ ಗಿಡಗಳು ತಲೆ ಎತ್ತುತ್ತಿವೆ. ವಿವಿಧ ಜಾತಿಯ ಬೀಜಗಳು ಸಸಿಯಾಗಲು ಮಳೆಗೆ ಕಾಯುತ್ತಿವೆ. ಈಗ ನನ್ನೊಡಲು ತಂಪಾಗಿದೆ, ಬೇಸಿಗೆಯಲ್ಲೂ ಹಸಿರು ಹೊದ್ದು ಸೊಂಪಾಗಿದೆ.

ಹಸಿರಿನಿಂದ ಮೈತುಂಬಿಕೊಂಡು ಕಣ್ಣು ಕುಕ್ಕುವ ನಾನು ದಶಕಗಳ ಹಿಂದೆ 'ಕಳವೆ'ಯೆಂಬ ಊರಿನ ಬೋಳು ಬೆಟ್ಟವಾಗಿದ್ದೆ. ನನ್ನೊಡಲಲ್ಲಿ ಉರುವಲಿಗೆ ಬಳಸುವ ಮರಗಳಷ್ಟೇ ಇತ್ತು. ಬೇಕಾದಾಗ ಕಡಿದು ಕೊಂಡೊಯ್ಯುತ್ತಿದ್ದವರು ಮತ್ತೆ ನನ್ನ ನೋಡುತ್ತಿದ್ದುದು ವರ್ಷವಾದ ನಂತರವೇ. ಆದರೀಗ ನನ್ನ ಹಸಿರಸಿರಿ ನೋಡಲು ಜನ ಸಾಗರ.

ಯೋಚನೆ ಹಾಗೂ ಯೋಜನೆಯಲ್ಲಿ ಹಸಿರು ಪ್ರೀತಿಯಿದ್ದರೆ ಬರಡು ಭೂಮಿ ಕೂಡ ಸಹಜ ಅರಣ್ಯದಂತಾಗುತ್ತದೆ ಎಂಬುದಕ್ಕೆ ನಾನು ಸಾಕ್ಷಿಯಾಗಿದ್ದೇನೆ. 2001ರವರೆಗೂ ನಾನು ಸಾಮಾನ್ಯರಂತೆ ಇದ್ದೆ. ಬೇಸಿಗೆಯಲ್ಲಿ ಮೈತುಂಬ ಬಿರುಕು. ದಾಹವಾದರೆ ನೀರಿಲ್ಲ. ನನ್ನಿಂದ ಎಲ್ಲವೂ ದೂರಾಗಿತ್ತು. ಆಗ ಗ್ರಾಮದಲ್ಲಿ ರಸ್ತೆ ನಿರ್ಮಾಣ ನಡೆದಿತ್ತು. ಅದಕ್ಕೆ ನನ್ನೊಡಲ ಮಣ್ಣನ್ನು ತೆಗೆಯಲಾಗುತ್ತಿತ್ತು. ಪರಿಸರ ಬರಹಗಾರ ಶಿವಾನಂದ ಕಳವೆ ಹಾಗೂ ಗ್ರಾಮದ ಇತರ ಹಸಿರು ಪ್ರೀತಿಯ ವ್ಯಕ್ತಿಗಳು, ಮಣ್ಣು ತೆಗೆಯುವ ಪ್ರದೇಶವನ್ನು ಇಂಗುಗುಂಡಿ ಆಕಾರದಲ್ಲಿ ತೋಡಲು ಸೂಚಿಸಿದರು. ನಂತರ ಮಳೆಯಾಗುತ್ತಿದ್ದಂತೆ ಇಲ್ಲಿನ ತೋಡುಗಳೆಲ್ಲ ಜಲಪಾತ್ರೆಗಳಾಗಿ ನಿಂತಿದ್ದವು. ನಂತರ ನನ್ನೆದುರು ನಡೆದಿದ್ದು ಮಾತ್ರ ಹಸಿರು ತಪಸ್ಸು! ಗ್ರಾಮದಲ್ಲಿ ಪರಿಸರ ಪಾಠ ಆರಂಭವಾಯಿತು. ಓಡುವ ನೀರು ನಿಲ್ಲಿಸುವ, ನಿಂತ ನೀರನ್ನು ನನ್ನಾಳಕ್ಕೆ ಇಂಗಿಸುವ ಮಾದರಿ ಹೆಚ್ಚಿದವು. ಕೆರೆಗಳು ಹುಟ್ಟಿದವು.

ಸುತ್ತಮುತ್ತ ಗಿಡಗಳ ನಾಟಿ ನಡೆಯಿತು. ಬಗೆಬಗೆಯ ಹಣ್ಣುಗಳು, ನೀರು ಹಿಡಿದಿಡುವ ಜಾತಿಯ ಸಸ್ಯಗಳು ತಳವೂರಿದವು. ನನ್ನಾಳದಲ್ಲಿ ತಂಪು ಹೆಚ್ಚಿ ಹತ್ತಿರದ ಹೊಳೆಗೆ ಒರತೆ ನೀರು ಹೊರಸೂಸಲಾರಂಭಿಸಿತು. ಬಿರುಬೇಸಿಗೆಗೂ ಹಸಿರು ಬಣ್ಣ ಕಳೆದುಕೊಳ್ಳದೆ ನಿಲ್ಲುವಂತಾಯಿತು. ಇಲ್ಲಿನವರು 'ಕಾನ್ಮನೆ' ನಿರ್ಮಿಸಿ ಪರಿಸರ ಪಾಠ ಆರಂಭಿಸಿದರು. ಲಕ್ಷಕ್ಕೂ ಹೆಚ್ಚು ಮಂದಿ ಪರಿಸರ ಎಂದರೇನು? ಅರಿತು ನಡೆದರು.

ಇವು ನಿರಂತರವಾಗಿ ನಡೆಯುವಾಗ ನನ್ನ ಮೈಮೇಲೆ ನೆಟ್ಟು ಬೆಳೆಸಿದ ಮರಗಳಿಂದ ಬೀಜಗಳು ಬಿದ್ದು ನೈಸರ್ಗಿಕವಾಗಿ ಸಸಿಗಳು ಹುಟ್ಟಲಾರಂಭಿಸಿದವು. ಅವೆಲ್ಲವೂ ಸೇರಿ ಮುಂದಿನ ಸಂತತಿ ಸೃಷ್ಟಿಸುತ್ತ ನನ್ನನ್ನು ಶ್ರೀಮಂತ ಗೊಳಿಸಿವೆ. ಈವರೆಗೆ ಮೂರು ಲಕ್ಷ ಗಿಡಗಳಿಗೆ ನಾನು ಆಶ್ರಯದಾತೆಯಾಗಿದ್ದೇನೆ. ಕೋಕಂ, ಸಾಲುದೂಪ, ದಾಲ್ಚಿನ್ನಿಯಂಥ ಹೊಸ ಸಸಿಗಳು ತಲೆಯೆತ್ತುತ್ತಿವೆ. ವನ್ಯಜೀವಿಗಳು ಮೊದಲಿಗಿಂತ ಹೆಚ್ಚು ಕಾಣುತ್ತಿವೆ. ತೋಟಪಟ್ಟಿಗೆ ಲಗ್ಗೆಯಿಡುತ್ತಿದ್ದ ಮಂಗಗಳು ಆಹಾರ ಹುಡುಕುತ್ತ ನನ್ನತ್ತ ಬರುತ್ತಿವೆ. ನಾನೀಗ ಸಹಜ ಅರಣ್ಯದತ್ತ ನಿಧಾನಕ್ಕೆ ಹೊರಳುತ್ತಿದ್ದೇನೆ.

ಇತ್ತೀಚೆಗೆ ಶಿವಾನಂದ ಕಳವೆ ಅರಣ್ಯ ಸಿಬ್ಬಂದಿಗೆ ಪಾಠ ಮಾಡುತ್ತ, 'ಅರಣ್ಯೀಕರಣ ಯಶಸ್ಸು ನಾವು ನೆಟ್ಟ ಸಸಿ ಮರವಾಗಿ ಬೆಳೆಯುವುದಲ್ಲ. ಬದಲಾಗಿ ನೆಟ್ಟು ಬೆಳೆಸಿದ ಮರಗಳ ಮುಂದಿನ ಪೀಳಿಗೆ ಅಲ್ಲಿ ಸೃಷ್ಟಿಯಾಗುವುದು ನಿಜವಾದ ಯಶಸ್ಸು' ಎನ್ನುತ್ತಿದ್ದುದು ಕೇಳಿ ಸಮಾಧಾನ ಪಟ್ಟಿದ್ದೇನೆ.



2023ರಲ್ಲಿ ಹಚ್ಚಹಸಿರಿನಿಂದ ಕಂಗೊಳಿಸುತ್ತಿರುವ ಕಳವೆ ಬೆಟ್ಟ

ವೈವಿಧ್ಯದ ಹಸಿರು ತಾಣ...

ಶಿರಸಿ ತಾಲ್ಲೂಕಿನ ಕಳವೆ ಗ್ರಾಮದಲ್ಲಿ ಅಂದಾಜು 110 ಮನೆಗಳು ಸೇರಿ 400 ಎಕರೆಗೂ ಹೆಚ್ಚಿನ ಬೆಟ್ಟಭೂಮಿ ಇದೆ. ಗ್ರಾಮದ ಪ್ರತಿಯೊಬ್ಬರ ಸಹಕಾರದಲ್ಲಿ ಅದು ಸಮೃದ್ಧತೆ ಪಡೆದಿದೆ. ಪ್ರತಿ ಮನೆಗೆ ಸಂಬಂಧಿಸಿದ ಬೆಟ್ಟ ಪ್ರದೇಶದಲ್ಲಿ ವಿವಿಧ ಜಾತಿಗಳ ಗಿಡಗಳ ನಾಟಿ 20 ವರ್ಷಗಳಿಂದ ಸಾಗಿದೆ. ಅರಣ್ಯ ಇಲಾಖೆ ಸಹಕಾರದಲ್ಲಿ ಇಲ್ಲಿ ನಡೆಯುವ ಕಾರ್ಯ-ಚಟುವಟಿಕೆ ರಾಜ್ಯದ ಗಮನ ಸೆಳೆದಿದೆ. ದಶಕಗಳ ಹಿಂದೆ ಹುಲ್ಲಿಗೆ, ಉರುವಲಿಗೆ ಸೀಮಿತವಾಗಿದ್ದ ಕಳವೆಯ ಬೆಟ್ಟಗಳು ಈಗ ವೈವಿಧ್ಯತೆಯ ಹಸಿರು ಹೊದ್ದು ಗಮನ ಸೆಳೆಯುತ್ತಿವೆ.

ಪಶ್ಚಿಮಘಟ್ಟಗಳು ಒಂದು ಪ್ರೇಮ ಕಥನ

• ಸಂಧ್ಯಾ ಹೆಗಡೆ


ಮಂಗಳೂರು: ಪರಿಸರ ವಿಜ್ಞಾನಿ ಡಾ. ಮಾಧವ ಗಾಡ್ಗೀಳ್ ಅವರ ಆತ್ಮಚರಿತ್ರೆಯು ಪ್ರಕಟಣೆಗೆ ಸಿದ್ಧವಾಗುತ್ತಿದ್ದು, ಏಕಕಾಲದಲ್ಲಿ ಕನ್ನಡವೂ ಸೇರಿದಂತೆ ಒಂಬತ್ತು ಭಾಷೆಗಳಲ್ಲಿ ಇದು ಸದ್ಯದಲ್ಲಿ ಪ್ರಕಟವಾಗಲಿದೆ.

ಕನ್ನಡದಲ್ಲಿ 'ಪಶ್ಚಿಮಘಟ್ಟಗಳು; ಒಂದು ಪ್ರೇಮ ಕಥನ' ಹೆಸರಿನಲ್ಲಿ ಪ್ರಕಟವಾಗಲಿರುವ ಈ ಕೃತಿಯು ಸುಮಾರು 250 ಪುಟಗಳನ್ನು ಹೊಂದಿದೆ. ಡಾ. ಗಾಡ್ಗೀಳ್ ಅವರು ಇಂಗ್ಲಿಷ್‌ನಲ್ಲಿ ತಮ್ಮ ಆತ್ಮಚರಿತ್ರೆಯನ್ನು ಬರೆದಿದ್ದು, ಮರಾಠಿ, ಕೊಂಕಣಿ, ಕನ್ನಡ, ಮಲಯಾಳಂ, ತಮಿಳು, ತೆಲುಗು, ಬಂಗಾಳಿ ಮತ್ತು ಹಿಂದಿ ಭಾಷೆಗಳಿಗೆ ಅನುವಾದ ಕಾರ್ಯ ನಡೆಯುತ್ತಿದೆ.

'ಗಾಡ್ಗೀಳ್ ಅವರ ಆತ್ಮಚರಿತ್ರೆಯು ಪ್ರಕೃತಿಯೊಂದಿಗೆ ಅವರ ಗಾಢವಾದ ಸಂಬಂಧ ಮತ್ತು ಪರಿಸರ ಸಂರಕ್ಷಣೆಯಲ್ಲಿ ಅವರ ಅಚಲ ಬದ್ಧತೆಯ ಚಿತ್ರಣವನ್ನು ಒಳಗೊಂಡಿದೆ. ಅವರ ಆತ್ಮಚರಿತ್ರೆಯು ಭಾರತದ ಪರಿಸರ ಪರಂಪರೆಯನ್ನು ಸಂರಕ್ಷಿಸಲು ಓದುಗರನ್ನು ಪ್ರೇರೇಪಿಸುತ್ತದೆ. ಇದು ಪರಿಸರ ಪ್ರೇಮಿಗಳು, ಸಂರಕ್ಷಣಾ ಉತ್ಸಾಹಿಗಳು, ವಿಜ್ಞಾನಿಗಳು ಮತ್ತು ಭಾರತದ ನೈಸರ್ಗಿಕ ಪರಂಪರೆಯ ತಿಳಿವಳಿಕೆಯನ್ನು ಬಯಸುವವರಿಗೆ ಮಾರ್ಗದರ್ಶನ ನೀಡುವಂತಿದೆ. ಅವರ ಆತ್ಮಚರಿತ್ರೆಯು ಪರಿಸರ ಕೋಶವನ್ನು ಓದಿದ ಅನುಭವ ನೀಡಲಿದೆ' ಎನ್ನುತ್ತಾರೆ ಕೃತಿಯನ್ನು ಕನ್ನಡಕ್ಕೆ ಅನುವಾದಿಸುತ್ತಿರುವ ಪರಿಸರ ತಜ್ಞ, ನಿವೃತ್ತ ಪ್ರಾಧ್ಯಾಪಕ ಡಾ. ದೇವಿಪ್ರಸಾದ್ ಅವರು.

'ಮಾಧವ್ ಗಾಡ್ಗೀಳ್ ಅವರು ಪಶ್ಚಿಮ ಘಟ್ಟಗಳ ಶ್ರೀಮಂತ ನೈಸರ್ಗಿಕ ಮತ್ತು ಸಾಂಸ್ಕೃತಿಕ ಪರಂಪರೆಯಿಂದ ಆಕರ್ಷಿತರಾದವರು. ಆದಿವಾಸಿಗಳು, ರೈತರು, ಕುರುಬರು, ಪಶುಸಂಗೋಪಕರು ಮತ್ತು ಮೀನುಗಾರರ ಜೊತೆ ಬೆರೆತು ಕೆಲಸ ಮಾಡಿ ಅವರ ಸಹಕಾರದೊಂದಿಗೆ ಮೂಲಭೂತ ಮತ್ತು ಅನ್ವಯಿಕ ಸಂಶೋಧನೆಯಲ್ಲಿ ತೊಡಗಿದವರು. ಜನತಾ ಜೀವವೈವಿಧ್ಯ ದಾಖಲಾತಿಗಳ ಪರಿಕಲ್ಪನೆಯನ್ನು ಅಭಿವೃದ್ಧಿಪಡಿಸಿದವರು. ಅವರು ಈ ಎಲ್ಲ ಅನುಭವಗಳನ್ನು ಕೃತಿಯಲ್ಲಿ ದಾಖಲಿಸಿದ್ದಾರೆ' ಎನ್ನುವ ಡಾ. ದೇವಿಪ್ರಸಾದ್ ಅವರು, 'ಪಶ್ಚಿಮ ಘಟ್ಟಗಳ ಅಭಿವೃದ್ಧಿಯ ಮೌಲ್ಯಮಾಪನ ಕಾರ್ಯಕ್ರಮ, ಪಶ್ಚಿಮ ಘಟ್ಟಗಳ ಜೀವವೈವಿಧ್ಯ ಅಧ್ಯಯನ ಮತ್ತು ಜನತಾ ಜೀವವೈವಿಧ್ಯ ದಾಖಲಾತಿ ಯೋಜನೆಗಳಲ್ಲಿ ಗಾಡ್ಗೀಳ್ ಅವರ ಜತೆ 15 ವರ್ಷ ಕೆಲಸ ಮಾಡಿದ ಅನುಭವವು, ಕೃತಿ ಅನುವಾದಕ್ಕೆ ಸಹಕಾರಿಯಾಯಿತು' ಎನ್ನುತ್ತಾರೆ.

ಪಶ್ಚಿಮ ಘಟ್ಟಗಳ ಪರಿಸರ ತಜ್ಞರ ವರದಿಯ (ಗಾಡ್ಗೀಳ್ ವರದಿ) ಪೂರ್ಣ ವಿವರಗಳನ್ನು ಈ ಕೃತಿ ನೀಡುತ್ತದೆ. ಕನ್ನಡ ಅನುವಾದದ ಕೃತಿಯನ್ನು ಮಂಗಳೂರಿನ ಆಕೃತಿ ಆಶಯ ಪ್ರಕಾಶನವೂ ಇಂಗ್ಲಿಷ್ ಕೃತಿಯನ್ನು ಪೆಂಗ್ವಿನ್ ಪಬ್ಲಿಕೇಷನ್ಸ್ ಪ್ರಕಟಿಸಲಿವೆ.



ಮಾಧವ ಗಾಡ್ಗೀಳ್

'ಪರಿಸರ ಕಥನಕ್ಕೆ ಮೀಸಲು'

ಗಾಡ್ಗೀಳ್ ಅವರ ಆತ್ಮಚರಿತ್ರೆಯಲ್ಲಿ ಶೇ 10ರಷ್ಟು ವಿವರಗಳು ಮಾತ್ರ ಅವರ ಬಗ್ಗೆ ವಿವರ ಇವೆ. ಇನ್ನುಳಿದ ಎಲ್ಲ ಕಥನಗಳು ಪರಿಸರಕ್ಕೆ ಮೀಸಲಾಗಿವೆ. ಪರಿಸರದ ನಡುವೆ ಕೆಲಸ ಮಾಡುವಾಗ ಅವರಿಗೆ ವಿಜ್ಞಾನಿಗಳೊಂದಿಗೆ ಇರುವಷ್ಟೇ ಆಪ್ತತೆಯ ಖುಷಿ ನೆಲಮೂಲದ ಜ್ಞಾನ ಹೊಂದಿರುವ ಗ್ರಾಮೀಣ ಜನರ ಜನರೊಟ್ಟಿಗೆ ಬೆರೆವಾಗಲೂ ಇರುತ್ತದೆ ಎಂಬ ಸಂಗತಿ ಕೃತಿಯುದ್ದಕ್ಕೂ ಅನುಭವಕ್ಕೆ ಬರುತ್ತದೆ ಎಂದು ಡಾ. ದೇವಿಪ್ರಸಾದ್ ವಿವರಿಸಿದರು.

ಸ್ಥಳೀಯರ ಅಭಿಪ್ರಾಯ ಸಂಗ್ರಹಿಸದೇ ಪರಿಸರ ಕಾನೂನುಗಳನ್ನು ರೂಪಿಸಲಾಗಿದೆ. ಪ್ರಸ್ತುತ ಇರುವ ಕಾನೂನು ಬದಲಾಗಬೇಕು. ಸ್ಥಳೀಯರ ಅಭಿಪ್ರಾಯ ಆಧರಿಸಿ ಕಾನೂನು ರೂಪುಗೊಳ್ಳಬೇಕು ಎಂದು ಅವರು ಪ್ರತಿಪಾದಿಸುತ್ತಾರೆ ಎಂದು ತಿಳಿಸಿದರು.

ಉದ್ಯೋಗ ಖಾತ್ರಿ, ಮರಗಳ ತಂಪೂ ಖಾತ್ರಿ

• ಮನೋಜಕುಮಾರ್ ಗುದ್ದಿ

ಕಲಬುರಗಿ: ಬೇಸಿಗೆ ಬಿಸಿಲು ವಿಪರೀತವಾದ ದಿನಗಳಲ್ಲಿ 40ರಿಂದ 45 ಡಿಗ್ರಿ ಸೆಲ್ಸಿಯಸ್ ತಾಪಮಾನ ಇರುವ ಕಲಬುರಗಿ ಜಿಲ್ಲೆಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ (ನರೇಗಾ) ನೆಟ್ಟಿದ್ದ 68 ಸಾವಿರಕ್ಕೂ ಅಧಿಕ ಸಸಿಗಳು ಮರವಾಗಿ ತಂಪು ನೀಡುತ್ತಿವೆ.

ಕಲಬುರಗಿಯಿಂದ ಜೇವರ್ಗಿಗೆ ಹೋಗುವ ಹೆದ್ದಾರಿಯ ಎಡಬದಿಯಲ್ಲಿ ಹೊನ್ನಕಿರಣಗಿ ದಾಟಿ ಫಿರೋಜಾಬಾದ್ ಸಮೀಪಿಸುತ್ತಿದ್ದಂತೆಯೇ ಸಾಲಾಗಿ ಬೆಳೆದು ನಿಂತ ಬೇವು, ಹೊಂಗೆ, ಅರಳಿ, ಬಸರಿ, ಬಸವನ ಪಾದ, ಬಿದಿರು, ಗೊಬ್ಬರಗಿಡ, ತಪಸಿ, ನೆಲ್ಲಿ, ನೇರಳೆ, ಮಾವು, ನುಗ್ಗೆ, ಸೀತಾಫಲ ಕಣ್ಮನ ಸೆಳೆಯುತ್ತವೆ. ಅಲ್ಲಿ ನಿಂತಷ್ಟು ಹೊತ್ತೂ ಕಲಬುರಗಿ ಜಿಲ್ಲೆಯಲ್ಲಿ ಇದ್ದೇವೆಯೋ ಇಲ್ಲವೋ ಎನ್ನುವಷ್ಟು ತಂಪು ವಾತಾವರಣ ಅಲ್ಲಿ ನಿರ್ಮಾಣವಾಗಿದೆ.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದ ಅನಿರುದ್ಧ ಶ್ರವಣ್ ಪಿ. (ಈಗ ಕೆಕೆಆರ್‌ಡಿಬಿ ಕಾರ್ಯದರ್ಶಿ), ಹೊನ್ನಕಿರಣಗಿ, ನದಿ ಸಿಣ್ಣೂರ ಗ್ರಾಮ ಪಂಚಾಯಿತಿಗಳ ಪಿಡಿಒಗಳು ಹಾಗೂ ಹೊನ್ನಕಿರಣಗಿಯ ನರೇಗಾ ಕ್ಷೇತ್ರ ಸಹಾಯಕ ಸದಾಶಿವ ಹೈದ್ರಾ ಅವರ ಆಸಕ್ತಿ ಮತ್ತು ಶ್ರಮದಿಂದ ಇದು ಸಾಧ್ಯವಾಗಿದೆ. 2012–13ರಲ್ಲಿ ಕರ್ನಾಟಕ ಇಂಧನ ನಿಗಮಕ್ಕೆ (ಕೆಪಿಸಿ) ಸೇರಿದ 1,500 ಎಕರೆ ಜಾಗ ಪಾಳು ಬಿದ್ದಿತ್ತು. ಅದನ್ನು ನಂತರ ನವೀಕರಿಸಬಹುದಾದ ಇಂಧನ ಮೂಲಗಳ ಅಭಿವೃದ್ಧಿ ನಿಗಮದ ಮೂಲಕ ಸೌರ ವಿದ್ಯುತ್ ಉತ್ಪಾದನೆಗಾಗಿ ಬಳಸುವ ಪ್ರಸ್ತಾವ ಇತ್ತು. ಇದೀಗ ಒಂದು ಸಾವಿರ ಎಕರೆಯನ್ನು ಕೈಮಗ್ಗ ಮತ್ತು ಜವಳಿ ಇಲಾಖೆಗೆ ಹಸ್ತಾಂತರಿಸಲಾಗಿದ್ದು, ಇಲ್ಲಿ ಕೇಂದ್ರ ಸರ್ಕಾರ ಘೋಷಿಸಿದಂತೆ ಜವಳಿ ಪಾರ್ಕ್ ತಲೆ ಎತ್ತಲಿದೆ.

ಈ ಪ್ರದೇಶದ 16 ಎಕರೆ ಸುತ್ತಳತೆಯಲ್ಲಿ ನರೇಗಾ ಯೋಜನೆಯಡಿ ಸಸಿಗಳನ್ನು ನೆಡಬೇಕು ಎಂಬ ಚಿಂತನೆಯನ್ನು ಅನಿರುದ್ಧ ಶ್ರವಣ್ ಅವರು ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸ ಮಾಡುತ್ತಿದ್ದ ಗ್ರಾಮದ ಕೂಲಿಕಾರರಲ್ಲಿ ಬಿತ್ತಿದರು. ಅದಕ್ಕೆ ತಗಲುವ ವೆಚ್ಚವನ್ನು ಯೋಜನೆಯ ನಿಧಿಯಿಂದ ಭರಿಸಲಾಗುವುದು ಎಂದು ಭರವಸೆ ತುಂಬಿದರು. ಇಷ್ಟು ಹೇಳಿದ್ದೇ ತಡ ಒಂದು ಹಂತದಲ್ಲಿ ಸುಮಾರು 1,100 ನರೇಗಾ ಕಾರ್ಮಿಕರು ಸಸಿಗಳು ಹಾಗೂ ಬೀಜಗಳನ್ನು ನೆಡಲು ಗುಂಡಿಗಳನ್ನು ತೋಡಿದರು. ಪ್ರತಿ ವರ್ಷದ ಬೇಸಿಗೆಯಲ್ಲಿ ಸದಾಶಿವ ಹೈದ್ರಾ ಅವರು ಟ್ರ್ಯಾಕ್ಟರ್ ಮೂಲಕ ಸಸಿಗಳಿಗೆ ನೀರು ಹರಿಸಿ ಪೋಷಿಸಿದರು.

ಒಂದು ಹಂತದಲ್ಲಿ ತಮ್ಮ ಜೇಬಿನಿಂದಲೇ ಹಣ ಹಾಕಿಯೂ ಸಸಿಗಳನ್ನು ಜೋಪಾನ ಮಾಡಿದ್ದಾರೆ. ಸಸಿಗಳಿಗೆ ನೀರು ಹಾಕುವ ಸಂದರ್ಭದಲ್ಲಿ ಅಕ್ಕಪಕ್ಕದ ಹೊಲದವರು ಟ್ರ್ಯಾಕ್ಟರ್ ಕೊಂಡೊಯ್ಯಲು ಅಡ್ಡಿಪಡಿಸಿದ ಘಟನೆಯೂ ನಡೆಯಿತು. ಇದೆಲ್ಲವನ್ನೂ ಮೀರಿ 68 ಸಾವಿರ ಮರಗಳು ಎದ್ದು ನಿಂತಿವೆ.

ತಾವು ಸಿಇಒ ಆಗಿದ್ದಾಗ ಸಾಧ್ಯವಾದ ಈ ಸಾರ್ಥಕ ಕೆಲಸವನ್ನು ನೋಡಿ ಕಣ್ತುಂಬಿಕೊಳ್ಳಲು ಅನಿರುದ್ಧ ಶ್ರವಣ್ ಅವರು ಆಗಾಗ ಇಲ್ಲಿಗೆ ಭೇಟಿ ಕೊಡುತ್ತಾರೆ. ಜಿಲ್ಲೆಯ ಬೇರೆಡೆ ತಾಪಮಾನ ಹೆಚ್ಚಾಗಿದ್ದರೆ, ಮರಗಳನ್ನು ನೆಟ್ಟಿರುವ ಪ್ರದೇಶದಲ್ಲಿ ತಾಪಮಾನ ಅಳೆದರೆ ಒಂದೆರಡು ಡಿಗ್ರಿ ಸೆಲ್ಸಿಯಸ್ ಕಡಿಮೆ ದಾಖಲಾಗುತ್ತದೆ. ಇದಕ್ಕಿಂತ ಹೆಚ್ಚಿನ ನೆಮ್ಮದಿ ಇನ್ನೇನು ಬೇಕು ಎನ್ನುತ್ತಾರೆ ಸದಾಶಿವ ಹೈದ್ರಾ.



ಕಲಬುರಗಿ ತಾಲ್ಲೂಕಿನ ನದಿಸಿಣ್ಣೂರ, ಫಿರೋಜಾಬಾದ್ ಬಳಿಯಲ್ಲಿ ಜವಳಿ ಪಾರ್ಕ್ ನಿರ್ಮಣವಾಗುವ ಸ್ಥಳದಲ್ಲಿ ನರೇಗಾ ಯೋಜನೆಯಡಿ ಬೆಳೆದ ಮರಗಳನ್ನು ಸದಾಶಿವ ಹೈದ್ರಾ ವೀಕ್ಷಿಸಿದರು ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಅನಾರೋಗ್ಯ, ವಯಸ್ಸಿನ ಕಾರಣಕ್ಕೆ ಬಿಜೆಪಿಯ 10–12 ಸಂಸದರ ಸ್ವಯಂ ನಿವೃತ್ತಿ

ಲೋಕಸಭೆಗೆ ಬಿಜೆಪಿ–ಜೆಡಿಎಸ್ ಮೈತ್ರಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: 2024ರ ಲೋಕಸಭೆ ಚುನಾವಣೆಯಲ್ಲಿ ಜೆಡಿಎಸ್ ಜತೆ ಮೈತ್ರಿ ಮಾಡಿಕೊಳ್ಳುವ ಕುರಿತು ಬಿಜೆಪಿ ಗಂಭೀರ ಚಿಂತನೆ ನಡೆಸಿದೆ.

ಚುನಾವಣೆಯಲ್ಲಿ ಗೆದ್ದೇ ಗೆಲ್ಲುವ 15 ರಿಂದ 18 ಕ್ಷೇತ್ರಗಳ ಬಗ್ಗೆ ಮಾತ್ರ ಬಿಜೆಪಿ ಹೆಚ್ಚಿನ ಗಮನ ಹರಿಸಲಿದೆ. ಜೆಡಿಎಸ್ ಗೆದ್ದೇ ಗೆಲ್ಲಬಹುದಾದ 5–6 ಕ್ಷೇತ್ರ ಗಳನ್ನು ಆ ಪಕ್ಷಕ್ಕೆ ಬಿಟ್ಟುಕೊಟ್ಟು ಮೈತ್ರಿ ಅಥವಾ ಒಳ ಒಪ್ಪಂದ ಮಾಡಿಕೊಳ್ಳುವ ಬಗ್ಗೆಯೂ ಪಕ್ಷದೊಳಗೆ ಚರ್ಚೆ ನಡೆ ದಿದೆ. ಇದರಿಂದ ಎರಡೂ ಪಕ್ಷಗಳಿಗೂ ಲಾಭ ಆಗುತ್ತದೆ ಎಂದು ಮೂಲಗಳು ಹೇಳಿವೆ.

2019ರಲ್ಲಿ ಅತ್ಯಧಿಕ ಸ್ಥಾನಗಳನ್ನು (25) ಗೆದ್ದಿದ್ದ ಬಿಜೆಪಿ ಈ ಬಾರಿ ಅಷ್ಟು ಸ್ಥಾನಗಳನ್ನು ಗೆಲ್ಲುವ ಸಾಧ್ಯತೆ ಇಲ್ಲ. ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅತ್ಯಧಿಕ ಸ್ಥಾನಗಳನ್ನು ಗೆದ್ದು ಅಧಿಕಾರಕ್ಕೆ ಬಂದಿರುವುದರಿಂದ ಅದರ ಪರಿಣಾಮ ಲೋಕಸಭಾ ಚುನಾವಣೆ ಮೇಲೂ ಆಗಬಹುದು ಎಂಬ ವಾದವೂ ಕೇಳಿ ಬಂದಿದೆ. 28ರಲ್ಲಿ ಬಿಜೆಪಿ 20 ರಿಂದ 22 ಸ್ಥಾನಗಳನ್ನು ಗೆದ್ದು, ಜೆಡಿಎಸ್‌ಗೆ 8 ಸ್ಥಾನಗಳನ್ನು ಬಿಟ್ಟು ಕೊಡಬಹುದು. ಹೀಗಾಗಿ ಜೆಡಿಎಸ್ ಒಪ್ಪಿದರೆ ಮೈತ್ರಿ ಲೇಸು ಎಂಬ ಲೆಕ್ಕಾಚಾರ ಬಿಜೆಪಿಯಲ್ಲಿ ನಡೆದಿದೆ.

10–12 ಸಂಸದರ ಸ್ವಯಂ ನಿವೃತ್ತಿ: ಲೋಕಸಭೆ ಚುನಾವಣೆಗೆ ಬಿಜೆಪಿ ಸಿದ್ಧತೆ ನಡೆಸಿಕೊಳ್ಳುತ್ತಿರುವ ಬೆನ್ನಲ್ಲೇ ವಯಸ್ಸಾಗಿರುವ ಮತ್ತು ಅನಾರೋಗ್ಯದಿಂದ ಬಳಲುತ್ತಿರುವ 10 ರಿಂದ 12 ಸಂಸದರು ಈ ಬಾರಿ ಕಣದಿಂದ ಹಿಂದಕ್ಕೆ ಸರಿಯಲಿದ್ದಾರೆ.

ದಾವಣಗೆರೆ ಸಂಸದ ಸಿದ್ದೇಶ್ವರ, ವಿಜಯಪುರ ಸಂಸದ ರಮೇಶ ಜಿಗಜಿಣಗಿ, ಬೆಂಗಳೂರು ಉತ್ತರ ಸಂಸದ ಡಿ.ವಿ. ಸದಾನಂದಗೌಡ, ಚಿಕ್ಕಬಳ್ಳಾಪುರ ಸಂಸದ ಬಿ.ಎನ್. ಬಚ್ಚೇಗೌಡ, ಉತ್ತರಕನ್ನಡ ಸಂಸದ ಅನಂತಕುಮಾರ್ ಹೆಗಡೆ ಅವರು ಸ್ಪರ್ಧೆಯಿಂದ ಹಿಂದಕ್ಕೆ ಸರಿಯಲಿದ್ದಾರೆ. ಹಾವೇರಿ ಸಂಸದ ಶಿವಕುಮಾರ ಉದಾಸಿ ಚುನಾವಣಾ ರಾಜಕೀಯ ದೂರ ಉಳಿಯುವುದಾಗಿ ಘೋಷಿಸಿದ್ದಾರೆ.

ಬಚ್ಚೇಗೌಡ ಅವರ ಪುತ್ರ ಕಾಂಗ್ರೆಸ್ ಶಾಸಕರಾಗಿದ್ದಾರೆ. ಬಚ್ಚೇಗೌಡರ ವಯಸ್ಸು 80 ದಾಟಿದ್ದು, ಈ ಬಾರಿ ಸ್ಪರ್ಧಿಸುವುದಿಲ್ಲ. ತುಮಕೂರು ಸಂಸದ ಜಿ.ಎಸ್ ಬಸವರಾಜ್ ಅವರು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಬೇಕೋ ಬೇಡವೋ ಎಂಬ ಬಗ್ಗೆ ಗೊಂದಲದಲ್ಲಿದ್ದು, ಅಡ್ಡಗೋಡೆಯ ಮೇಲೆ ದೀಪ ಇಟ್ಟಂತೆ ಮಾತನಾಡಿದ್ದಾರೆ.

ಚಾಮರಾಜನಗರ ಸಂಸದ ವಿ.ಶ್ರೀನಿವಾಸ್ ಪ್ರಸಾದ್ ವಯೋಮಾನದ ಕಾರಣ ಸ್ಪರ್ಧಿಸುವ ಸಾಧ್ಯತೆ ಇಲ್ಲ. ಸಂಗಣ್ಣ ಕರಡಿ ಅವರು ಟಿಕೆಟ್ ನೀಡದಿದ್ದರೆ ರಾಜಕೀಯ ನಿವೃತ್ತಿ ಪಡೆಯುವುದಾಗಿ ಹೇಳಿದ್ದಾರೆ.

ಉತ್ತರಕನ್ನಡದ ಸಂಸದ ಅನಂತಕುಮಾರ್ ಹೆಗಡೆ ಅವರೂ ಅನಾರೋಗ್ಯದಿಂದ ಬಳಲುತ್ತಿದ್ದು, ಅವರೂ ಸ್ಪರ್ಧಿಸುವ ಸಾಧ್ಯತೆ ಇಲ್ಲ. ಬಾಗಲಕೋಟೆಯ ಪಿ.ಸಿ. ಗದ್ದಿಗೌಡರ್ ಸ್ಪರ್ಧೆಯಿಂದ ದೂರ ಉಳಿಯುವ ಸಾಧ್ಯತೆಗಳೇ ಹೆಚ್ಚಿವೆ.

ಮಂಗಳೂರು ಕ್ಷೇತ್ರದಲ್ಲಿ ನಳಿನ್ ಕುಮಾರ್ ಕಟೀಲ್ ಅವರಿಗೆ ಮತ್ತೆ ಟಿಕೆಟ್ ನೀಡಿದರೆ ಅವರ ವಿರುದ್ಧ ತಾವು ಸ್ಪರ್ಧಿಸುವುದಾಗಿ ಅರುಣ್‌ಕುಮಾರ್ ಪುತ್ತಿಲ ಘೋಷಿಸಿದ್ದಾರೆ. ಪುತ್ತೂರಿನಲ್ಲಿ ಬಿಜೆಪಿ ಟಿಕೆಟ್ ನಿರಾಕರಿಸಿದ್ದರಿಂದ ಪಕ್ಷೇತರರಾಗಿ ಸ್ಪರ್ಧಿಸಿ ಅತಿ ಕಡಿಮೆ ಮತಗಳ ಅಂತರದಿಂದ ಸೋತಿದ್ದರು. ಬಿಜೆಪಿ ಮೂರನೇ ಸ್ಥಾನಕ್ಕೆ ತೃಪ್ತಿ ಪಡಬೇಕಾಯಿತು. ಮಂಗಳೂರು ಕ್ಷೇತ್ರವನ್ನು ಶತಾಯಗತಾಯ ಗೆಲ್ಲಲೇಬೇಕಾಗಿರುವುದರಿಂದ ಬಿಜೆಪಿ ಏನು ಮಾಡುತ್ತದೆ ಎಂಬುದನ್ನು ಕಾದು ನೋಡಬೇಕು.

ಸಚಿವ ಸ್ಥಾನ ಸಿಗದಿದ್ದರಿಂದಲೂ ಕೆಲವರು ಬೇಸತ್ತಿದ್ದು, 'ಪಕ್ಷಕ್ಕಾಗಿ ಎಷ್ಟೇ ದುಡಿದರೂ ಪ್ರಯೋಜನವಿಲ್ಲ' ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಕುಟುಂಬ ರಾಜಕಾರಣ ಮತ್ತಿತರ ವಿಷಯಗಳ ಕುರಿತ ಮಾನದಂಡ ಕಟ್ಟುನಿಟ್ಟಾಗಿ ಪಾಲನೆಯಾಗುತ್ತಿಲ್ಲ ಎಂಬ ಬೇಸರ ಅನೇಕರಲ್ಲಿ ಇದೆ. ಆದರೆ, ಈ ಬಗ್ಗೆ ಯಾರೂ ಬಹಿರಂಗ ಹೇಳಿಕೆ ನೀಡಲು ಸಿದ್ಧರಿಲ್ಲ.

ವಿಧಾನಸಭೆ ಚುನಾವಣೆ ಸಂದರ್ಭ ಜಗದೀಶ ಶೆಟ್ಟರ್, ಲಕ್ಷ್ಮಣ ಸವದಿ ಮತ್ತಿತರರು ಟಿಕೆಟ್ ದೊರೆಯದ್ದರಿಂದ ಪಕ್ಷ ತೊರೆದಿದ್ದರು. ತಮಗೂ ಟಿಕೆಟ್ ದೊರೆಯದಿದ್ದರೆ ಆಗ ಎದುರಾಗಬಹುದಾದ ಮುಜುಗರದಿಂದ ತಪ್ಪಿಸಿಕೊಳ್ಳಲು ನಿರ್ಧರಿಸಿರುವ ಕೆಲವು ಹಾಲಿ ಸಂಸದರು ಚುನಾವಣೆಯಲ್ಲಿ ಸ್ಪರ್ಧಿಸದಿರಲು ತೀರ್ಮಾನಿಸಿದ್ದಾರೆ. ಈ ಕುರಿತು ವರಿಷ್ಠರಿಗೆ ಸಂದೇಶ ನೀಡಲಿದ್ದಾರೆ ಎಂದು ಸಂಸದರೊಬ್ಬರು ತಿಳಿಸಿದ್ದಾರೆ.

'ಟಿಕೆಟ್ ನಿರಾಕರಿಸಲಾಗು ತ್ತದೆ ಎನ್ನುವುದಕ್ಕಿಂತಲೂ ಸಾಕಷ್ಟು ಸಂಸದರು ಸ್ವಯಂ ನಿವೃತ್ತಿ ಪಡೆಯಲು ಮುಂದಾಗಿದ್ದಾರೆ. ಹೀಗಾಗಿ ಟಿಕೆಟ್ ನಿರಾಕರಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ' ಎಂದು ಬಿಜೆಪಿಯ ನಾಯಕರೊಬ್ಬರು ಹೇಳಿದ್ದಾರೆ.

'ಜೀ' ಬಗ್ಗೆ ಬಿಜೆಪಿಯಲ್ಲಿ ನಿರಾಸಕ್ತಿ

ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಹೀನಾಯವಾಗಿ ಸೋತ ಬಳಿಕ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್.ಸಂತೋಷ್ (ಸಂತೋಷ್ ಜೀ) ಅವರ ಬಗ್ಗೆ ಪಕ್ಷದ ಒಂದು ವಲಯದಲ್ಲಿ ಅಸಮಾಧಾನ ಮಡುಗಟ್ಟಿದೆ.

ಲೋಕಸಭೆ ಚುನಾವಣೆ ಬಗ್ಗೆ ತಯಾರಿ ನಡೆಸಲು ಸಂತೋಷ್ ಸೂಚನೆ ನೀಡಿದ್ದರು. 'ಸಂತೋಷ್ ಜೀ ಹೇಳಿದ್ದಾರೆ ಎಲ್ಲರೂ ಸಭೆಗೆ ಹಾಜರಾಗಬೇಕು' ಎಂದು ಬೆಂಗಳೂರು ನಗರದ ಶಾಸಕರಿಗೆ ಸೂಚಿಸಿದಾಗ, ಆ ಸಭೆಗೆ ಯಾರೂ ಹಾಜರಾಗಲಿಲ್ಲ ಎಂದು ಮೂಲಗಳು ಹೇಳಿವೆ.

2018 ಮತ್ತು 2023ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಸೋಲಿಗೆ ಸಂತೋಷ್ ಅವರ ಕಾರ್ಯತಂತ್ರವೇ ಕಾರಣ. ಚುನಾವಣೆ ವೇಳೆ ಅಭ್ಯರ್ಥಿ ಆಯ್ಕೆಯಿಂದ ಹಿಡಿದು ಯಾವುದೇ ವಿಚಾರದಲ್ಲೂ ರಾಜ್ಯದ ಘಟಾನುಘಟಿ ನಾಯಕರ ಸಲಹೆಗಳಿಗೂ ಅವರು ಕಿಮ್ಮತ್ತು ನೀಡುತ್ತಿರಲಿಲ್ಲ. ತಮಗೆ ಬೇಕಾದವರನ್ನೇ ಅಭ್ಯರ್ಥಿ ಗಳನ್ನಾಗಿ ಆಯ್ಕೆ ಮಾಡುತ್ತಿದ್ದರು. ಯಡಿಯೂರಪ್ಪ, ಬೊಮ್ಮಾಯಿ ಸೇರಿ ಯಾರ ಮಾತುಗಳನ್ನೂ ಅವರು ಕಿವಿಗೆ ಹಾಕಿಕೊಳ್ಳುತ್ತಿರಲಿಲ್ಲ.

ಹೀಗಾಗಿ 2018ರಲ್ಲಿ ಬಹುಮತ ಬರುವುದು ತಪ್ಪಿ ಹೋಯಿತು. 2023 ರಲ್ಲಿ ಪಕ್ಷ ಸೋತು ಸುಣ್ಣವಾಯಿತು. ಸಂಘಟನೆಯೂ ಅತ್ಯಂತ ದುರ್ಬಲವಾಗಿದೆ ಎಂದು ಹೆಸರು ಬಹಿರಂಗಪಡಿಸಲು ಬಯಸದ ನಾಯಕರೊಬ್ಬರು ತಿಳಿಸಿದರು.

ಸಚಿವರ ಹೇಳಿಕೆಯಿಂದ ಗೋ ಹತ್ಯೆ ಹೆಚ್ಚಲಿದೆ: ಬಸವರಾಜ ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೋವುಗಳನ್ನು ಏಕೆ ಕಡಿಯಬಾರದು' ಎಂದು ಪ್ರಶ್ನಿಸಿರುವ ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್ ಅವರ ಹೇಳಿಕೆ ಖಂಡನೀಯ. ಇದರಿಂದಾಗಿ ರಾಜ್ಯದಲ್ಲಿ ಗೋ ಕಳ್ಳಸಾಗಾಣಿಕೆ ಮತ್ತು ಗೋಹತ್ಯೆ ಹೆಚ್ಚಾಗಲಿದೆ' ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಈ ಕುರಿತು ಸರಣಿ ಟ್ವೀಟ್ ಮಾಡಿರುವ ಅವರು,' ಗೋವಿನೊಂದಿಗೆ ಭಾರತೀಯರು ಭಾವನಾತ್ಮಕ ಸಂಬಂಧ ಹೊಂದಿದ್ದು, ತಾಯಿ ಸ್ಥಾನದಲ್ಲಿರುವ ಗೋವನ್ನು ಪೂಜಿಸುತ್ತೇವೆ. ವೆಂಕಟೇಶ್ ಯಾರ ಓಲೈಕೆಗಾಗಿ ಈ ರೀತಿಯ ಹೇಳಿಕೆ ನೀಡಿದ್ದಾರೆ. ತಮಗೆ ನೀಡಿರುವ ಖಾತೆ ಬದಲಿಸಲಿ ಎಂದೊ ಅಥವಾ ಹೈಕಮಾಂಡ್ ಮೆಚ್ಚಿಸುವ ಉದ್ದೇಶಕ್ಕೊ' ಎಂದು ಬೊಮ್ಮಾಯಿ ಪ್ರಶ್ನಿಸಿದ್ದಾರೆ.

'ಗೋಹತ್ಯೆ ನಿಷೇಧ ಪ್ರಥಮವಾಗಿ ಪ್ರತಿಪಾದಿಸಿದ್ದು ರಾಷ್ಟ್ರಪಿತ ಮಹಾತ್ಮಾಗಾಂಧಿ. ಇವರು ಪ್ರತಿಪಾದಿಸಿದ ಗೋಹತ್ಯೆ ನಿಷೇಧವನ್ನು 1960ರ ದಶಕದಲ್ಲಿ ಹಲವು ರಾಜ್ಯಗಳಲ್ಲಿ ಜಾರಿ ಮಾಡಲಾಗಿದೆ. ಸಚಿವರ ಹೇಳಿಕೆಯಿಂದ ರಾಜ್ಯದಲ್ಲಿ ದೊಡ್ಡ ಪ್ರಮಾಣದಲ್ಲಿ ಗೋವು ಕಳ್ಳ ಸಾಗಣೆ, ಸಾಮೂಹಿಕ ಗೋಹತ್ಯೆ ಮಾಡುವ ಕಾನೂನು ಬಾಹಿರ ಕಸಾಯಿಖಾನೆ ತಲೆ ಎತ್ತಲಿವೆ. ನಮ್ಮ ಅವಧಿಯಲ್ಲಿ ಕಾನೂನು ಬಾಹಿರ ಕಸಾಯಿಖಾನೆ ತಡೆಗಟ್ಟಲು ಕಾನೂನು ತರಲಾಗಿದೆ' ಎಂದರು.

ಗೋಹತ್ಯೆ ನಿಷೇಧ ಕಾಯ್ದೆ ವಿಚಾರದಲ್ಲೂ ಸರ್ಕಾರ ಯೋಗ್ಯ ನಿರ್ಣಯ ತೆಗೆದುಕೊಳ್ಳಲಿದೆ
ಸತೀಶ ಜಾರಕಿಹೊಳಿ, ಲೋಕೋಪಯೋಗಿ ಸಚಿವ

ಚಕ್ರವರ್ತಿ ಸೂಲಿಬೆಲೆ ಜೈಲು ಕಂಬಿ ಎಣಿಸಬೇಕಾಗುತ್ತೆ; ಎಂ.ಬಿ.ಪಾಟೀಲ

ಪ್ರಜಾವಾಣಿ ವಾರ್ತೆ

ವಿಜಯಪುರ: 'ಚಕ್ರವರ್ತಿ ಸೂಲಿಬೆಲೆ ಮತ್ತು ಸಂಘ ಪರಿವಾರದವರು ಕಳೆದ ನಾಲ್ಕು ವರ್ಷ ಹಿಜಾಬ್, ಹಲಾಲ್, ಆಜಾನ್ ಸೇರಿದಂತೆ ಪಠ್ಯಪುಸ್ತಕದಲ್ಲಿ ಮಾಡಿರುವ ಅನಾಹುತ ಸರಿಪಡಿಸುವ ಕೆಲಸವನ್ನು ಕಾಂಗ್ರೆಸ್ ಮಾಡಲಿದೆ. ರಾಜ್ಯದಲ್ಲಿ ಕೋಮು ಸೌಹಾರ್ದ ಕದಡುವ ಕೆಲಸ ಮುಂದುವರಿಸಿದರೆ ಸೂಲಿಬೆಲೆಗೆ ಜೈಲು ಕಂಬಿ ಎಣಿಸುವಂತೆ ಮಾಡುತ್ತೇವೆ' ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಎಚ್ಚರಿಕೆ ನೀಡಿದರು.

ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿ ಬಿಜೆಪಿ ಆಡಳಿತದಲ್ಲಿ ಜನರ ಭಾವನೆ ಕೆರಳಿಸುವ ಪ್ರಯತ್ನ ನಡೆಯಿತೇ ಹೊರತು, ಜನರ ಬದುಕು ಕಟ್ಟಿಕೊಡುವ ಕೆಲಸ ಆಗಲಿಲ್ಲ. ಅಭಿವೃದ್ಧಿ ಕಾರ್ಯವನ್ನು ಸಂಪೂರ್ಣ ಕಡೆಗಣಿಸಲಾಗಿತ್ತು' ಎಂದು ಆರೋಪಿಸಿದರು.

'ರಾಷ್ಟ್ರಕವಿ ಕುವೆಂಪು ಅವರ ಆಶಯದಂತೆ ಸರ್ವ ಜನಾಂಗದ ಶಾಂತಿಯ ತೋಟ ನಿರ್ಮಾಣಕ್ಕೆ ಕಾಂಗ್ರೆಸ್ ಸರ್ಕಾರ ಆದ್ಯತೆ ನೀಡಲಿದೆ. ರಾಜಕೀಯ ಲಾಭಕ್ಕೆ ದ್ವೇಷ ಬಿತ್ತುವವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ-ಕೈಗೊಳ್ಳಲಾಗುವುದು' ಎಂದು ಹೇಳಿದರು.

ಶಿಕ್ಷಣ



ವೈದ್ಯಕೀಯ ಪದವಿ ಓದುವುದಕ್ಕೆ ಅವಕಾಶ ಸಿಗದವರು ಹಾಗೂ ಗಣಿತದ ಬಗ್ಗೆ ಹೆಚ್ಚು ಒಲವಿಲ್ಲದ ವಿದ್ಯಾರ್ಥಿಗಳಲ್ಲಿ ಅನೇಕರು ಪದವಿ ಹಂತದಲ್ಲಿ ವಿಧಿ ವಿಜ್ಞಾನ ಕೋರ್ಸ್ ಆಯ್ಕೆ ಮಾಡಿಕೊಳ್ಳುವತ್ತ ಆಸಕ್ತಿ ತೋರುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಫೊರೆನ್ಸಿಕ್ ಸೈನ್ಸ್ ಕೋರ್ಸ್ ಹಾಗೂ ಆ ನಂತರದ ಉದ್ಯೋಗಾವಕಾಶಗಳ ಕುರಿತ ವಿವರವನ್ನು ಇಲ್ಲಿ ಕೊಡಲಾಗಿದೆ.

ಪದವಿ ಕೋರ್ಸ್‌ಗಳಲ್ಲಿ ಉತ್ತಮ ಆಯ್ಕೆ

ವಿಧಿ ವಿಜ್ಞಾನ

ಪ್ರದೀಪ್ ವೆಂಕಟರಾಮ್



'ನನಗೆ ಫೊರೆನ್ಸಿಕ್ ಸೈನ್ಸ್ ಓದಬೇಕೆಂಬ ಆಸೆ. ಆರನೇ ಕ್ಲಾಸ್‌ನಲ್ಲಿದ್ದಾಗಿನಿಂದ ಥ್ರಿಲ್ಲರ್ ಸಿನಿಮಾ ನೋಡುತ್ತಾ, ಈ ವಿಷಯದ ಬಗ್ಗೆ ಕುತೂಹಲ ಮೂಡಿತ್ತು. ಹೈಸ್ಕೂಲ್‌ಗೆ ಸೇರಿದ ಮೇಲೆ, ಬಯೋಲಜಿಯ ಪಠ್ಯಗಳಲ್ಲಿದ್ದ ಡಿಎನ್‌ಎ, ಕ್ರೋಮೊಸೋಮ್ಸ್, ಜೀನ್ಸ್‌ನಂತಹ ವಿಷಯಗಳು ಆ ಕುತೂಹಲವನ್ನು ಮತ್ತಷ್ಟು ಹೆಚ್ಚಿಸಿದವು. ಹಾಗಾಗಿ ಇವಿಷಯವನ್ನು ಓದಬೇಕೆಂದು ನಿರ್ಧರಿಸಿದೆ. ಈಗ ಎಸ್ಸೆಸ್ಸೆಲ್ಸಿ ಮುಗಿದಿದೆ. ನನ್ನ ಗುರಿ ತಲುಪಲು ಪಿಯುಸಿಯಲ್ಲಿ ಯಾವ ಕಾಂಬಿನೇಷನ್ ತಗೋಬೇಕು, ಮುಂದಕ್ಕೆ ಯಾವ ರೀತಿ ಓದಬೇಕು? ಭವಿಷ್ಯದಲ್ಲಿ ಉದ್ಯೋಗಾವಕಾಶಗಳು ಹೇಗಿವೆ? ಸ್ವಲ್ಪ ಮಾರ್ಗದರ್ಶನ ನೀಡಿ... '

–ಎಸ್ಸೆಸ್ಸೆಲ್ಸಿ ಪೂರೈಸಿದ ವಿದ್ಯಾರ್ಥಿನಿಯೊಬ್ಬಳು ದೂರವಾಣಿ ಕರೆ ಮಾಡಿ, ಹೀಗೊಂದು ಶೈಕ್ಷಣಿಕ ಮಾರ್ಗದರ್ಶನ ಕೇಳಿದಳು. ಅವಳ ಕಥೆ ಕೇಳಿದಾಗ, ಸ್ವಲ್ಪ ನಗು ಬಂತು. ಆದರೆ, ಇಂಥ ಆಸಕ್ತಿಗಳೇ ಮಕ್ಕಳನ್ನು ಉನ್ನತ ಹುದ್ದೆಗಳತ್ತ ಕೈ ಹಿಡಿದು ಕರೆದೊಯ್ಯುತ್ತವೆ ಎಂಬುದನ್ನೂ ಅಲ್ಲಗಳೆಯಲಾಗಲಿಲ್ಲ.

ಇದೇ ರೀತಿ, ಇಂಥದ್ದೇ ವಿಷಯಕ್ಕೆ ಸಂಬಂಧಿಸಿದಂತೆ ಇನ್ನೊಬ್ಬರು ಪತ್ರ ಬರೆದಿದ್ದರು. ಪತ್ರದಲ್ಲಿ 'ಸರ್, ನಾನು ಪಿಯುಸಿ ಮುಗಿಸಿದ್ದೇನೆ. ಎಂಬಿಬಿಎಸ್ ಸೇರಬೇಕೆಂದು ಕೊಂಡಿದ್ದೆ. ಸಾಧ್ಯವಾಗಲಿಲ್ಲ. ಈಗ ಫೊರೆನ್ಸಿಕ್ ಸೈನ್ಸ್ ಓದಬೇಕೆನಿಸಿದೆ. ಆ ಕ್ಷೇತ್ರದಲ್ಲಿ ಓದುವ ಅವಕಾಶ, ಉದ್ಯೋಗ ಸಾಧ್ಯತೆಗಳು ಹೇಗಿವೆ? ಕಾಲೇಜುಗಳ ಕುರಿತ ಮಾಹಿತಿ ನೀಡಿ' ಎಂದು ವಿನಂತಿಸಿದ್ದರು.

ವೈದ್ಯಕೀಯ ಪದವಿ ಸೇರುವ ಅವಕಾಶ ತಪ್ಪಿದ ಒಂದಷ್ಟು ವಿದ್ಯಾರ್ಥಿಗಳು ಹೀಗೆ, 'ವಿಧಿ ವಿಜ್ಞಾನ ಅಥವಾ ಫೊರೆನ್ಸಿಕ್ ಸೈನ್ಸ್' ಪದವಿ ಆಯ್ಕೆಯತ್ತ ಒಲವು ತೋರುತ್ತಿರುವ ಕುರಿತು ಇತ್ತೀಚೆಗಷ್ಟೇ ಪತ್ರಗಳ ಮೂಲಕ ತಿಳಿದಿತ್ತು.

ಹೌದು, ವಿಜ್ಞಾನದ ವಿದ್ಯಾರ್ಥಿಗಳಿಗೆ ಪಿಯುಸಿ ನಂತರ ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಪದವಿಯಷ್ಟೇ, ಬಿ.ಎಸ್ಸಿ ವಿಧಿ ವಿಜ್ಞಾನ (ಫೊರೆನ್ಸಿಕ್ ಸೈನ್ಸ್) ಕೋರ್ಸ್ ಕೂಡ ಉತ್ತಮ ಆಯ್ಕೆಯೇ. ಯಾಕೆಂದರೆ, ಈ ಕೋರ್ಸ್ ಓದುವವರ ಸಂಖ್ಯೆ ಕಡಿಮೆ. ಹಾಗಾಗಿ ಭವಿಷ್ಯದಲ್ಲಿ ಫೊರೆನ್ಸಿಕ್ ಸೈನ್ಸ್ ಕಲಿತವರಿಗೆ ಸ್ವಲ್ಪ ಬೇಡಿಕೆ ಹೆಚ್ಚುವ ಸಾಧ್ಯತೆಗಳಿವೆ.

ಕ್ರಿಮಿನಾಲಜಿ ವಿಷಯಗಳು: ಸಮಾಜದಲ್ಲಿ ನಡೆಯುವ ಅಪರಾಧಗಳು, ಕ್ರಿಮಿನಲ್ ಚಟುವಟಿಕೆಗಳನ್ನು ಪತ್ತೆ ಮಾಡಲು ವಿಧಿ ವಿಜ್ಞಾನ ವ್ಯಾಪಕವಾಗಿ ಬಳಕೆಯಾಗುತ್ತಿದೆ. ಅಪರಾಧ ಶಾಸ್ತ್ರ(ಕ್ರಿಮಿನಾಲಜಿ) ಅಧ್ಯಯನದಲ್ಲಿ ಅಪರಾಧ, ನಡವಳಿಕೆಯ ಕಾರಣಗಳು ಮತ್ತು ತಡೆಗಟ್ಟುವಿಕೆ, ಆರ್ಥಿಕ ಮತ್ತು ಸಾಮಾಜಿಕ ಹಿನ್ನೆಲೆ, ಕಾನೂನು, ಮನೋವಿಶ್ಲೇಷಣೆ ಇತ್ಯಾದಿ ವಿಷಯಗಳಿರುತ್ತವೆ. ಹಾಗಾಗಿ, ವಿಧಿ ವಿಜ್ಞಾನ, ಮನಃಶಾಸ್ತ್ರ, ಸಮಾಜ ಶಾಸ್ತ್ರ, ಇವೆಲ್ಲವೂ ಅಪರಾಧ ವಿಜ್ಞಾನಕ್ಕೆ ಸಂಬಂಧಪಟ್ಟ ವಿಷಯಗಳಾಗಿರುತ್ತವೆ. ಈ ಹಿನ್ನೆಲೆಯಲ್ಲಿ ವಿಧಿ ವಿಜ್ಞಾನ ಇತ್ತೀಚಿನ ವರ್ಷಗಳಲ್ಲಿ ಈ ಕ್ಷೇತ್ರದ ಪ್ರಮುಖ ವಿಭಾಗವಾಗಿದೆ.

ವಿಧಿ ವಿಜ್ಞಾನ ವಿಷಯಗಳೇನು?: ವಿಧಿ ವಿಜ್ಞಾನ ವೃತ್ತಿಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಲು ಬಿ.ಎಸ್ಸಿ (ವಿಧಿ ವಿಜ್ಞಾನ) ಕೋರ್ಸ್‌ನಲ್ಲಿ, ಕುತೂಹಲಕಾರಿ ಮತ್ತು ರೋಚಕವೆನಿಸಬಹುದಾದ ವಿಷಯಗಳನ್ನು ಅಧ್ಯಯನ ಮಾಡಬೇಕಾಗುತ್ತದೆ. ಉದಾಹರಣೆಗೆ, ಭೌತಿಕ ಪುರಾವೆಗಳ (ಬೆರಳಚ್ಚುಗಳು, ರಕ್ತ, ಕೂದಲು ಇತ್ಯಾದಿ) ಸಂಗ್ರಹಣೆ, ಸುರಕ್ಷತೆ ಮತ್ತು ವಿಶ್ಲೇಷಣೆ, ಘಟನೆಯ ದೃಶ್ಯದ ಮರುಸೃಷ್ಟಿಗಾಗಿ ಇಮೇಜಿಂಗ್ ತಂತ್ರಜ್ಞಾನದ ಬಳಕೆ, ಧ್ವನಿಯ ವಿಶ್ಲೇಷಣೆ (ಆಡಿಯೊ ಅನಾಲಿಸಿಸ್), ವಿಧಿ ವಿಜ್ಞಾನಕ್ಕೆ ಸಂಬಂಧಿಸಿದ ಮಾನವಶಾಸ್ತ್ರ ಇತ್ಯಾದಿ. ಈ ಎಲ್ಲಾ ವಿಷಯಗಳನ್ನು, ವಿಧಾನಗಳನ್ನು, ತಂತ್ರಗಳನ್ನು ವೃತ್ತಿಯಲ್ಲಿ ಬಳಸಲು ವಿದ್ಯಾರ್ಥಿಗಳ ಓದುವಿಕೆ ಪರಿಣಾಮಕಾರಿಯಾಗಿರಬೇಕು. ತರಗತಿಯಲ್ಲಿ ಶೀಘ್ರ ಗ್ರಹಿಕೆ ಮತ್ತು ಏಕಾಗ್ರತೆ, ಪ್ರಶ್ನೆಗಾರಿಕೆಯ ಕಲೆ, ಓದಿದ ನಂತರ ಪುನರುಚ್ಚಾರಣೆ, ಪುನರಾವರ್ತನೆ ಇತ್ಯಾದಿ ಕಾರ್ಯತಂತ್ರಗಾರಿಕೆಯನ್ನು ಉಪಯೋಗಿಸಬೇಕು.

ಕೋರ್ಸ್ ಪ್ರವೇಶ, ಅರ್ಹತೆಗಳೇನು?: ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಅನುಸಾರ ಬಿ.ಎಸ್ಸಿ (ವಿಧಿ ವಿಜ್ಞಾನ) ನಾಲ್ಕು ವರ್ಷದ ಕೋರ್ಸ್ ಆಗಿರುತ್ತದೆ. ಸಾಮಾನ್ಯವಾಗಿ, ಪಿಯುಸಿ ವಿದ್ಯಾರ್ಥಿಗಳು ಭೌತ ವಿಜ್ಞಾನ, ರಸಾಯನ ವಿಜ್ಞಾನ ಮತ್ತು ಜೀವ ವಿಜ್ಞಾನ ಓದಿರಬೇಕು. ಈ ಕೋರ್ಸ್‌ಗೆ ಕಾಲೇಜು/ ವಿಶ್ವವಿದ್ಯಾಲಯಗಳ ನಿಯಮಾವಳಿ ಅನುಸಾರ ನೇರ ಅಥವಾ ಪ್ರವೇಶ ಪರೀಕ್ಷೆ ಮೂಲಕ ಸೇರುವ ಅವಕಾಶವಿರುತ್ತದೆ.

ಮೂರು ವರ್ಷದ ನಂತರ ಪದವಿಯನ್ನು ನೀಡಲಾಗುತ್ತದೆ ಮತ್ತು ನಾಲ್ಕನೇ ವರ್ಷದಲ್ಲಿ ಸಂಶೋಧನೆಯನ್ನು ಮಾಡಿದರೆ ನೇರವಾಗಿ ಪಿಎಚ್.ಡಿ ಮಾಡಲು ಅರ್ಹತೆ ಸಿಗುತ್ತದೆ. ಮೂರು ವರ್ಷದ ಪದವಿಯ ನಂತರ ಎರಡು ವರ್ಷದ ಸ್ನಾತಕೋತ್ತರ ಪದವಿ ಮಾಡುವ ಅವಕಾಶವೂ ಇದೆ. ಹೆಚ್ಚಿನ ತಜ್ಞತೆಗಾಗಿ, ನೀತಿ ಶಾಸ್ತ್ರ ಮತ್ತು ಸಂಶೋಧನೆ, ಡಿಜಿಟಲ್ ಇಮೇಜಿಂಗ್, ಡಿಎನ್‌ಎ ಅನಾಲಿಸಿಸ್, ಮಾನವಶಾಸ್ತ್ರ ವಿಷ ವೈದ್ಯ ವಿಜ್ಞಾನ, ಫೊರೆನ್ಸಿಕ್ ಜೆನೆಟಿಕ್ಸ್ ಮುಂತಾದ ವಿಷಯಗಳಲ್ಲಿ ಉನ್ನತ ಶಿಕ್ಷಣವನ್ನು ಪಡೆಯಬಹುದು ಅಥವಾ ವೃತ್ತಿಯನ್ನು ಅನುಸರಿಸುತ್ತಾ, ಅರೆಕಾಲಿಕ ಡಿಪ್ಲೊಮಾ/ಸರ್ಟಿಫಿಕೆಟ್ ಕೋರ್ಸ್‌ಗಳನ್ನು ಮಾಡಬಹುದು.

ವೃತ್ತಿಯ ಅವಕಾಶಗಳು ಮತ್ತು ಕೌಶಲಗಳು: ಈ ಕ್ಷೇತ್ರದಲ್ಲಿ ಯಶಸ್ವಿಯಾಗಲು ಸ್ವಾಭಾವಿಕವಾದ ಒಲವು ಮತ್ತು ಆಸಕ್ತಿಯಿದ್ದು ವಿವೇಚನೆ, ಉತ್ತಮ ಸಂವಹನ, ನಾಯಕತ್ವದ ವ್ಯಕ್ತಿತ್ವ, ನೈತಿಕ ಅರಿವು, ದತ್ತಾಂಶ ಸಂಗ್ರಹಣೆ ಮತ್ತು ನಿರ್ವಹಣೆ, ತಾರ್ಕಿಕ ಪ್ರತಿಪಾದನಾ ಕೌಶಲ, ವಿಶ್ಲೇಷಣಾ ಮತ್ತು ಸಂಶೋಧನಾ ಕೌಶಲ, ಸಮಯ ಪ್ರಜ್ಞೆ, ಒತ್ತಡದಲ್ಲಿ ಕೆಲಸ ಮಾಡುವ ಸಾಮರ್ಥ್ಯ ಇತ್ಯಾದಿ ಕೌಶಲಗಳನ್ನು ಬೆಳೆಸಿಕೊಳ್ಳಬೇಕು.


ವಿದ್ಯಾಭ್ಯಾಸದ ನಂತರ ಸಂಶೋಧನಾ ಸಂಸ್ಥೆಗಳು, ಖಾಸಗಿ ಮತ್ತು ಸರ್ಕಾರಿ ಪತ್ತೇದಾರಿ ಸಂಸ್ಥೆಗಳು, ಪೊಲೀಸ್ ಇಲಾಖೆ, ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು, ಪ್ರಯೋಗಾಲಯಗಳು, ಕಾಲೇಜುಗಳಲ್ಲಿ ಫೊರೆನ್ಸಿಕ್ ಸೈಂಟಿಸ್ಟ್, ಫೊರೆನ್ಸಿಕ್ ಪ್ಯಾಥಾಲಿಜಿಸ್ಟ್, ಫೊರೆನ್ಸಿಕ್ ಟಾಕ್ಸಿಕಾಲಜಿಸ್ಟ್, ಫೊರೆನ್ಸಿಕ್ ದಿಜಿಟಲ್ ಎಕ್ಸ್‌ಪರ್ಟ್‌ನಂತಹ ಹುದ್ದೆಗಳನ್ನು ಅರಸಬಹುದು.

ವಿಧಿ ವಿಜ್ಞಾನ ವಿಷಯದಲ್ಲಿ ಪದವಿ ನಂತರ, ಹೆಚ್ಚಿನ ತಜ್ಞತೆಗಾಗಿ, ಎಂ.ಎಸ್ಸಿ ಮಾಡಬಹುದು. ಬಿ.ಎಸ್ಸಿ (ವಿಧಿವಿಜ್ಞಾನ) ಕೋರ್ಸ್ ಮಾಡಬಹುದಾದ ಕಾಲೇಜುಗಳ ವಿವರಕ್ಕಾಗಿ ಗಮನಿಸಿ: https://collegedunia.com/bsc/forensic-science/karnataka-colleges

(ಲೇಖಕರು ಶಿಕ್ಷಣ ತಜ್ಞರು ಮತ್ತು ವೃತ್ತಿ ಸಲಹೆಗಾರರು)

ಬಿ.ಎಸ್ಸಿಯಲ್ಲಿ 'ಐಟಿ' ಕೋರ್ಸ್‌ಗಳ ಆಯ್ಕೆ ಹೇಗೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

● ನಾನು ಎನ್‌ಇಪಿ (ಹೊಸ ಶಿಕ್ಷಣ ನೀತಿ) ಪಠ್ಯಕ್ರಮದಂತೆ ಬಿ.ಎಸ್ಸಿ (ಭೌತ ವಿಜ್ಞಾನ ಮತ್ತು ರಸಾಯನ ವಿಜ್ಞಾನ) ಎರಡನೇ ವರ್ಷದಲ್ಲಿ ಓದುತ್ತಿದ್ದೇನೆ. ಈ ಪದವಿ ನಂತರ ಮುಂದೇನು ಮಾಡಬಹುದು? ಹಾಗೆಯೇ, ನನಗೆ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಸರ್ಕಾರಿ ನೌಕರಿ ಪಡೆದುಕೊಳ್ಳುವ ಆಸೆಯಿದೆ. ಮಾರ್ಗದರ್ಶನ ನೀಡಿ.

ಹೆಸರು, ಊರು ತಿಳಿಸಿಲ್ಲ.



ಬಿ.ಎಸ್ಸಿ ಪದವಿಯ ನಂತರ ಉನ್ನತ ಶಿಕ್ಷಣ ಅಥವಾ ವೃತ್ತಿಯನ್ನು ಅರಸುವ ವೈವಿಧ್ಯಮಯ ಮತ್ತು ಆಕರ್ಷಕ ಅವಕಾಶಗಳಿವೆ. ನಾಲ್ಕು ವರ್ಷದ ಬಿ.ಎಸ್ಸಿ ಪದವಿಯ ನಂತರ ಹೆಚ್ಚಿನ ತಜ್ಞತೆಗಾಗಿ ಪಿಎಚ್.ಡಿ/ಎಂ.ಎಸ್ಸಿ ಮಾಡಿ ಕಾಲೇಜು/ ವಿಶ್ವವಿದ್ಯಾಲಯಗಳಲ್ಲಿ ಬೋಧನಾ ಕ್ಷೇತ್ರದಲ್ಲಿ ಕೆಲಸ ಮಾಡಬಹುದು. ಇಲ್ಲದಿದ್ದರೆ, ಕೆಲವು ಪ್ರತಿಷ್ಠಿತ ಸಂಸ್ಥೆಗಳಾದ ಇಸ್ರೊ, ಬಿಎಆರ್‌ಸಿ, ಸಿಎಸ್‌ಐಆರ್, ಡಿಆರ್‌ಡಿಒ, ಟಿಐಎಫ್‌ಆರ್ ಮುಂತಾದ ಸಂಸ್ಥೆಗಳಲ್ಲಿ ಉದ್ಯೋಗ ಮಾಡಬಹುದು.

ಮೂರು ವರ್ಷದ ಬಿ.ಎಸ್ಸಿ ಮುಗಿಸಿದ ನಂತರ ನಿಮಗಿಷ್ಟವಿರುವ ಸರ್ಕಾರಿ ವಲಯದ ನೌಕರಿಗಳನ್ನು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಅರಸಬಹುದು. ಉದಾಹರಣೆಗೆ, ಯುಪಿಎಸ್‌ಸಿ, ಕೆಪಿಎಸ್‌ಸಿ, ಎಸ್‌ಎಸ್‌ಸಿ-ಸಿಜಿಎಲ್, ಐಬಿಪಿಎಸ್ (ಬ್ಯಾಂಕಿಂಗ್), ಆರ್‌ಆರ್‌ಬಿ-ಎನ್‌ಟಿಪಿಸಿ (ರೈಲ್ವೆ ಇಲಾಖೆ) ಮುಂತಾದ ಕ್ಷೇತ್ರಗಳಲ್ಲಿ ಅವಕಾಶಗಳಿವೆ. ಸ್ಪರ್ಧಾತ್ಮಕ ಪರೀಕ್ಷೆಗಳ ಮಾದರಿ, ಪಠ್ಯಕ್ರಮ ಇತ್ಯಾದಿಗಳನ್ನು ಅರಿತು ಕಾರ್ಯತಂತ್ರವನ್ನು ರೂಪಿಸಬೇಕು.

ಈ ಎಲ್ಲಾ ವೃತ್ತಿಗಳ ಯಶಸ್ಸಿಗೆ ಬೇಕಾಗುವ ಅಭಿರುಚಿ, ಆಸಕ್ತಿ ಮತ್ತು ಕೌಶಲಗಳಲ್ಲಿ ವ್ಯತ್ಯಾಸವಿದೆ ಎನ್ನುವುದು ನಿಮ್ಮ ಗಮನದಲ್ಲಿರಲಿ. ಆದ್ದರಿಂದ, ಈ ಆಯ್ಕೆಗಳಲ್ಲಿ ನಿಮಗೆ ಯಾವುದು ಸೂಕ್ತ ಎಂದು ಪರಿಶೀಲಿಸಿ, ಮುಂದಿನ ನಿರ್ಧಾರವನ್ನು ತೆಗೆದುಕೊಳ್ಳುವುದು ಸೂಕ್ತ. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=MHnPg_sp6E0

2. ನಾನು ಪಿಯುಸಿ ಮುಗಿಸಿ ಬಿ.ಎಸ್ಸಿ ಪದವಿಯಲ್ಲಿ ಕಂಪ್ಯೂಟರ್ ಕೋರ್ಸ್ ಅಥವಾ ಐ.ಟಿ. ಕೋರ್ಸ್ ಆಯ್ಕೆ ಮಾಡಿಕೊಳ್ಳಬೇಕಿದೆ. ಈ ಕೋರ್ಸ್‌ಗಳಲ್ಲಿ ಯಾವುದು ಉತ್ತಮವಾದ ಆಯ್ಕೆ?

ಹೆಸರು, ಊರು ತಿಳಿಸಿಲ್ಲ.

ಬಿ.ಎಸ್ಸಿ ಕೋರ್ಸ್‌ನಲ್ಲಿ ಐಟಿ ಕ್ಷೇತ್ರಕ್ಕೆ ಸಂಬಂಧಿಸಿದ ಮತ್ತು ಬಿ.ಟೆಕ್‌ಗೆ ಉತ್ತಮವಾದ ಪರ್ಯಾಯ ಎನ್ನಬಹುದಾದ ಅನೇಕ ಕೋರ್ಸ್‌ಗಳಿವೆ. ಉದಾಹರಣೆಗೆ, ಬಿ.ಎಸ್ಸಿ ಪದವಿಯಲ್ಲಿ ಕಂಪ್ಯೂಟರ್ ಸೈನ್ಸ್, ಐಟಿ, ಡೇಟಾ ಸೈನ್ಸ್, ಸೈಬರ್ ಸೆಕ್ಯುರಿಟಿ, ಇನ್‌ಫರ್ಮೇಷನ್ ಸಿಸ್ಟಮ್, ಬಯೋ ಇನ್‌ಫರ್‌ಮೆಟಿಕ್ಸ್, ಮಲ್ಟಿಮೀಡಿಯ, ಕ್ಲೌಡ್ ಕಂಪ್ಯೂಟಿಂಗ್, ಬಿಗ್ ಡೇಟಾ ಮುಂತಾದ ವಿಷಯಗಳಲ್ಲಿ ಮಾಡಬಹುದು. ಈ ಆಯ್ಕೆಗಳು ಕೆಲವು ಪ್ರತಿಷ್ಠಿತ ಕಾಲೇಜುಗಳಲ್ಲಿ ಮಾತ್ರ ಲಭ್ಯವಿವೆ.

ನಿಮ್ಮ ಆಸಕ್ತಿ ಮತ್ತು ಅಭಿರುಚಿಗೆ ಒಪ್ಪುವ ವೃತ್ತಿ/ ಕೋರ್ಸ್ ಆಯ್ಕೆ ಮಾಡಿ, ಪಠ್ಯದ ಆಳ, ಅಗಲ ಮತ್ತು ಪರಿಮಿತಿಯನ್ನು ಅರಿತು, ವೃತ್ತಿಯ ಅವಶ್ಯಕತೆಗೆ ತಕ್ಕಂತೆ ಹೆಚ್ಚುವರಿ ಅರೆಕಾಲಿಕ/ಡಿಪ್ಲೊಮಾ ಕೋರ್ಸ್ ಮಾಡಿ, ಯಶಸ್ಸಿಗೆ ಬೇಕಾಗುವ ತಜ್ಞತೆ ಮತ್ತು ಕೌಶಲಗಳನ್ನು ಪಡೆದುಕೊಳ್ಳಬಹುದು. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=ABkhf_hiHfw

ಮತ್ತಷ್ಟು ಪ್ರಶ್ನೋತ್ತರಕ್ಕೆ www.prajavani.net/education-career/education ಜಾಲತಾಣ ನೋಡಿ.

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಕೋಲ್ ಇಂಡಿಯಾ ಸ್ಕಾಲರ್‌ಶಿಪ್

ವಿದ್ಯಾರ್ಥಿ ವೇತನ ಕೈಪಿಡಿ

ವಿವರ: ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಪದವಿ ಕೋರ್ಸ್ ಕಲಿಯುತ್ತಿರುವ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡುವುದಕ್ಕಾಗಿ ಕೋಲ್ ಇಂಡಿಯಾ ಲಿಮಿಟೆಡ್ ಕಂಪನಿ 'ಇಡಬ್ಲ್ಯುಎಸ್ ಸ್ಕಾಲರ್‌ಷಿಪ್ 2023' ರೂಪಿಸಿದೆ. ವಿದ್ಯಾರ್ಥಿಗಳಿಗೆ ಗುಣಮಟ್ಟದ ವೃತ್ತಿಪರ ಶಿಕ್ಷಣ ಸಿಗುವಂತಾಗಬೇಕು ಎಂಬುದು ಸ್ಕಾಲರ್‌ಷಿಪ್‌ನ ಮುಖ್ಯ ಉದ್ದೇಶವಾಗಿದೆ.

ಅರ್ಹತೆ: ಪ್ರಸಕ್ತ ವರ್ಷದ ನವೆಂಬರ್ ತಿಂಗಳೊಳಗೆ ಮೊದಲ ವರ್ಷದ ಪದವಿಗೆ ಪ್ರವೇಶ ಪಡೆಯುವ 25 ವರ್ಷದೊಳಗಿನ ಬಿಪಿಎಲ್ ಕುಟುಂಬದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿದಾರರು ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದಿರುವ ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳಲ್ಲಿ ಮೈನಿಂಗ್, ಎಲೆಕ್ಟ್ರಿಕಲ್, ಮೆಕಾನಿಕಲ್, ಸಿವಿಲ್, ಕಂಪ್ಯೂಟರ್–ಐಟಿ ಪರಿಸರ ವಿಜ್ಞಾನ, ಎಲೆಕ್ಟ್ರಾನಿಕ್ಸ್ ಆ್ಯಂಡ್ ಟೆಲಿಕಮ್ಯುನಿಕೇಷನ್ಸ್, ಐಐಟಿ, ಎನ್‌ಐಟಿ ಮತ್ತಿತರ ಕೋರ್ಸ್ ಕಲಿಯುತ್ತಿರಬೇಕು.

ಆರ್ಥಿಕ ನೆರವು: ಪೂರ್ಣ ಕೋರ್ಸ್‌ಗೆ ನಿಗದಿಪಡಿಸಿರುವ ಶುಲ್ಕವನ್ನು ನೀಡಲಾಗುತ್ತದೆ.

ಅರ್ಜಿ ಸಲ್ಲಿಕೆ ವಿಧಾನ: ಅಂಚೆ ಮೂಲಕ ಅರ್ಜಿ ಸಲ್ಲಿಸಬಹುದು. ವಿಳಾಸ: ಚೀಫ್ ಜನರಲ್ ಮ್ಯಾನೇಜರ್ (ಕಲ್ಯಾಣ), ಕೋಲ್ ಇಂಡಿಯಾ ಲಿ. ಕೋಲ್ ಭವನ್, 10, ನೇತಾಜಿ ಸುಭಾಷ್ ರೋಡ್, ಕೋಲ್ಕತ್ತಾ 700001, ದೂರವಾಣಿ ಸಂಖ್ಯೆ: (033)-22488099, ಫ್ಯಾಕ್ಸ್ ನಂಬರ್ : (033)-22313875/22135778

● **ಹೆಚ್ಚಿನ ಮಾಹಿತಿಗೆ: www.b4s.in/praja/EWST6**

(ಕೃಪೆ: **www.buddy4study.com**)

ಇವೆಂಟ್ ಮ್ಯಾನೇಜ್‌ಮೆಂಟ್

ಕಾರ್ಯಕ್ರಮ ನಿರ್ವಹಣಾ ಕೌಶಲ ಕಲಿಸುವ ಕೋರ್ಸ್

ಸಿಬಂತಿ ಪದ್ಮನಾಭ ಕೆ.ವಿ.



ಬೃಹತ್ ಸಮಾರಂಭಗಳ ಕಾಲ ಇದು. ಮದುವೆಯೂ ಆಗಿರಬಹುದು, ವಸ್ತುಪ್ರದರ್ಶನ-ಮಾರಾಟವೂ ಆಗಿರಬಹುದು; ಸಾವಿರಾರು ಜನರು ಭಾಗವಹಿಸುವ ಕಾರ್ಯಕ್ರಮಗಳು ಸಾಮಾನ್ಯ ಪಟ್ಟಣಗಳಿಂದ ತೊಡಗಿ ಮಹಾನಗರಗಳವರೆಗೆ ಎಲ್ಲೆಡೆ ನಡೆಯುತ್ತಲೇ ಇರುತ್ತವೆ. ದೊಡ್ಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡರೆ ಸಾಲದು, ಅವು ಅಚ್ಚುಕಟ್ಟಾಗಿ ನಡೆಯಬೇಕು- ಇದು ಆಯೋಜಕರ ಆದ್ಯತೆ. ಅವರಿಗೆ ಖರ್ಚಿನ ಬಗ್ಗೆ ಚಿಂತೆಯಿಲ್ಲ; ಯಾವುದೇ ಕೊರತೆಯಿಲ್ಲದಂತೆ ಎಲ್ಲವೂ ಸುಸೂತ್ರವಾಗಿ ಸಾಗಿದರೆ ಆಯಿತು.

ಮೊದಲೆಲ್ಲ ಊಟೋಪಚಾರದ ಬಗ್ಗೆ ಮಾತ್ರ ಆಯೋಜಕರು ತಲೆಕೆಡಿಸಿಕೊಳ್ಳುತ್ತಿದ್ದರು. ಅದಕ್ಕಾಗಿ 'ಕ್ಯಾಟರಿಂಗ್' ಸೇವೆ ಒದಗಿಸುವವರು ಬಂದರು. ಈಗ ಅಷ್ಟೇ ಸಾಲದು, ಕಾರ್ಯಕ್ರಮ ಎಲ್ಲಿ ನಡೆಸಬೇಕು, ಹೇಗೆ ನಡೆಸಬೇಕು, ಎಷ್ಟರಮಟ್ಟಿನ ಅಲಂಕಾರ ಬೇಕು, ಭದ್ರತಾ ವ್ಯವಸ್ಥೆ ಹೇಗೆ, ಪಾರ್ಕಿಂಗ್ ಎಲ್ಲಿ, ಆಮಂತ್ರಣ ಪತ್ರಿಕೆ ಹೇಗಿರಬೇಕು, ನೋಂದಣಿ ಯಾವ ರೀತಿ, ಧ್ವನಿವರ್ಧಕ ಯಾವ ಗುಣಮಟ್ಟದ್ದು, ಏನೆಲ್ಲ ಮನರಂಜನಾ ಕಾರ್ಯಕ್ರಮಗಳಿರ ಬೇಕು, ಕಲಾವಿದರು ಯಾರು... ಪ್ರತಿಯೊಂದೂ ಹೀಗೆಯೇ ಇರಬೇಕು ಎಂದು ಬಯಸುವವರು ಇದ್ದಾರೆ. ಇದು ಕಾರ್ಪೊರೇಟ್ ಶೈಲಿ.

ಹೀಗಾಗಿ ಕಾರ್ಯಕ್ರಮ ನಿರ್ವಹಣೆ (ಇವೆಂಟ್ ಮ್ಯಾನೇಜ್‌ಮೆಂಟ್) ಎಂಬ ಶಾಖೆ ಈಗ ಜನಪ್ರಿಯ. ಇಲ್ಲಿ ಎಲ್ಲವೂ ಶೈಲೀಕೃತ. ಪ್ರತಿಯೊಂದರ ಹಿಂದೆಯೂ ಯೋಜನೆ, ಅದಕ್ಕೆ ತಕ್ಕ ನಿರ್ವಹಣೆ. ಇವೆಂಟ್ ಮ್ಯಾನೇಜ್‌ಮೆಂಟ್ ಕಂಪನಿಗಳೇ ಬೆಳೆದು ನಿಂತಿವೆ. ಇವರಿಗೆ ಯೋಜನೆ ರೂಪಿಸುವ 'ಇವೆಂಟ್ ಪ್ಲಾನರ್'ಗಳು, ಕಾರ್ಯಕ್ರಮ ನಿರ್ವಹಿಸುವ 'ಇವೆಂಟ್ ಮ್ಯಾನೇಜರ್'ಗಳು ಎಷ್ಟಿದ್ದರೂ ಸಾಲದು. ಇವರು ಅಡಾವುಡಿ ಮಾಡಿಕೊಂಡರೆ ಆಗದು, ಪ್ರತಿಯೊಂದರಲ್ಲೂ ಶಿಸ್ತು, ವ್ಯವಸ್ಥೆ, ಅಚ್ಚುಕಟ್ಟುತನ, ವೃತ್ತಿಪರತೆ ಬೇಕು. ಈ ಬೇಡಿಕೆಯನ್ನು ಪೂರೈಸುವುದಕ್ಕೆ ಪದವಿ, ಸ್ನಾತಕೋತ್ತರ ಹಂತದಲ್ಲಿ ಹಲವು ಕೋರ್ಸ್‌ಗಳಿವೆ. ಹಾಗೆಯೇ, ಔಪಚಾರಿಕ ಪದವಿಗಳ ಭಾರ ಇಲ್ಲದೆಯೂ ಉತ್ತಮ ಇವೆಂಟ್ ಮ್ಯಾನೇಜರ್‌ಗಳನ್ನು ರೂಪಿಸುವದಕ್ಕೆ ಸಾಕಷ್ಟು ಆನ್‌ಲೈನ್ ಸಂಪನ್ಮೂಲಗಳೂ ಇವೆ.


ಏನಿದು ಕೋರ್ಸ್?


ಇವೆಂಟ್ ಮ್ಯಾನೇಜ್‌ಮೆಂಟ್ ಬಯಸುವುದು ಉತ್ತಮ ಸಂವಹನ ಕಲೆ, ನಾಯಕತ್ವ, ವ್ಯವಸ್ಥಿತ ಯೋಜನೆ, ಸಮರ್ಥ ಅನುಷ್ಠಾನ, ಒತ್ತಡ ನಿರ್ವಹಣೆ, ಸಾರ್ವಜನಿಕ ಸಂಪರ್ಕ ಇತ್ಯಾದಿ ಕೌಶಲಗಳನ್ನು ಕರಗತ ಮಾಡಿಕೊಂಡವರು ಇವೆಂಟ್ ಮ್ಯಾನೇಜ್‌ಮೆಂಟ್ ಕಂಪನಿಗಳ ಭಾಗವಾಗದೆಯೂ ಒಳ್ಳೆಯ ಸೇವೆ ನೀಡಬಹುದು. ತಾವೇ ಸ್ವತಃ ಇವೆಂಟ್ ಮ್ಯಾನೇಜ್‌ಮೆಂಟ್ ಉದ್ಯಮವನ್ನು ಸ್ಥಾಪಿಸಿ ಯಶಸ್ಸು ಪಡೆಯಬಹುದು.

ಆದರೆ ಕಾರ್ಪೊರೇಟ್ ಯುಗಕ್ಕೆ ತಕ್ಕಂತೆ ತಮ್ಮ ಕೌಶಲಗಳನ್ನು ಮರುರೂಪಿಸಿಕೊಳ್ಳಲು ಆನ್‌ಲೈನ್ ಕೋರ್ಸ್‌ಗಳು ನೆರವಾಗಬಹುದು. ಒಂದು ಕಾರ್ಯಕ್ರಮದ ಹೊಣೆಗಾರಿಕೆ ಸಿಕ್ಕಕೂಡಲೇ ಯಾವ ರೀತಿ ಸಿದ್ಧತೆ ನಡೆಸಬೇಕು, ಅದರ ಬಜೆಟ್, ವೇಳಾಪಟ್ಟಿ, ಸ್ಥಳ ನಿಗದಿ, ಅಲಂಕಾರ, ಸ್ಥಳೀಯ ಆಡಳಿತದ ಅನುಮತಿ, ವಾಹನ ನಿಲುಗಡೆ, ಅತಿಥಿಗಳ ಪ್ರಯಾಣ, ತಂಗುವಿಕೆ, ಭದ್ರತೆ, ಧ್ವನಿವರ್ಧಕ, ಊಟೋಪಚಾರ, ಮನರಂಜನೆ- ಇವುಗಳನ್ನು ಹೇಗೆ ನಿರ್ವಹಿಸಬೇಕು ಎಂಬುದನ್ನು ಈ ಕೋರ್ಸ್‌ಗಳು ವ್ಯವಸ್ಥಿತವಾಗಿ ಹೇಳಿಕೊಡುತ್ತವೆ.

ಯಾರು ಕಲಿಯಬಹುದು?

ತೀರಾ ತಾಂತ್ರಿಕ ವಿಷಯಗಳ ಅಭ್ಯಾಸವನ್ನು ಒಳಗೊಳ್ಳದ ಶಾಖೆ ಇದಾಗಿರುವುದರಿಂದ ಈ ಕೋರ್ಸ್ ಎಲ್ಲರಿಗೂ ಮುಕ್ತ. ನಿರ್ದಿಷ್ಟ ವಿದ್ಯಾರ್ಹತೆಯ ಹಿನ್ನೆಲೆಯೂ ಬೇಕಾಗಿಲ್ಲ. ಒಳ್ಳೆಯ ಸಂವಹನ ಕಲೆ ಮತ್ತು ನಿರ್ವಹಣೆಯ ಕೌಶಲ ಉಳ್ಳವರಿಗೆ ಇದೊಂದು ಅದ್ಭುತ ಆಯ್ಕೆ ಆಗಬಲ್ಲದು. ಪಿಯುಸಿ ಮೇಲ್ಪಟ್ಟವರು ಬೇರೆ ಔಪಚಾರಿಕ ಕೋರ್ಸ್‌ಗಳ ಜತೆಗೆ ಈ ಕೋರ್ಸ್ ಅನ್ನು ತೆಗೆದುಕೊಂಡರೂ ಯಶಸ್ವಿ ವೃತ್ತಿಜೀವನಕ್ಕೆ ಬೆಂಬಲವಾದೀತು.






ಎಲ್ಲೆಲ್ಲಿ ಲಭ್ಯ?

ಮ್ಯಾನೇಜ್‌ಮೆಂಟ್ ಕೋರ್ಸ್‌ಗಳನ್ನು ಒದಗಿಸುವ ಕಾಲೇಜುಗಳಲ್ಲಿ ಇವೆಂಟ್ ಮ್ಯಾನೇಜ್‌ಮೆಂಟ್ ಅಥವಾ ಅದಕ್ಕೆ ಸಂಬಂಧಿಸಿದ ಪಬ್ಲಿಕ್ ರಿಲೇಶನ್ಸ್, ಕಾರ್ಪೊರೇಟ್ ಕಮ್ಯುನಿಕೇಶನ್ಸ್ ಮುಂತಾದ ವಿಷಯಗಳಲ್ಲಿ ಬಿಬಿಎ/ ಎಂಬಿಎ ಕೋರ್ಸ್‌ಗಳಿವೆ. ಇವುಗಳ ಹೊರತಾಗಿ ಸಾಕಷ್ಟು ಆನ್‌ಲೈನ್ ಕೋರ್ಸ್‌ಗಳೂ ಈಗ ಲಭ್ಯ:

- ಶಿಕ್ಷಣ ಸಚಿವಾಲಯದ 'ಸ್ವಯಂ(SWAYAM)' ತಾಣದಲ್ಲಿ 'ಇವೆಂಟ್ ಕೋಆರ್ಡಿನೇಶನ್', 'ಇವೆಂಟ್ ಪ್ಲಾನಿಂಗ್' ಎಂಬ ತಲಾ 16 ವಾರಗಳ ಕೋರ್ಸ್, 'ಬೇಸಿಕ್ಸ್ ಆಫ್ ಇವೆಂಟ್ ಮ್ಯಾನೇಜ್ಮೆಂಟ್' ಎಂಬ 12 ವಾರಗಳ ಕೋರ್ಸ್ ಉಚಿತವಾಗಿ ಲಭ್ಯವಿದೆ. ಇವನ್ನು ದೆಹಲಿಯ ಇಗ್ನೊ(ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ) ರೂಪಿಸಿದ್ದು, ಮುಂದಿನ ಕೊಂಡಿಯ ಮೂಲಕ ಹೆಚ್ಚಿನ ವಿವರ ಪಡೆಯಬಹುದು: https://www.udemy.com/topic/event-planning/
- ಯುಡೆಮಿ ಜಾಲತಾಣದಲ್ಲಿ 'ಇವೆಂಟ್ ಪ್ಲಾನಿಂಗ್'ಗೆ ಸಂಬಂಧಿಸಿದ ಅನೇಕ ಉಚಿತ ಹಾಗೂ ಸಾಧಾರಣ ಶುಲ್ಕ ಬಯಸುವ ಕೋರ್ಸುಗಳು ಲಭ್ಯವಿವೆ. ಇಲ್ಲಿ ನೋಡಿ: https://www.udemy.com/topic/event-planning/
- ಪ್ರಾರಂಭಿಕ ಹಂತದ ಅಭ್ಯಾಸಿಗಳಿಗೆ ಗ್ರೇಟ್ ಲರ್ನಿಂಗ್ ಅಕಾಡೆಮಿಯು ಉಚಿತ ಹಾಗೂ ಪಾವತಿ ಕೋರ್ಸ್‌ಗಳನ್ನು ನೀಡುತ್ತಿದೆ. ಗಮನಿಸಿ: https://www.mygreatlearning.com/

(ಲೇಖಕರು: ಸಹಾಯಕ ಪ್ರಾಧ್ಯಾಪಕ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ)

(ಮುಂದಿನ ವಾರ: ವಿಡಿಯೊ ಎಡಿಟಿಂಗ್)



ಸುಭಾಷಿತ

ಪ್ರಕೃತಿಯನ್ನು ಆಳವಾಗಿ ಗಮನಿಸಿ. ಆಗ, ನೀವು ಪ್ರತಿಯೊಂದನ್ನೂ ಉತ್ತಮವಾಗಿ ಅರ್ಥಮಾಡಿಕೊಳ್ಳಲು ಆರಂಭಿಸುತ್ತೀರಿ. -ಆಲ್‌ಬರ್ಟ್ ಐನ್‌ಸ್ಟೀನ್

ಪಠ್ಯ ಪರಿಷ್ಕರಣೆ: ರಾಜಕೀಯ ನುಸುಳದಿರಲಿ ಮಕ್ಕಳ ಬಗೆಗಿನ ಕಾಳಜಿ ಮುಖ್ಯವಾಗಲಿ

ಹೊಸದಾಗಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ನೇತೃತ್ವದ ಸರ್ಕಾರವು ಶಾಲಾ ಪಠ್ಯಪುಸ್ತಕಗಳನ್ನು ಪರಿಶೀಲನೆಗೆ ಒಳಪಡಿಸುವ ಕುರಿತು ಚಿಂತನೆ ನಡೆಸಿದೆ. ಈ ಹಿಂದೆ ಇದ್ದ ಬಿಜೆಪಿ ನೇತೃತ್ವದ ಸರ್ಕಾರವು ಪಠ್ಯಪುಸ್ತಕಗಳನ್ನು ಪರಿಷ್ಕರಿಸಿ, ತನಗೆ ಬೇಕಿದ್ದ ಕೆಲವು ಪಾಠಗಳನ್ನು ಸೇರಿಸಿತ್ತು ಹಾಗೂ ತನ್ನ ಸಿದ್ಧಾಂತಕ್ಕೆ ಒಗ್ಗದ ಕೆಲವು ಪಾಠಗಳನ್ನು ಕೈಬಿಟ್ಟಿತ್ತು. 2013ರಿಂದ 2018ರ ಅವಧಿಯಲ್ಲಿ ಅಧಿಕಾರದಲ್ಲಿ ಇದ್ದ ಕಾಂಗ್ರೆಸ್ ನೇತೃತ್ವದ ಸರ್ಕಾರವು ಪಠ್ಯಪುಸ್ತಕಗಳ ಪರಿಷ್ಕರಣೆಗಾಗಿ ಸಾಹಿತಿ ಬರಗೂರು ರಾಮಚಂದ್ರಪ್ಪ ಅವರ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿತ್ತು. ಈ ಸಮಿತಿಯು ವಿಷಯ ತಜ್ಞರ 27 ಸಮಿತಿಗಳನ್ನು ರಚಿಸಿ ಪಠ್ಯ ಪರಿಷ್ಕರಣೆ ನಡೆಸಿತ್ತು. ಈ 27 ಸಮಿತಿಗಳಲ್ಲಿ 130ಕ್ಕೂ ಹೆಚ್ಚು ಸದಸ್ಯರಿದ್ದರು. ತರುವಾಯ ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾದ ಬಳಿಕ, ಬಲಪಂಥೀಯ ಸಿದ್ಧಾಂತದ ಬಲವಾದ ಪ್ರತಿಪಾದಕ ರೋಹಿತ್ ಚಕ್ರತೀರ್ಥ ಅವರ ನೇತೃತ್ವದಲ್ಲಿ ಪಠ್ಯ ಪರಿಶೀಲನೆಗೆ ಸಮಿತಿಯೊಂದನ್ನು ರಚಿಸಿದ್ದರು. ರೋಹಿತ್ ಚಕ್ರತೀರ್ಥ ಅವರ ನೇಮಕಕ್ಕೆ ಆಕ್ಷೇಪ ವ್ಯಕ್ತವಾಗಿತ್ತು. ಪಠ್ಯ ಪರಿಷ್ಕರಣೆ ಸಮಿತಿಯ ಅಧ್ಯಕ್ಷತೆ ವಹಿಸಲು ಅವರಿಗೆ ಇರುವ ಅರ್ಹತೆಯಾದರೂ ಏನು ಎಂಬ ಪ್ರಶ್ನೆ ಜೋರಾಗಿಯೇ ಕೇಳಿಬಂದಿತ್ತು. ಆಗ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾಗಿದ್ದ ಬಿ.ಸಿ. ನಾಗೇಶ್ ಅವರು ಸಮಜಾಯಿಷಿ ನೀಡಿ, ಪಠ್ಯದಲ್ಲಿ ಸೇರಿಕೊಂಡಿರುವ ಕೆಲವು ತಪ್ಪುಗಳನ್ನು ಸರಿಪಡಿಸುವ ಕೆಲಸವನ್ನು ಮಾತ್ರ ಈ ಸಮಿತಿ ಮಾಡಲಿದೆ, ಪಠ್ಯ ಪರಿಷ್ಕರಣೆ ಅಲ್ಲ ಎಂದಿದ್ದರು. ಸಮಾಜ ವಿಜ್ಞಾನ ಪಠ್ಯ ಪುಸ್ತಕದಲ್ಲಿ ಇದ್ದ ಕೆಲವು ಅಂಶಗಳು ತಮ್ಮ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಿವೆ ಎಂದು ಬ್ರಾಹ್ಮಣ ಸಮುದಾಯದ ಕೆಲವರು ದೂರು ಕೊಟ್ಟದ್ದು, ಪಠ್ಯ ಪರಿಷ್ಕರಣೆಗಾಗಿ ಸಮಿತಿ ರಚನೆಗೆ ತಕ್ಷಣದ ಕಾರಣವಾಗಿತ್ತು. ಚಕ್ರತೀರ್ಥ ನೇತೃತ್ವದ ಸಮಿತಿಯು ತನ್ನ ವ್ಯಾಪ್ತಿಯನ್ನು ಮೀರಿ ಪಠ್ಯದಲ್ಲಿ ಕೆಲವು ಪ್ರಮುಖ ಬದಲಾವಣೆಗಳನ್ನು ಮಾಡಿತ್ತು. ಕೆಲವು ಪಾಠಗಳನ್ನು ಕೈಬಿಟ್ಟಿತ್ತು. ಆರ್‌ಎಸ್‌ಎಸ್ ಸ್ಥಾಪಕ ಕೆ.ಬಿ.ಹೆಡಗೇವಾರ್ ಅವರ ಕುರಿತು ಪಾಠವೊಂದನ್ನು ಸೇರಿಸಲಾಯಿತು. ಸಮಾಜ ಸುಧಾರಕ ನಾರಾಯಣ ಗುರು ಮತ್ತು ಸ್ವಾತಂತ್ರ್ಯ ಹೋರಾಟಗಾರ ಭಗತ್ ಸಿಂಗ್ ಅವರ ಕುರಿತ ಪಾಠಗಳನ್ನು ಕೈಬಿಡಲಾಯಿತು. ಪ್ರಗತಿಪರ ಲೇಖಕರು ಬರೆದಿದ್ದ ಕೆಲವು ಪಾಠಗಳನ್ನೂ ತೆಗೆದುಹಾಕಲಾಗಿತ್ತು.



ಶಾಲಾ ಪಠ್ಯ ಪರಿಷ್ಕರಣೆಗೆ ಸಂಬಂಧಿಸಿದಂತೆ ರಾಜಕೀಯ ಪಕ್ಷಗಳ ನಡುವಣ ಸಿದ್ಧಾಂತದ ಜಟಾಪಟಿಯು ವಿದ್ಯಾರ್ಥಿಗಳ ಮೇಲೆ ಪರಿಣಾಮ ಬೀರದಂತೆ ನೋಡಿಕೊಳ್ಳಬೇಕು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಇತ್ತೀಚೆಗೆ ಭೇಟಿಯಾಗಿದ್ದ ಲೇಖಕರು ಮತ್ತು ಶಿಕ್ಷಣ ತಜ್ಞರ ನಿಯೋಗವೊಂದು ಪಠ್ಯ ಪರಿಷ್ಕರಣೆಯ ಅಗತ್ಯ ಇದೆ ಎಂದು ಪ್ರತಿಪಾದಿಸಿದೆ. ಈಗ ಇರುವ ಪಠ್ಯವು ಸಂವಿಧಾನ ವಿರೋಧಿ ಮತ್ತು ಕೋಮುವಾದಿ ಆಗಿದ್ದು, ಇತಿಹಾಸವನ್ನು ತಿರುಚಲಾಗಿದೆ ಎಂದು ಈ ನಿಯೋಗವು ಹೇಳಿದೆ. ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂಬ ಭರವಸೆಯನ್ನು ಮುಖ್ಯಮಂತ್ರಿ ಈ ನಿಯೋಗಕ್ಕೆ ನೀಡಿದ್ದಾರೆ. ಮಕ್ಕಳ ಮನಸ್ಸನ್ನು ಹಾಳುಮಾಡುವ ಪಠ್ಯಪುಸ್ತಕಗಳು ಮತ್ತು ಪಾಠಗಳನ್ನು ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ ಎಂದು ಅವರು ಹೇಳಿದ್ದಾರೆ. ಪಠ್ಯವನ್ನು ತಿರುಚಲಾಗಿದ್ದರೆ ಅದನ್ನು ಸರಿಪಡಿಸಬೇಕು ಎಂಬುದರಲ್ಲಿ ಯಾವುದೇ ಸಂದೇಹ ಇಲ್ಲ. ಪಠ್ಯದಲ್ಲಿ ಸಂವಿಧಾನ ವಿರೋಧಿ ಅಂಶಗಳು, ಕೋಮು ಭಾವನೆ ಕೆರಳಿಸುವಂಥ ಅಂಶಗಳಿದ್ದರೆ ಅವುಗಳನ್ನು ಸರಿಪಡಿಸಲೇಬೇಕು. ಮಕ್ಕಳ ಮನಸ್ಸಿನಲ್ಲಿ ವಿಷ ಬೀಜ ಬಿತ್ತುವುದಕ್ಕೆ ಪಠ್ಯಪುಸ್ತಕಗಳು ಬಳಕೆ ಆಗಬಾರದು. ನಿಗದಿತ ಅವಧಿಯಲ್ಲಿ ಪಠ್ಯ ಪರಿಷ್ಕರಣೆ ಆಗಬೇಕಾದುದು ಅಗತ್ಯ. ಆದರೆ, ಪಠ್ಯಪುಸ್ತಕವನ್ನು ಆಗಾಗ ಬದಲಾಯಿಸಿದರೆ ಅದು ವಿದ್ಯಾರ್ಥಿಗಳ ಕಲಿಕೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂಬ ಎಚ್ಚರ ಆಡಳಿತಾರೂಢರಿಗೆ ಇರಬೇಕು. ಜೊತೆಗೆ, ಆಡಳಿತಾರೂಢ ಪಕ್ಷದ ಸಿದ್ಧಾಂತವನ್ನು ವಿದ್ಯಾರ್ಥಿಗಳ ಮೇಲೆ ಹೇರುವುದಕ್ಕಾಗಿ ಪಠ್ಯ ಪರಿಷ್ಕರಣೆ ಮಾಡುವುದು ಅಕ್ಷಮ್ಯ. ಪಠ್ಯಗಳನ್ನು ಇನ್ನಷ್ಟು ಪರಿಣಾಮಕಾರಿ ಆಗಿಸುವುದು ಮತ್ತು ವಿದ್ಯಾರ್ಥಿಗಳ ಕೌಶಲವನ್ನು ಮೇಲ್ದರ್ಜೆಗೆ ಏರಿಸುವುದು ಮಾತ್ರ ಪಠ್ಯ ಪರಿಷ್ಕರಣೆಯ ಗುರಿಯಾಗಿರಬೇಕು. ಪಠ್ಯ ಪರಿಷ್ಕರಣೆಯಲ್ಲಿನ ಸ್ವೇಚ್ಛಾಚಾರಕ್ಕೆ ತಡೆ ಒಡ್ಡುವುದು ಜರೂರಾಗಿ ಆಗಬೇಕಿದೆ. ಶೈಕ್ಷಣಿಕ ವರ್ಷ ಈಗಾಗಲೇ ಆರಂಭವಾಗಿದೆ. ವರ್ಷದ ಮಧ್ಯದಲ್ಲಿ ಪಠ್ಯ ಪರಿಷ್ಕರಣೆಯು ವಿದ್ಯಾರ್ಥಿಗಳು ಮತ್ತು ಶಿಕ್ಷಕರನ್ನು ಗೊಂದಲಕ್ಕೆ ತಳ್ಳಬಹುದು ಎಂಬುದನ್ನು ಸರ್ಕಾರ ಗಮನದಲ್ಲಿ ಇರಿಸಿಕೊಳ್ಳಬೇಕು. ರಾಜಕೀಯ ಪಕ್ಷಗಳ ನಡುವಣ ಸಿದ್ಧಾಂತದ ಜಟಾಪಟಿಯು ವಿದ್ಯಾರ್ಥಿಗಳ ಮೇಲೆ ಪರಿಣಾಮ ಬೀರದಂತೆ ನೋಡಿಕೊಳ್ಳಬೇಕು. ವಿದ್ಯಾರ್ಥಿಗಳು ಏನನ್ನು ಕಲಿಯಬೇಕು ಮತ್ತು ಏನನ್ನು ಕಲಿಯಬಾರದು ಎಂಬುದನ್ನು ವಿಷಯ ತಜ್ಞರು ನಿರ್ಧರಿಸಬೇಕು. ಈ ಪ್ರಕ್ರಿಯೆಯಲ್ಲಿ ರಾಜಕಾರಣಿಗಳಿಗೆ ಪ್ರವೇಶ ಇಲ್ಲದಂತೆ ನೋಡಿಕೊಳ್ಳಬೇಕು.

ದಿನದ ಟ್ವೀಟ್

ಅಪಘಾತಕ್ಕೆ ಆಹ್ವಾನ?



ಮದ್ದೂರಿನಿಂದ ಬೆಂಗಳೂರಿಗೆ ಟೋಲ್ ದರ 165 ರೂಪಾಯಿ... ವಂಡರ್ ಲಾ ನಿರ್ಗಮನ ಟೋಲ್ ತಪ್ಪಿಸಲು ಬಹಳಷ್ಟು ವಾಹನಗಳು ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ರಾಂಗ್ ರೂಟ್‌ನಲ್ಲಿ ಚಲಿಸುತ್ತವೆ. ನಿಗಾ ಇಡುವವರು ಯಾರೂ ಇಲ್ಲದೆ ಭಾರಿ ಅಪಘಾತಗಳಿಗೆ ಆಹ್ವಾನ ನೀಡುತ್ತಿವೆ. ವಿಶ್ವ ದರ್ಜೆಯ ಎಕ್ಸ್‌ಪ್ರೆಸ್ ಹೆದ್ದಾರಿಯ ಕಥೆ ಇದು.

ರೋಹಿತ್ ಸಿಂಹ, ಎಂಜಿನಿಯರ್

ಕಿಡಿನುಡಿ



ಯಾವುದೇ ಪ್ರಶ್ನೆಯು ಪ್ರಾಮಾಣಿಕ ಉತ್ತರವನ್ನು ಅಪೇಕ್ಷಿಸುತ್ತದೆ. ರೈಲ್ವೆಯು ಸ್ವಯಂಚಾಲಿತ ಬ್ರೇಕುಗಳ ಮೂಲಕ ರೈಲುಗಳ ಡಿಕ್ಕಿ ತಡೆಯಲು ಡಿಕ್ಕಿ ನಿರೋಧಕ ಉಪಕರಣಗಳನ್ನು 2011ರಲ್ಲಿ ಅಳವಡಿಸಿದೆ ಎಂದಾದರೆ, ಅದಾಗಿ 12 ವರ್ಷಗಳಾದ ಮೇಲೂ ಏಕೆ ಶೇಕಡ 2 ಅಥವಾ 3ರಷ್ಟು ರೈಲ್ವೆ ಜಾಲದಲ್ಲಿ ಮಾತ್ರ ಈ ವ್ಯವಸ್ಥೆ ಇದೆ? ಸುರಕ್ಷತೆಗಾಗಿ ಮಾಡುವ ಹೂಡಿಕೆಯಲ್ಲಿ ಹಿನ್ನಡೆಯಾಗಿದೆಯೇ?

ಎಂ.ಕೆ.ವೇಣು, ಪತ್ರಕರ್ತ

25 ವರ್ಷಗಳ ಹಿಂದೆ

ಶುಕ್ರವಾರ, 5-6-1998

- **ಅಣ್ವಸ್ತ್ರ: ಅಗ್ರ ರಾಷ್ಟ್ರಗಳ ನೀತಿಗೆ ಪ್ರಧಾನಿ ಖಂಡನೆ**

ನವದೆಹಲಿ, ಜೂನ್ 4 (ಪಿಟಿಐ, ಯುಎನ್‌ಐ)– ಪರಮಾಣು ನಿಶ್ಶಸ್ತ್ರೀಕರಣ ವಿಶ್ವವ್ಯಾಪಿಯಾಗಿರಬೇಕು ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಇಂದು ಕರೆ ನೀಡಿದರು.

ಪರಮಾಣು ಶಸ್ತ್ರಗಳನ್ನು ಸಂಪೂರ್ಣವಾಗಿ ತೊಡೆದುಹಾಕುವ ಗುರಿಗೆ ಕಡೆಗಣ್ಣು ತೋರುತ್ತಿರುವ ಐದು ಅಗ್ರ ರಾಷ್ಟ್ರಗಳ (ಭದ್ರತಾ ಮಂಡಳಿಯ ಕಾಯಂ ಸದಸ್ಯ ರಾಷ್ಟ್ರಗಳು) ಧೋರಣೆಯನ್ನು ಅವರು ಖಂಡಿಸಿದರು. ನಿಶ್ಶಸ್ತ್ರೀಕರಣದ ಪ್ರಶ್ನೆ ಭಾರತ, ಪಾಕಿಸ್ತಾನಕ್ಕೆ ಮಾತ್ರ ಸಂಬಂಧಿಸಿದುದಾಗಿಲ್ಲ ಎಂದು ಅವರು ಹೇಳಿದರು.

- **ಜಯಲಲಿತಾ ಆಸ್ತಿ ಜಪ್ತಿಗೆ ಕೋರ್ಟ್ ತಡೆ**

ಚೆನ್ನೈ, ಜೂನ್ 4 (ಯುಎನ್‌ಐ)– ಎಐಎಡಿಎಂಕೆ ನಾಯಕಿ ಜೆ. ಜಯಲಲಿತಾ ಅವರ ಆಸ್ತಿ ಜಪ್ತಿಗೆ ಮದ್ರಾಸ್ ಹೈಕೋರ್ಟ್ ಇಂದು ರಾತ್ರಿ ತಡೆಯಾಜ್ಞೆ ನೀಡಿದೆ.

ಜಯಾ ಅವರ ವಿರುದ್ಧ ಇರುವ ಭ್ರಷ್ಟಾಚಾರದ ಪ್ರಕರಣಗಳ ತನಿಖೆ ನಡೆಸುತ್ತಿರುವ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಎಸ್. ಸಂಬಂಧಂ ಅವರು, ಜಯಲಲಿತಾ ಅವರ ಆಸ್ತಿ ಪ್ರಕರಣ ಇತ್ಯರ್ಥವಾಗುವವರೆಗೆ ರೂ. 11.59 ಕೋಟಿ ಮೌಲ್ಯದ ಚರಾಸ್ತಿಯನ್ನು ಜಪ್ತಿ ಮಾಡಲು ಈ ಮೊದಲು ಆಜ್ಞೆ ಮಾಡಿದ್ದರು.

50 ವರ್ಷಗಳ ಹಿಂದೆ

ಮಂಗಳವಾರ, 5-6-1973

- **ಚವಾಣ್‌ಗೆ ಬೇರೆ ಖಾತೆ: ಆಹಾರ ಸುಬ್ರಹ್ಮಣ್ಯಂ ಅಥವಾ ಪೈ ಅವರಿಗೆ?**

ನವದೆಹಲಿ, ಜೂನ್ 4– ಕೇಂದ್ರ ಹಣಕಾಸು ಸಚಿವ ವೈ.ಬಿ. ಚವಾಣ್‌ರನ್ನು ಬೇರೊಂದು ಪ್ರಮುಖ ಖಾತೆಗೆ ವರ್ಗಾಯಿಸಿ, ಆಹಾರ ಖಾತೆಯನ್ನು ಭಾರಿ ಕೈಗಾರಿಕೆಗಳ ಸಚಿವ ಟಿ.ಎ. ಪೈ ಅಥವಾ ಕೈಗಾರಿಕಾಭಿವೃದ್ಧಿ ಸಚಿವ ಸಿ. ಸುಬ್ರಹ್ಮಣ್ಯಂ ಅವರಿಗೆ ವಹಿಸಬಹುದೆಂದು ಇಲ್ಲಿ ತಿಳಿದುಬಂದಿದೆ.

ಜಗಜೀವನ ರಾಂ ಅವರನ್ನು ಕೈಬಿಡಬಹುದು ಅಥವಾ ಅವರ ಖಾತೆಯನ್ನು ಬದಲಾಯಿಸಬಹುದು ಎಂದು ಕೆಲವರು ಭಾವಿಸುತ್ತಿದ್ದಾರೆ. ಆದರೆ ಜಗಜೀವನ ರಾಂ ಅವರು ಹಿರಿಯ ಸಚಿವರಾಗಿರುವುದರಿಂದಲೂ ಸಂಸತ್ತಿನಲ್ಲೂ ಹೊರಗೂ ಅವರ ಹಿಂಬಾಲಕರು ಬಹಳ ಇರುವುದರಿಂದಲೂ ಇಂದಿರಾ ಗಾಂಧಿ ಅವರು ರಾಂ ಅವರಿಗೆ ಸಂಬಂಧಿಸಿದಂತೆ ಬದಲಾವಣೆ ಮಾಡಲಾರರು.

ಮೋಹನ ಕುಮಾರ ಮಂಗಳಂ ಅವರ ನಿಧನದಿಂದಾಗಿ ಸಂಪುಟದಲ್ಲಿ ಜರೂರಾಗಿ ಬದಲಾವಣೆಗಳಾಗಬೇಕಾಗಿದೆ. ಸಂಪುಟದಲ್ಲಿ ಸಂಪೂರ್ಣ ಬದಲಾವಣೆ ಮಾಡಿ ಅದಕ್ಕೊಂದು ಹೊಸ ರೂಪ ಕೊಡಲು ಪ್ರಧಾನಿ ಇಂದಿರಾ ಗಾಂಧಿ ಅವರು ಈಗಿನ ಅವಕಾಶವನ್ನು ಉಪಯೋಗಿಸಿಕೊಳ್ಳುವ ಸಾಧ್ಯತೆ ಇದೆ.

- **ವಿದ್ಯಾರ್ಥಿಗಳಿಗೆ ಸಿಂಡಿಕೇಟ್‌ನಲ್ಲಿ ಪ್ರಾತಿನಿಧ್ಯಕ್ಕೆ ಒತ್ತಾಯ**

ಬೆಂಗಳೂರು, ಜೂನ್ 4– ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯ ಸಿಂಡಿಕೇಟ್‌ನಲ್ಲೂ ಪ್ರಾತಿನಿಧ್ಯ ಇರಬೇಕು ಎಂದು ಇಂದು ವಿಧಾನ ಪರಿಷತ್‌ನಲ್ಲಿ ಒತ್ತಾಯ ಬಂತು.

ಮೈಸೂರು ವಿಶ್ವವಿದ್ಯಾನಿಲಯಗಳ ವಿಧೇಯಕಗಳ ಪರಿಶೀಲನೆಯ ನಂತರ ಪರಿಷತ್ತು ಅದನ್ನು ಜಂಟಿ ಪರಿಶೀಲಕ ಸಮಿತಿಗೆ ಒಪ್ಪಿಸಿತು.

ಈ ಒಂಬತ್ತು ವರ್ಷಗಳ ಅವಧಿಯಲ್ಲಿ ಭಾರತವು ಆತ್ಮನಿರ್ಭರವಾಗಿದೆ

ಮೋದಿ ನಾಯಕತ್ವದ ಪಯಣ



ಸೂರ್ಯ-ನಮಸ್ಕಾರ

ಎ. ಸೂರ್ಯ ಪ್ರಕಾಶ್

ಅಮೆರಿಕದ ಅಧ್ಯಕ್ಷ ಜೋ ಬೈಡನ್, ಆಸ್ಟ್ರೇಲಿಯಾ ಪ್ರಧಾನಿ ಆ್ಯಂಟನಿ ಆಲ್ಬನೀಸ್ ಮತ್ತು ಪಪುವಾ ನ್ಯೂ ಗಿನಿ ಪ್ರಧಾನಿ ಜೇಮ್ಸ್ ಮರಪೆ ಅವರು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಈಚೆಗೆ ಗೌರವಿಸಿದ ಬಗೆ ಹಾಗೂ ಮೋದಿ ಅವರಿಗೆ ಸಿಡ್ನಿ ಕ್ರೀಡಾಂಗಣದಲ್ಲಿ ದೊರೆತ ಭಾರಿ ಸ್ವಾಗತವು ಬಹಳ ಸೂಕ್ತವಾದ ಸಂದರ್ಭದಲ್ಲಿ ಬಂದೊದಗಿವೆ. ಮೋದಿ ಅವರು ಪ್ರಧಾನಿಯಾಗಿ ಈಗಷ್ಟೇ ಒಂಬತ್ತು ವರ್ಷ ಪೂರ್ಣಗೊಳಿಸಿದ್ದಾರೆ. ಅವರಿಗೆ ಸಿಕ್ಕಿರುವ ಪ್ರಶಂಸೆಯ ಮಾತುಗಳು, ರಾಷ್ಟ್ರನಾಯಕ ಆಗಿದ್ದ ಅವರು ವಿಶ್ವನಾಯಕ ಆಗಿ ಪರಿವರ್ತನೆ ಕಂಡಿದ್ದನ್ನು ಸೂಚಿಸುತ್ತಿವೆ.

ಹಿರೋಶಿಮಾದಲ್ಲಿ ನಡೆದ ಜಿ-7 ಗುಂಪಿನ ಸಭೆಯ ಸಂದರ್ಭದಲ್ಲಿ ಮೋದಿ ಮತ್ತು ಬೈಡನ್ ಭೇಟಿಯಾದರು. ಜೂನ್‌ನಲ್ಲಿ ಮೋದಿ ಅವರಿಗೆ ತಾವು ಆಯೋಜಿಸಿರುವ ವಿಶೇಷ ಔತಣಕೂಟದಲ್ಲಿ ಪಾಲ್ಗೊಳ್ಳಲು ಬಹಳ ಜನ ಬಯಕೆ ವ್ಯಕ್ತಪಡಿಸುತ್ತಿದ್ದಾರೆ, ಅವರನ್ನೆಲ್ಲ ಆಹ್ವಾನಿಸಲು ತಮ್ಮಿಂದ ಆಗುತ್ತಿಲ್ಲ ಎಂದು ಬೈಡನ್ ಹೇಳಿದರು. ಮೋದಿ ಅವರ ಜನಪ್ರಿಯತೆ ಎಷ್ಟಿದೆಯೆಂದರೆ, ತಮಗೆ ಮೋದಿ ಅವರ ಹಸ್ತಾಕ್ಷರ ಕೇಳಬೇಕು ಅನ್ನಿಸುತ್ತಿದೆ ಎಂದು ಕೂಡ ಬೈಡನ್ ಚಟಾಕಿ ಹಾರಿಸಿದರು. ಸಿಡ್ನಿ ಕ್ರೀಡಾಂಗಣದಲ್ಲಿ ಆಲ್ಬನೀಸ್ ಅವರೂ ಇದೇ ಬಗೆಯಲ್ಲಿ ಮಾತನಾಡಿದರು. ಅಮೆರಿಕದ ಗಾಯಕ ಬ್ರೂಸ್ ಸ್ಪ್ರಿಂಗ್‌ಸ್ಟೀನ್ ಅವರಿಗೂ ಸಿಡ್ನಿ ಕ್ರೀಡಾಂಗಣದಲ್ಲಿ ಮೋದಿ ಅವರಿಗೆ ಸಿಕ್ಕಂತಹ ಸ್ವಾಗತ ದೊರೆತಿರಲಿಲ್ಲ ಎಂದು ಆಲ್ಬನೀಸ್ ಹೇಳಿದರು. ಕ್ರೀಡಾಂಗಣದಲ್ಲಿ ಸೇರಿದ್ದ 20 ಸಾವಿರ ಜನರ ಎದುರು ಆಲ್ಬನೀಸ್ ಅವರು ಮೋದಿ ಅವರನ್ನು 'ದಿ ಬಾಸ್' ಎಂದು ಕರೆದರು. ಆಸ್ಟ್ರೇಲಿಯಾದ ಪ್ರಜಾತಂತ್ರ ವ್ಯವಸ್ಥೆಯನ್ನು ಇನ್ನಷ್ಟು ಗಟ್ಟಿಗೊಳಿಸಿದ್ದಕ್ಕೆ ಹಾಗೂ ಹೆಚ್ಚು ಒಳಗೊಳ್ಳುವ ವ್ಯವಸ್ಥೆಯನ್ನಾಗಿಸಿದ್ದಕ್ಕೆ ಅವರು ಮೋದಿ ಅವರಿಗೆ ಧನ್ಯವಾದ ಸಮರ್ಪಿಸಿದರು.

ಇವರಿಬ್ಬರ ಮಾತುಗಳಿಗಿಂತ ಹೆಚ್ಚು ಅಚ್ಚರಿ ಉಂಟುಮಾಡಿದ್ದು ಮರಪೆ ಅವರ ನಡೆ. ಅವರು ಮೋದಿ ಅವರ ಕಾಲು ಮುಟ್ಟಿ ಗೌರವ ಸಮರ್ಪಿಸಿದರು. ಈ ನಡೆಯು ಭಾರತೀಯರನ್ನು ಬೆರಗಾಗಿಸಿತು. ಏಕೆಂದರೆ ಭಾರತದ ಪ್ರಧಾನಿಗೆ ಬೇರೆ ದೇಶಗಳ ನಾಯಕರು ಯಾವತ್ತೂ ಈ ರೀತಿಯಲ್ಲಿ ಗೌರವ ಸಮರ್ಪಿಸಿದ್ದನ್ನು ಕಂಡಿರಲಿಲ್ಲ. ಭಾರತದ ಹಿಂದಿನ ಯಾವ ಪ್ರಧಾನಿಯ ಬಗ್ಗೆಯೂ ಜಾಗತಿಕ ನಾಯಕರು ಈ ರೀತಿಯಲ್ಲಿ ಪ್ರಶಂಸೆಯ ಮಾತುಗಳನ್ನು ಆಡಿದ ನಿದರ್ಶನವಿಲ್ಲ. ಭಾರತದ ವಿದೇಶಾಂಗ ನೀತಿಗೆ ಸ್ಪಷ್ಟ ದಿಕ್ಕು ತೋರಿಸಿದ್ದಕ್ಕೆ ಹಾಗೂ ಜಾಗತಿಕ ವೇದಿಕೆಗಳಲ್ಲಿ ತಾವು ನಡೆದುಕೊಂಡ ಬಗೆಗೆ ಮೋದಿ ಅವರಿಗೆ ಶ್ರೇಯಸ್ಸು ಸಲ್ಲಬೇಕು.

ನ್ಯೂಯಾರ್ಕ್, ಟೆಕ್ಸಾಸ್, ಸಿಡ್ನಿ... ಹೀಗೆ ಬೇರೆ ದೇಶಗಳಲ್ಲಿ ವಾಸಿಸುತ್ತಿರುವ ಭಾರತೀಯರು ಹಾಗೂ ಭಾರತ ಮೂಲದವರು ಭಾರತದ ಯಾವ ಪ್ರಧಾನಿಯನ್ನೂ ಇಷ್ಟೊಂದು ಉತ್ಸಾಹದಿಂದ ಸ್ವಾಗತಿಸಿದ ಉದಾಹರಣೆ ಇಲ್ಲ. ಈಗ ಆಗುತ್ತಿರುವುದು ನಿಜಕ್ಕೂ ಅಭೂತಪೂರ್ವ.

ಆರು ವರ್ಷಗಳ ಹಿಂದೆ ಅಮೆರಿಕದ ಕಾಂಗ್ರೆಸ್‌ನ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡಲು ಹೋಗಿದ್ದಾಗ ಮೋದಿ ಅವರನ್ನು ಅಲ್ಲಿನ ಸದಸ್ಯರು ಎದ್ದು ನಿಂತು ಆರು ನಿಮಿಷಗಳ ಕಾಲ ಚಪ್ಪಾಳೆ ತಟ್ಟಿ ಸ್ವಾಗತಿಸಿದ್ದರು. ಮೋದಿ ಅವರಿಗೆ ಸಿಕ್ಕ ಗೌರವವನ್ನು ನೋಡಿಯೇ ನಂಬಬೇಕಿತ್ತು. ಇವೆಲ್ಲವುಗಳ ಅರ್ಥವೇನು? ಕಳೆದ ಒಂಬತ್ತು ವರ್ಷಗಳಲ್ಲಿ ಮೋದಿ ಅವರು ಜನಪ್ರಿಯತೆಯ ಏಣಿಯನ್ನು ನಿಧಾನವಾಗಿ ಹಾಗೂ ದೃಢವಾಗಿ ಏರಿದ್ದಾರೆ.

ಮೋದಿ ಅವರು ಭಾರತದ ವಿದೇಶಾಂಗ ನೀತಿಯನ್ನು 'ಭಾರತಕ್ಕೆ ಹೆಚ್ಚು ಸೂಕ್ತವಾಗುವ' ರೀತಿಯಲ್ಲಿ ಬದಲಾಯಿಸಿರುವುದು; ರಷ್ಯಾ ಮತ್ತು ಅಮೆರಿಕದ ಜೊತೆ ಭಾರತದ ಸಂಬಂಧವನ್ನು ತೂಗಿಸಿಕೊಂಡು ಹೋಗುತ್ತಿರುವುದು; ಚೀನಾವನ್ನು ಅವರು ನಿಭಾಯಿಸುತ್ತಿರುವ ಬಗೆ; ಇಂಡೊ-ಪೆಸಿಫಿಕ್ ಪ್ರದೇಶದಲ್ಲಿ ಭಾರತದ ಹಿತಾಸಕ್ತಿಯನ್ನು ಕಾಯುವ ಉದ್ದೇಶದಿಂದ ಕ್ವಾಡ್ ಒಕ್ಕೂಟಕ್ಕೆ ತೋರಿರುವ ಬದ್ಧತೆ, ದೇಶದ ಮಿಲಿಟರಿ ಶಕ್ತಿಯನ್ನು ಹೆಚ್ಚಿಸಲು ಆದ್ಯತೆ ಹಾಗೂ ರಕ್ಷಣಾ ಉಪಕರಣಗಳ ತಯಾರಿಕೆಯು ಭಾರತದಲ್ಲಿಯೇ ಆಗಬೇಕು ಎಂಬ ಗುರಿ... ಇವೆಲ್ಲ ನಿಜಕ್ಕೂ ಅಸಾಮಾನ್ಯ ಹಾಗೂ ಅಭೂತಪೂರ್ವ. ರಕ್ಷಣಾ ವಲಯದಲ್ಲಿ 'ಭಾರತದಲ್ಲಿಯೇ ತಯಾರಿಸಿ' ಕಾರ್ಯಕ್ರಮವು ಈ ಹಿಂದೆ ಇಷ್ಟೊಂದು ಆದ್ಯತೆಯನ್ನು ಪಡೆದಿರಲೇ ಇಲ್ಲ

ಉಕ್ರೇನ್ ಬಿಕ್ಕಟ್ಟನ್ನು ಮೋದಿ ಅವರು ನಿಭಾಯಿಸಿದ ರೀತಿಯು ನಿಜಕ್ಕೂ ಗುರುತಿಸಬೇಕಾದಂಥದ್ದು. ಅಮೆರಿಕವು ರಷ್ಯಾ ವಿರುದ್ಧ ಆರ್ಥಿಕ ನಿರ್ಬಂಧಗಳನ್ನು ಹೇರುತ್ತಿದ್ದರೂ, ರಷ್ಯಾದ ಜೊತೆಗಿನ ಸ್ನೇಹವನ್ನು ಕಾಪಾಡಿಕೊಂಡು, ಪೆಟ್ರೋಲಿಯಂ ಉತ್ಪನ್ನಗಳ ಪೂರೈಕೆಯು ಸ್ಥಿರವಾಗಿ ಇರುವಂತೆ ಮೋದಿ ನೋಡಿಕೊಂಡಿದ್ದಾರೆ. ಇದು ತಂತಿಯ ಮೇಲಿನ ನಡಿಗೆಯೇ ಸೈ. ಅಲ್ಲದೆ, ಮೋದಿ ಅವರು ಉಕ್ರೇನ್‌ಗೆ ಮಾನವೀಯ ನೆರವು ಒದಗಿಸುವ ವಿಚಾರದಲ್ಲಿ ಬದ್ಧತೆ ತೋರಿದ್ದಾರೆ. ನೆರವಿನ ಹಸ್ತಕ್ಕೆ ಪ್ರತಿಕ್ರಿಯೆ ನೀಡಿರುವ ಉಕ್ರೇನ್‌ನ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಮೋದಿ ಅವರಿಗೆ ಧನ್ಯವಾದ ಹೇಳಿದ್ದಾರೆ.

ನೆಹರೂ ಚಿಂತನೆಗಳ ನೆಲೆಯಲ್ಲಿ ದಶಕಗಳಿಂದ ಬೆಳೆದುಬಂದಿರುವ ಭಾರತೀಯ ವಿದೇಶಾಂಗ ಸೇವೆಯಲ್ಲಿನ ಆಲೋಚನಾ ಕ್ರಮವನ್ನು ಕೂಡ ಮೋದಿ ಅವರು ಬದಲಾಯಿಸಿದ್ದಾರೆ. ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರ ಮಾತು ಹಾಗೂ ಅವರ ನಡೆಯಲ್ಲಿ ಈ ಹೊಸ ಆಲೋಚನಾ ಕ್ರಮವು ಸ್ಪಷ್ಟವಾಗಿ ಕಾಣಿಸುತ್ತಿದೆ. ಜೈಶಂಕರ್ ಅವರು ಪಾಕಿಸ್ತಾನ ಹಾಗೂ ಚೀನಾದ ಸ್ವೀಕಾರಾರ್ಹವಲ್ಲದ ನಡೆಗಳ ಬಗ್ಗೆ ಹಲವು ವೇದಿಕೆಗಳಲ್ಲಿ, ಹಲವು ಸಂದರ್ಭಗಳಲ್ಲಿ ಟೀಕೆ ವ್ಯಕ್ತಪಡಿಸಿದ್ದಾರೆ.

ಉದಾಹರಣೆಗೆ, ಅಂತರರಾಷ್ಟ್ರೀಯ ಭಯೋತ್ಪಾದನಾ ನಿಗ್ರಹ ಸಮಾವೇಶದಲ್ಲಿ ಭಾರತವು ಮೊದಲ ಬಾರಿಗೆ ಹಿಂದೂಫೋಬಿಯಾ ಕುರಿತು ಪ್ರಸ್ತಾಪಿಸಿದೆ. ವಿಶ್ವಸಂಸ್ಥೆಯಲ್ಲಿ ಭಾರತದ ಕಾಯಂ ಪ್ರತಿನಿಧಿಯಾಗಿರುವ ಟಿ.ಎಸ್. ತಿರುಮೂರ್ತಿ ಅವರು ಈ ವಿಚಾರವಾಗಿ ಹಲವು ದೇಶಗಳು ಇರಿಸಿರುವ ಹೆಜ್ಜೆಯನ್ನು ಪ್ರಶ್ನಿಸಿದ್ದಾರೆ. ಭಾರತವು ಇಷ್ಟು ಬಲಿಷ್ಠವಾಗಿ ತನ್ನ ವಿದೇಶಾಂಗ ಮತ್ತು ರಕ್ಷಣಾ ನೀತಿಗಳನ್ನು ಅಳವಡಿಸಿಕೊಂಡಿರಲಿಲ್ಲ. ಅಲ್ಲದೆ, ಇಷ್ಟು ಸ್ಪಷ್ಟವಾಗಿ ವಿಶ್ವ ಸಮುದಾಯಕ್ಕೆ ಸಂದೇಶವೊಂದನ್ನು ರವಾನಿಸಿರಲಿಲ್ಲ.

ಆದರೆ ಮೋದಿ ಅವರನ್ನು ವಿರೋಧಿಸುವವರ ಮನಃಸ್ಥಿತಿ ಅದೆಷ್ಟು ಕೆಟ್ಟದ್ದಾಗಿ ಇದೆಯೆಂದರೆ, ವಿದೇಶಾಂಗ ವ್ಯವಹಾರಗಳ ಮಾಜಿ ಸಚಿವ ಯಶವಂತ ಸಿನ್ಹಾ ಅವರು ತಾವು ಮುಂದಿನ ಲೋಕಸಭಾ ಚುನಾವಣೆಯಲ್ಲಿ ಪಪುವಾ ನ್ಯೂ ಗಿನಿಯಿಂದ ಬಿಜೆಪಿ ಟಿಕೆಟ್ ಕೇಳುವುದಾಗಿ ವ್ಯಂಗ್ಯವಾಡಿದ್ದಾರೆ. ಮೋದಿ ಅವರು ಪ್ರಧಾನಿಯಾದ ಹೊತ್ತಿನಿಂದ ವಿರೋಧ ಪಕ್ಷಗಳ ಟೀಕೆಗಳಲ್ಲಿ ನಕಾರಾತ್ಮಕತೆ ತುಂಬಿಕೊಂಡಿದೆ. 2014ರಲ್ಲಿ ಮೋದಿ ಅವರು ಮ್ಯಾನ್ಮಾರ್‌ಗೆ ಭೇಟಿ ನೀಡಿ, ಅಲ್ಲಿ 20 ಸಾವಿರ ಜನರನ್ನು ಉದ್ದೇಶಿಸಿ ಭಾಷಣ ಮಾಡಿದ್ದಾಗ ವಿರೋಧ ಪಕ್ಷದ ನಾಯಕರೊಬ್ಬರು, 'ಮೋದಿ ಅವರು ಚಪ್ಪಾಳೆ ತಟ್ಟಲು ಭಾರತದಿಂದ ಜನರನ್ನು ಕರೆದೊಯ್ದಿದ್ದಾರೆ' ಎಂದು ಹೇಳಿದ್ದರು. ಕೈಗೆಟುಕದ ದ್ರಾಕ್ಷಿ ಹುಳಿ ಎಂಬುದು ನಮಗೆಲ್ಲರಿಗೂ ಗೊತ್ತಿದೆ.

ಮೋದಿ ಅವರ ಅವಧಿಯಲ್ಲಿನ ಭಾರತವು ಆತ್ಮನಿರ್ಭರವಾಗಿದೆ. ಅದು ತನ್ನ ಅನಿಸಿಕೆಗಳನ್ನು ಮುಕ್ತವಾಗಿ ಹೇಳುತ್ತದೆ. ಉತ್ತರವನ್ನು ಬಯಸುತ್ತದೆ. ಈಗಿನ ಭಾರತವು ಇಬ್ಬಂದಿತನವನ್ನು ಸಹಿಸುವುದಿಲ್ಲ. ಇದು ಒಂದು ಬಗೆಯಲ್ಲಿ ವಿಶ್ವದ ಹೊಸ ವ್ಯವಸ್ಥೆಗೆ ಮೋದಿ ಅವರ ಕೊಡುಗೆ. ಅಂದರೆ ಇಲ್ಲಿ ಕೆಟ್ಟದ್ದನ್ನು ಕೆಟ್ಟದ್ದು ಎಂದೇ ಹೇಳಲಾಗುತ್ತದೆ, ಇಲ್ಲಿ ಇಬ್ಬಗೆಯ ಮಾತುಗಳಿಗೆ ಅವಕಾಶ ಇಲ್ಲ. ಹಿಂದೆ ಎತ್ತದಿದ್ದ ಪ್ರಶ್ನೆಗಳನ್ನು ಈಗ ಎತ್ತಲಾಗುತ್ತದೆ. ಇದು ನರೇಂದ್ರ ಮೋದಿ ಅವರ 'ನವ ಭಾರತ'.





ಚುರುಮುರಿ



ದೇಶಪ್ರೇಮದ ಕುಸ್ತಿ

• ಸುಮಂಗಲಾ

'ನೀ ಇನ್ನು ಮೂರೂ ಹೊತ್ತು ಬಸ್ಸಿನಾಗೆ ಅಡ್ಡಾಡಬೌದು ನೋಡು. ಕಾಸಿಲ್ಲ, ಖರ್ಚಿಲ್ಲ... ಎಲ್ಲಾ ಹೆಣ್ ಮಕ್ಕಳಿಗೂ ಸಿದ್ದು ಅಂಕಲ್ಲು ಫ್ರೀ ಬಸ್ಸುಭಾಗ್ಯ ಕೊಟ್ಟಾರೆ. ಇನ್ ಬಸ್ಸೊಳಗೆ ಬರೇ ಹೆಣ್ ಮಕ್ಕಳೇ ತುಂಬಿರತಾರ' ಎಂದು ಬೆಕ್ಕಣ್ಣ ನನ್ನ ಮೂತಿಗೆ ತಿವಿಯಿತು.

'ಸುಮ್ ಸುಮ್ನೆ ಬಸ್ಸೊಳಗ ಅಡ್ಡಾಡಾಕೆ ಹೆಣ್ ಮಕ್ಕಳಿಗೆ ಬ್ಯಾರೆ ಕೆಲಸ ಇಲ್ಲೇನು? ಎಷ್ಟೋ ಮನಿವಳಗೆ ಹೆಣ್ ಮಕ್ಕಳು ಕೆಲಸ ಮಾಡತಾರ ಅಂತ್ಹೇಳಿ ಒಲಿಯೊಳಗೆ ಬೆಂಕಿ ಉರೀತೈತಿ' ನಾನು ರೇಗಿದೆ.

'ಪ್ರಚಾರದ ಟೈಮಿನಾಗೆ ಎಲ್ಲಾ ಗ್ಯಾರಂಟಿ ಅಂದೋರು ಈಗ ಏನೇನೋ ಷರತ್ತು ಹಾಕ್ಯಾರೆ, ಈ ಕೈ ಪಕ್ಷದೋರು ಕೈಕೊಡಾಕ ಮುಂದು. ಆವಾಗ ನಮ್ ಮೋದಿ ಮಾಮ ನೋಟು ಹಿಂದೆ ತೆಕ್ಕೊಂಡಾಗ ಯಾವುದೇ ಷರತ್ತಿಲ್ಲದೆ ಎಲ್ಲರ ಬ್ಯಾಂಕ್ ಅಕೌಂಟಿಗೆ ಹದಿನೈದು ಲಕ್ಷ ಹಾಕ್ತೀವಿ ಅಂದಿದ್ದರು' ಎಂದು ನೆನಪಿಸಿಕೊಂಡಿತು.

'ಆದರೆ ಯಾರಿಗೂ ಹಾಕಲಿಲ್ಲವಲ್ಲ'.

'ಅದೇ ನಾನೂ ಹೇಳದು, ಯಾವುದೇ ಷರತ್ತಿಲ್ಲದೆ ಎಲ್ಲಾರಿಗೂ ಹಾಕ್ತೀವಿ ಅಂದಿದ್ರು, ಹಾಕದೇ ಇರಕ್ಕೂ ಯಾವುದೇ ಷರತ್ತು ವಿಧಿಸಿರಲಿಲ್ಲ' ಎಂದು ವಿತಂಡವಾದ ಹೂಡಿದ ಬೆಕ್ಕಣ್ಣ ಮುಂದಿನ ಸುದ್ದಿಗೆ ಹಾರಿತು.

'ಈ ಕುಸ್ತಿಪಟುಗಳಿಗೆ ಪ್ರತಿಭಟನೆ ನಡೆಸಾಕೆ ವಿದೇಶದಿಂದ ರೊಕ್ಕ ಬರತೈತಿ ಅಂತ ನಮ್ ಶೋಭಕ್ಕ ಹೇಳ್ಯಾಳ. ಬರೇ ದೇಶದ್ರೋಹದ ಕುಸ್ತಿ ಆಡತಾರ' ಎಂದಿತು.

'ಅಲ್ಲಲೇ... ಆ ಕುಸ್ತಿ ಫೆಡರೇಶನ್ ಅಧ್ಯಕ್ಷ ಅಷ್ಟೆಲ್ಲ ಮಹಿಳಾ ಕುಸ್ತಿಪಟುಗಳ ಮ್ಯಾಗೆ ಲೈಂಗಿಕ ದೌರ್ಜನ್ಯ ನಡೆಸ್ಯಾನಲ್ಲ, ಅವನ ರಕ್ಷಣೆಗೂ ವಿದೇಶಿ ನಿಧಿ ಹರಿದುಬರತೈತಾ ಅಥವಾ ಇಲ್ಲಿ ಮಂದಿನೇ ಅವನ ರಕ್ಷಣೆ ಮಾಡಾಕೆ ಹತ್ಯಾರಂತಾ? ಅಷ್ಟ್ ಮಂದಿ ಮಹಿಳಾ ಕುಸ್ತಿಪಟುಗಳು ಕಣ್ಣೀರು ಹಾಕಿದ್ರೂ ಇನ್ನಾ ಅವನನ್ನ ಬಂಧಿಸಿಲ್ಲ'.

'ಆತೇಳು... ಮುಂದಿನ ಒಲಿಂಪಿಕ್ಸ್‌ಗೆ ನೀನೇ ದೇಶಪ್ರೇಮದಿಂದ ಕುಸ್ತಿ ಆಡಿ ಪದಕ ಗೆಲ್ಲಪ್ಪಾ ಅಂತ ಅವನನ್ನೇ ಕಳಿಸೂಣು' ಎಂದು ಬೆಕ್ಕಣ್ಣ ಹುಳ್ಳಗೆ ನಕ್ಕಿತು!

ಸಂಗತ

ಗಿಡ ನೆಡಲು ಇರಲಿ ವೈಜ್ಞಾನಿಕ ತಳಹದಿ

ಖಾಲಿ ಜಾಗ ಕಂಡಲ್ಲೆಲ್ಲಾ ಗಿಡ ನೆಡಲು ಹೋಗುವುದು ಅವಿವೇಕದ ನಡೆಯಾಗುತ್ತದೆ

• ನಾಗರಾಜ ಕೂವೆ

ಚಾರ್ಮಾಡಿ ಘಾಟಿಯ ಮೂಲಕ ಕೊಟ್ಟಿಗೆಹಾರದ ಕಡೆಗೆ ಒಮ್ಮೆ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದೆ. ಪ್ರಯಾಣದಲ್ಲಿ ಜೊತೆಯಾದ ವ್ಯಕ್ತಿಯೊಬ್ಬರೊಡನೆ ಪರಿಸರ, ಕೃಷಿಯ ಬಗೆಗೆ ಮಾತನಾಡುತ್ತಾ ಬರುತ್ತಿದ್ದೆ. ಘಟ್ಟ ಏರುತ್ತಿದ್ದಂತೆ, ದಾರಿಯಲ್ಲಿ ಬೋಳುಗುಡ್ಡದಂತೆ ಕಾಣುವ ಶೋಲಾ ಹುಲ್ಲುಗಾವಲನ್ನು ನೋಡಿದ ಅವರು 'ಇಲ್ಲಿನವರಿಗೆ ಬುದ್ಧಿ ಇಲ್ಲ ಕಣ್ರೀ. ಇಷ್ಟೊಂದು ಜಾಗ ಖಾಲಿ ಬಿಟ್ಟಿದ್ದಾರಲ್ಲ, ಇಲ್ಲೆಲ್ಲಾ ಗಿಡ ನೆಟ್ಟು ಹಸಿರು ಜಾಸ್ತಿ ಮಾಡಬೇಕು' ಎಂದು ಹೇಳಿದರು. ಅವರ ಮಾತನ್ನು ಕೇಳಿ ನನಗೆ ದಿಗಿಲಾಯಿತು. ಆದರೆ ಇಂತಹ ಅಭಿಪ್ರಾಯವೇ ಸಮಾಜದ ಹೆಚ್ಚಿನ ಜನರಲ್ಲಿ ಇರುವುದು ದುರಂತ. ಪರಿಸರ ಸಂರಕ್ಷಣೆ ಎಂದರೆ ಮರ ಬೆಳೆಸುವುದು ಎಂಬ ಸೀಮಿತ ಪರಿಕಲ್ಪನೆ ನಮ್ಮಲ್ಲಿ ಇದೆ.

ಪರಿಸರ ನಾಶ ತಡೆಗೆ ಸುಲಭವಾದ ಪರಿಹಾರವೆಂದರೆ ಗಿಡ ನೆಡುವುದು ಎಂಬುದು ಹೆಚ್ಚಿನವರ ಅಭಿಪ್ರಾಯ. ನಿಸರ್ಗ ರಕ್ಷಣೆಗೆ ಸುಲಭವಾದ, ಆಕರ್ಷಕವಾದ ಮತ್ತು ಒಮ್ಮತದ ದೃಷ್ಟಿಕೋನವಿದು. 'ಮರ ಕಡಿಯಬೇಡಿ' ಎಂದಾಗ ಹುಟ್ಟಿಕೊಳ್ಳುವ ವಿವಾದ, ಅಭಿವೃದ್ಧಿ ವಿರೋಧಿ ಮತ್ತು ಪರಿಸರವಾದಿ ಎಂಬ ಹಣೆಪಟ್ಟಿ ಯಾವುದೂ ಗಿಡ ನೆಡುವ ಕಾರ್ಯಕ್ರಮಕ್ಕೆ ಅಡ್ಡಿಯಾಗುವುದಿಲ್ಲ. ಆದರೆ ಈ ಕೆಲಸ ಒಳ್ಳೆಯ ಆಶಯಗಳನ್ನು ಹೊಂದಿದ್ದರೂ ಅದು ತನ್ನದೇ ಆದ ಲೋಪದೋಷಗಳನ್ನೂ ಒಳಗೊಂಡಿದೆ.

ಹುಲ್ಲುಗಾವಲೆಂದು ಕರೆಯುವ ಈ ಬೋಳುಗುಡ್ಡಗಳು ಮತ್ತು ಎರಡು ಬೆಟ್ಟಗಳು ಸೇರುವ ಕಣಿವೆಯಲ್ಲಿರುವ ಶೋಲಾ ಕಾಡು ಇದ್ದಲ್ಲಿ ಮಾತ್ರ ನದಿ ಮೂಲಗಳು ಉಳಿಯುತ್ತವೆ. ಮಳೆಗಾಲದಲ್ಲಿ ಬೀಳುವ ಮಳೆಯ ನೀರನ್ನು ಈ ಬೋಳುಗುಡ್ಡಗಳು ಹಿಡಿದಿಟ್ಟುಕೊಂಡು, ಮಳೆ ಕಡಿಮೆಯಾದಂತೆ ಕೆಳಗಿನ ಕಾಡು ಮತ್ತು ತೊರೆಗಳಿಗೆ ಹರಿಸುತ್ತಾ ಅವು ನಿರಂತರ ಜೀವಂತವಾಗಿ ಇರುವಂತೆ ನೋಡಿಕೊಳ್ಳುತ್ತವೆ.

ಪರಿಸರ ಎಂದರೆ ಗಿಡ, ಮರ ಎಂಬ ಸೀಮಿತ ದೃಷ್ಟಿಕೋನ ಹೊಂದಿರುವ ನಾವು, ಹುಲ್ಲುಗಾವಲು ಮತ್ತು ಹೆಚ್ಚು ಮರಗಳಿಲ್ಲದ ಗುಡ್ಡಗಳಲ್ಲಿ ಏನೂ ಇಲ್ಲ ಎಂದುಕೊಂಡಿದ್ದೇವೆ. ಇಂತಹ ಪರಿಸರ ವ್ಯವಸ್ಥೆಯಲ್ಲಿ ಮಾತ್ರ ಬದುಕುವ ಸಸ್ಯಗಳು, ಕ್ರಿಮಿಕೀಟಗಳು, ಪಕ್ಷಿಗಳು, ಸರೀಸೃಪಗಳು, ಸಸ್ತನಿಗಳಿವೆ. ಅಂತಹ ಪ್ರದೇಶಗಳ ಮೂಲ ಸ್ವರೂಪ ಬದಲಾಯಿಸಿದರೆ ಆ ವಿಶಿಷ್ಟ ಜೀವಿಗಳು ಅಲ್ಲಿಂದ ಕಣ್ಮರೆಯಾಗುತ್ತವೆ. ಇದಕ್ಕೆ ಅತ್ಯುತ್ತಮ ಉದಾಹರಣೆ, ಅದೇ ಪಶ್ಚಿಮ ಘಟ್ಟದ ಶೋಲಾ ಹುಲ್ಲುಗಾವಲುಗಳಲ್ಲಿ ಹಸಿರೀಕರಣದ ಹೆಸರಿನಲ್ಲಿ ಅರಣ್ಯ ಇಲಾಖೆ ಅಕೇಶಿಯಾ ನೆಟ್ಟು, ಆ ನೆಲ ಇಂದು ಬರಡಾಗಿರುವುದು.

ಮಳೆಗಾಲ ಪ್ರಾರಂಭವಾಗಿದೆ. ಗಿಡ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲು ಹಲವರು ಯೋಜನೆ ರೂಪಿಸುತ್ತಿದ್ದಾರೆ. ನಮ್ಮ ಅಭಿವೃದ್ಧಿ ಮಾದರಿಗಳು ಪಟ್ಟಣಗಳಲ್ಲಿರುವ ಎಲ್ಲಾ ವೈವಿಧ್ಯಗಳನ್ನು ನಾಶ ಪಡಿಸಿರುವುದರಿಂದ ಅಲ್ಲಿ ಇಂದು ಗಿಡ ನೆಡಬೇಕಾದ ಅವಶ್ಯಕತೆ ಇದೆ. ಪಟ್ಟಣದಲ್ಲಿ ಹಸಿರು ಹೆಚ್ಚಿಸಬೇಕಾದುದು ಅಗತ್ಯವಾಗಿ ಆಗಬೇಕಾದ ಕೆಲಸ. ಆದರೆ ಯಾವುದೋ ಕಾಡಿಗೋ ಗುಡ್ಡಕ್ಕೋ ಹೋಗಿ, ಪರಿಸರ ಸಂರಕ್ಷಣೆಯ ಉತ್ಸುಕತೆಯಿಂದ ಬೀಜದುಂಡೆ ಎಸೆಯುವುದು ಪರಿಸರದ ಮೇಲೆ ದುಷ್ಪರಿಣಾಮ ಬೀರುವುದೇ ಹೆಚ್ಚು ಎಂಬ ಅರಿವು ಹೆಚ್ಚಿನವರಿಗಿಲ್ಲ. ಅವರು ಎಸೆದ ಬೀಜದುಂಡೆಯಿಂದ ಗಿಡಗಳು ಹುಟ್ಟುತ್ತವೋ ಇಲ್ಲವೋ ಅದು ಬೇರೆಯದೇ ಚರ್ಚೆ. ಆದರೆ ಬೀಜದುಂಡೆಗೆ ಬಳಸುವ ಮಣ್ಣಿನಲ್ಲಿ ಪಾರ್ಥೇನಿಯಂ, ಲಂಟಾನಾದಂತಹ ವಿದೇಶಿ ಕಳೆಗಳ ಬೀಜಗಳಿರಬಹುದು. ನಮ್ಮ ಪರಿಸರ ವ್ಯವಸ್ಥೆಯ ಆರೋಗ್ಯಕ್ಕೆ ಮಾರಕವಾದ ಅಂತಹವನ್ನು ನಾವೇ ಪಸರಿಸಿದಂತೆ ಆಗುತ್ತದೆ. ಇನ್ನು ಗಿಡ ನೆಡುವುದೆಂದರೆ ಅರಳಿ, ಆಲ, ಮತ್ತಿ, ಬೇವು, ಹೊಂಗೆ ಎಂಬ ಭಾವನೆಯಿದೆ. ಅವು ಎಲ್ಲಾ ಕಡೆಗೂ ಸ್ಥಳೀಯ ಜಾತಿಯ ಗಿಡಗಳಾಗಿರಲು ಸಾಧ್ಯವಿಲ್ಲ.

ಮೊದಲನೆಯದಾಗಿ, ವನಮಹೋತ್ಸವ ಕಾರ್ಯಕ್ರಮ ಆಯೋಜಿಸುವವರಿಗೆ ಪರಿಸರ ಸೂಕ್ಷ್ಮತೆ, ವೈಜ್ಞಾನಿಕ ಪ್ರಜ್ಞೆಯ ತಿಳಿವು ಇರಬೇಕು. ಗಿಡ ನೆಡುವಾಗ ಆ ಸ್ಥಳದ ಮಣ್ಣು, ನೀರು, ಗಾಳಿ, ಮಳೆ, ಹವಾಗುಣದ ಅರಿವು ಇರಲೇಬೇಕು. ಜೊತೆಗೆ ನೆಡುವ ಗಿಡಗಳು ಸ್ಥಳೀಯ ಜಾತಿಯವಾಗಿರಬೇಕು. ಹವಾಗುಣ ಬದಲಾವಣೆಯನ್ನು ಎದುರಿಸಿ ಬೆಳೆಯುವ ಶಕ್ತಿ ಸ್ಥಳೀಯ ಜಾತಿಯ ಸಸ್ಯಗಳಿಗೆ ಹೆಚ್ಚಾಗಿರುತ್ತದೆ ಎಂಬ ಅರಿವು ಕೂಡಾ ಅತಿ ಅಗತ್ಯ.



ಅಕೇಶಿಯಾ, ನೀಲಗಿರಿ, ಕ್ಯಾಸುರಿನದಂತಹ ಏಕಜಾತಿಯ ನೆಡುತೋಪುಗಳನ್ನು ನೆಟ್ಟ ಪ್ರದೇಶ ಮತ್ತು ವಿಪರೀತ ಮನುಷ್ಯ ಹಸ್ತಕ್ಷೇಪದಿಂದ ಮಣ್ಣಿನ ಸಾರವೇ ನಾಶವಾಗಿರುವಂತಹ ಪ್ರದೇಶಗಳಲ್ಲಿ ಪುನಃ ಪರಿಸರ ವ್ಯವಸ್ಥೆ ರೂಪುಗೊಳ್ಳಲು ಗಿಡ ನೆಡುವ, ನೀರು ಹಾಕುವ, ರಕ್ಷಣೆ ಒದಗಿಸುವಂತಹ ಅವಶ್ಯಕತೆ ಇರುತ್ತದೆ. ಅದನ್ನು ಬಿಟ್ಟು ಉಳಿದ ಜಾಗಗಳಲ್ಲಿ ಮನುಷ್ಯ ಹಸ್ತಕ್ಷೇಪ ಮಾಡದಿರುವುದೇ ನಾವಲ್ಲಿಗೆ ಮಾಡಬಹುದಾದ ದೊಡ್ಡ ಉಪಕಾರ. ಅಷ್ಟರಮಟ್ಟಿಗೆ ಪರಿಸರದ ಸಂಕೀರ್ಣ ವ್ಯವಸ್ಥೆಯನ್ನು ಕೆಡಿಸುವುದನ್ನು ನಾವು ಸಣ್ಣ ಮಟ್ಟಿಗಾದರೂ ತಡೆಯಬಹುದು.

'ಮನುಷ್ಯ ನೆಟ್ಟು ಬೆಳೆಸಿದ ಕಾಡಿಗಿಂತ ಸಹಜ ಹುಲ್ಲುಗಾವಲುಗಳು ಹೆಚ್ಚು ಕಾರ್ಬನ್ ಹೀರಿಕೊಳ್ಳುತ್ತವೆ' ಎಂದು ವೈಜ್ಞಾನಿಕ ಸಂಶೋಧನೆಯೊಂದು ಅಭಿಪ್ರಾಯ ಪಡುತ್ತದೆ. ಸ್ಥಳೀಯ ಮಣ್ಣಿನ ಗುಣಮಟ್ಟ, ನೀರಿನ ಲಭ್ಯತೆ, ಹವಾಗುಣದಂತಹ ಸಂಗತಿಗಳ ಆಧಾರದ ಮೇಲೆ ಪರಿಸರ ವ್ಯವಸ್ಥೆ ಪುನರ್ಜನ್ಮ ಪಡೆಯಲು ಅಲ್ಲಿ ಮನುಷ್ಯ ಹಸ್ತಕ್ಷೇಪದ ಅವಶ್ಯಕತೆ ಇದೆಯೋ ಇಲ್ಲವೋ ಎಂದು ನಿರ್ಧರಿಸಬೇಕಾಗುತ್ತದೆ. ಅದನ್ನು ಬಿಟ್ಟು ಖಾಲಿ ಜಾಗ ಕಂಡಲ್ಲೆಲ್ಲಾ ಗಿಡ ನೆಡಲು ಹೋಗುವುದು ಅವಿವೇಕವಾಗುತ್ತದೆ.

ಗಿಡ ನೆಡುವುದು ಸಂಪೂರ್ಣ ತಪ್ಪು ಎಂದು ಹೇಳಲಾಗದು. ಆದರೆ ಸ್ಥಳೀಯ ಪರಿಸರ ವ್ಯವಸ್ಥೆಯ ಅರಿವಿಲ್ಲದೆ ಪರಿಸರ ಕಾಳಜಿಯ ಹೆಸರಿನಲ್ಲಿ ಮತ್ತೊಂದು ರೀತಿಯ ಅವಘಡ ಜರುಗದಂತೆ ಎಚ್ಚರ ವಹಿಸಬೇಕು. ಗಿಡ ನೆಡುವ ಚಟುವಟಿಕೆಯಲ್ಲಿ ವೈಜ್ಞಾನಿಕ ವಿಧಾನ ಅನುಸರಿಸುವುದು, ತಜ್ಞರ ಸಲಹೆ ಪಡೆಯುವುದು ವಿವೇಕದ ನಡೆಯಾಗುತ್ತದೆ.

ವಾಚಕರ ವಾಣಿ

ಎಲ್ಲ ಅಂಗನವಾಡಿಗಳಿಗೆ ಫ್ರಿಜ್ ವಿತರಣೆಯಾಗಲಿ

ಸಂಡೂರಿನ ಶಾಸಕ ಈ.ತುಕಾರಾಂ ಅವರು ಇತ್ತೀಚೆಗೆ ತಮ್ಮ ಕ್ಷೇತ್ರದ ಧರ್ಮಾಪುರ ಎಂಬ ಹಳ್ಳಿಯ ಅಂಗನವಾಡಿ ಕೇಂದ್ರದ ಉದ್ಘಾಟನೆಗೆ ಹೋದಾಗ, ಸೊಪ್ಪು, ತರಕಾರಿ ನೆಲದ ಮೇಲೆ ಇದ್ದದ್ದನ್ನು ಕಂಡು ವಿಚಾರಿಸಿದ್ದಾರೆ. ತರಕಾರಿ, ಸೊಪ್ಪು, ಮೊಟ್ಟೆಯಂತಹ ಅಗತ್ಯ ಪೌಷ್ಟಿಕ ಆಹಾರವನ್ನು ಮಕ್ಕಳಿಗಾಗಿ ಸಂರಕ್ಷಿಸಿ ಇಡಲು ಫ್ರಿಜ್‌ನ ಅಗತ್ಯವಿದೆ ಎಂದು ಅರಿತಿದ್ದಾರೆ. ಕೂಡಲೇ ಜಿಲ್ಲಾ ಖನಿಜ ನಿಧಿಯಿಂದ (ಡಿಎಂಎಫ್) ₹ 40 ಲಕ್ಷ ವೆಚ್ಚದಲ್ಲಿ ಸಂಡೂರು ಕ್ಷೇತ್ರದ 270 ಅಂಗನವಾಡಿ ಕೇಂದ್ರಗಳಿಗೆ ಫ್ರಿಜ್ ವಿತರಿಸಿದ್ದಾರೆ. ಇದರಿಂದ ಸಂಡೂರು ಭಾಗದ ಅಂಗನವಾಡಿಯ ಮಕ್ಕಳಿಗೆ ಬಹಳ ಅನುಕೂಲವಾಗಿದೆ.

ಇದು ಅಂಗನವಾಡಿಗಳಿಗೆ ಬಹಳ ಮುಖ್ಯವಾದ ಪ್ರಾಥಮಿಕ ಅಗತ್ಯವಾಗಿತ್ತು. ರಾಜ್ಯ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಸಂಡೂರು ಕ್ಷೇತ್ರವನ್ನು ಮಾದರಿಯಾಗಿ ಇಟ್ಟುಕೊಂಡು, ಇಡೀ ರಾಜ್ಯದ ಅಂಗನವಾಡಿ ಕೇಂದ್ರಗಳಿಗೆ ಆಹಾರ ಸಂರಕ್ಷಣೆಯ ದೃಷ್ಟಿಯಿಂದ ಫ್ರಿಜ್ ವಿತರಿಸುವ ಅಗತ್ಯವಿದೆ.

ಡಾ. ಅರುಣ್ ಜೋಳದಕೂಡ್ಲಿಗಿ, ಕಲಬುರಗಿ

ಎಲ್ಲರಿಗೂ ಸೌಲಭ್ಯ: ಸರಳೀಕೃತ ಉಪಶಮನವಷ್ಟೆ

ಗ್ಯಾರಂಟಿಗಳ ಬಗೆಗಿನ ಪತ್ರಿಕಾಗೋಷ್ಠಿ, ಇದಕ್ಕೆ ಬಂದ ಪ್ರತಿಕ್ರಿಯೆಗಳು, ನಂತರದ ಮಾರ್ಗಸೂಚಿ, ನಿಯಮಗಳು ಇವನ್ನೆಲ್ಲ ಪತ್ರಿಕೆಯಲ್ಲಿ ಓದಿ ಗೊಂದಲಗೊಂಡಿದ್ದೇನೆ. ಕಲ್ಯಾಣ ರಾಜ್ಯ (ವೆಲ್‌ಫೇರ್ ಸ್ಟೇಟ್) ಕಲ್ಪನೆ ಎಂಟು ದಶಕಗಳಿಗೂ ಹಿಂದಿನದು. ಪಾಪ್ಯುಲಿಸಂ ಅದಕ್ಕೂ ಐದು ದಶಕ ಹಿಂದಿನದು. ಉಗಮ- ಬ್ರಿಟನ್, ಅಮೆರಿಕ ಅನುಕ್ರಮವಾಗಿ. ನಾಗರಿಕರ ಬದುಕಿನಲ್ಲಿ ಸ್ಟೇಟ್‌ನ (ಸರ್ಕಾರದ) ಪಾತ್ರ ಕಡಿಮೆಯಾಗಬೇಕು ಎಂಬ ಹೇಳಿಕೆಗಳ ನಡುವೆ ಗ್ಯಾರಂಟಿಗಳು, ತತ್ಫಲವಾಗಿ ಉಂಟಾಗುವ ತಾರತಮ್ಯ ಅತಾರ್ಕಿಕವಲ್ಲವೇ?

ಪ್ರಣಾಳಿಕೆ, ಪ್ರಚಾರ ಭಾಷಣಗಳಲ್ಲಿ 'ಷರತ್ತುಗಳು ಅನ್ವಯ' ಎಂದು ಮೆಲುಸ್ವರದಲ್ಲೂ ಹೇಳದಿರುವುದು ತಂತ್ರಗಾರಿಕೆ. ಈಗ ಸಂಪುಟ ರಚನೆ, ಚರ್ಚೆ, ತೀರ್ಮಾನಗಳ ನಂತರವೂ ಘೋಷಣೆಯಾದ ಕಾರ್ಯಕ್ರಮಗಳಿಗೆ ಹಣಕಾಸಿನ ವ್ಯವಸ್ಥೆ ಹೇಗೆ ಮಾಡಲಾಗಿದೆ ಎಂದು ಹೇಳದಿರುವುದು ಸರಿಯಲ್ಲ. ಸರ್ಕಾರವು ಶಾಸನಸಭೆಗೆ ಮಾತ್ರ ಉತ್ತರದಾಯಿಯಲ್ಲ. ಸದನ ಸಮಾವೇಶಗೊಂಡು ಪರಿವರ್ತಿತ ಬಜೆಟ್ ಮಂಡಿಸುವ ಮುನ್ನವೇ ಅಂದಾಜು ವೆಚ್ಚದ ವಿವರವನ್ನು ಸಾರ್ವಜನಿಕರಿಗೆ ಕೋಟಿ ರೂಪಾಯಿಗಳಲ್ಲಿ ಸ್ಕೀಮ್‌ವಾರು ತಿಳಿಸಬೇಕು. ಅಗತ್ಯಬಿದ್ದರೆ ತೆರಿಗೆ ಪಾವತಿದಾರರು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಬೇಕು. ಈಗ ಭಾಗಶಃ ಅನುಷ್ಠಾನಗೊಂಡಿರುವ ಯೋಜನೆಗಳ ಬಗೆಗೆ ಈ ಆರ್ಥಿಕ ವರ್ಷದಲ್ಲಿ ಏನು ಮಾಡಲಾಗುವುದು ಎಂಬುದೂ ಮುಖ್ಯ. ನುಡಿದಂತೆ ನಡೆದಿದ್ದೇವೆ ಎಂದು ಮುಂಬರುವ ಲೋಕಸಭಾ ಚುನಾವಣಾ ಪ್ರಚಾರದ ವೇಳೆ ಹೇಳಿಕೊಳ್ಳುವುದರಷ್ಟೇ ಆ ವೇಳೆಗೆ ರಾಜ್ಯದ ಆರ್ಥಿಕ ಸ್ಥಿತಿ ಏನಾಗಿರುತ್ತದೆ ಎನ್ನುವುದೂ ಮುಖ್ಯವಲ್ಲವೇ? ಗ್ಯಾರಂಟಿಗಳಲ್ಲಿ ಜನರಿಗೆ ಅತ್ಯವಶ್ಯ, ಅನಿವಾರ್ಯವಾದವು ಎಷ್ಟು ಎಂದೂ ವಿಶ್ಲೇಷಿಸಬೇಕಾಗಿದೆ. ಸಮಸ್ಯೆಗಳು ತಾತ್ಕಾಲಿಕವಾಗಿ ಪರಿಹಾರವಾಗಬೇಕಾದರೂ ಪಕ್ಕಾ ಆರ್ಥಿಕ ಬೆನ್ನೆಲುಬು ಅಗತ್ಯ. ಗುರುತಿಸುವುದು ಕಷ್ಟ ಎಂದು ಎಲ್ಲರಿಗೂ ಸೌಲಭ್ಯ ಹಂಚುವುದು ಸರಳೀಕೃತ ಉಪಶಮನವಷ್ಟೆ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಮಾನವೀಯತೆಯಿಂದ ಮಾದರಿಯಾದ ಸ್ಥಳೀಯರು

ಒಡಿಶಾ ರೈಲು ದುರಂತವು ಅತ್ಯಂತ ನೋವಿನ ಸಂಗತಿ. ಆದರೆ, ದುರಂತಕ್ಕೆ ಸ್ಥಳೀಯರು ಸ್ಪಂದಿಸುತ್ತಿರುವ ರೀತಿ ಸಮಾಧಾನಕರ. ತೀವ್ರವಾಗಿ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿರುವವರ ನೆರವಿಗೆ ಧಾವಿಸಿರುವ 2,000ಕ್ಕೂ ಹೆಚ್ಚು ಮಂದಿ, ಸ್ವಯಂಪ್ರೇರಿತರಾಗಿ ರಕ್ತದಾನಕ್ಕೆ ಮುಂದೆ ಬಂದಿರುವುದು (ಪ್ರ.ವಾ., ಜೂನ್ 4) ಅತ್ಯಂತ ಸಮಾಧಾನಕರ ಸಂಗತಿ. ಮಾನವೀಯತೆ ಮೆರೆದಿರುವ ರಕ್ತದಾನಿಗಳು ಅಭಿನಂದನಾರ್ಹರು.

ಶಾಂತಕುಮಾರ್, ಸರ್ಜಾಪುರ

ಇಂತಹ ಕುತ್ಸಿತ ನಿಲುವು ಬದಲಾಗುವುದೆಂದು?

ಮಂತ್ರಿಮಂಡಲ ರಚನೆಯಾಗಿ ಸುಮಾರು ಹತ್ತು ದಿನಗಳ ಒಳಗೆ, ಚುನಾವಣೆಯ ಸಂದರ್ಭದಲ್ಲಿ ಜನರಿಗೆ ಕೊಟ್ಟ ಐದು ಸವಾಲಿನ ಹಾಗೂ ಜಟಿಲ ಆಶ್ವಾಸನೆಗಳಿಗೆ ಒಂದು ವಾಸ್ತವಿಕ ರೂಪು ಕೊಟ್ಟು, ಅವುಗಳ ಅನುಷ್ಠಾನಕ್ಕೆ ಕಾಲಮಿತಿಯನ್ನೂ ಘೋಷಿಸಿರುವುದು ನನಗೆ (ಹಾಗೂ ನನ್ನಂತಹ ಸಾವಿರಾರು ಜನರಿಗೆ) ಆಶ್ಚರ್ಯವನ್ನುಂಟು ಮಾಡಿದೆ, ಸಂತೋಷವನ್ನು ಕೊಟ್ಟಿದೆ. ಅದರಲ್ಲಿಯೂ ಉಚಿತ ವಿದ್ಯುತ್ ಕೊಡುಗೆಗೆ ಹನ್ನೆರಡು ತಿಂಗಳ ಸರಾಸರಿಯನ್ನು ಆಧಾರವಾಗಿ ಇಟ್ಟುಕೊಂಡುದು ತುಂಬಾ ವಿವೇಕದ ತೀರ್ಮಾನ (ಬಹುಶಃ, ನಿರುದ್ಯೋಗಿಗಳನ್ನು ಗುರುತಿಸುವ ಬಗ್ಗೆ ಇನ್ನೂ ಹೆಚ್ಚಿನ ಚಿಂತನೆ ಅವಶ್ಯಕವಾಗಿತ್ತು ಎಂದು ಕಾಣುತ್ತದೆ). ಒಟ್ಟಿನಲ್ಲಿ, ಇದೊಂದು ಎಲ್ಲ ರಾಜ್ಯಗಳಿಗೂ ಮಾದರಿಯಾಗುವ ಸಾಧನೆ.

ಆಶ್ವಾಸನೆಗಳ ಅನುಷ್ಠಾನದ ಸ್ವರೂಪವನ್ನು ವಿರೋಧ ಪಕ್ಷಗಳು ಟೀಕಿಸುತ್ತಿರುವುದು ನಿರೀಕ್ಷಿತವೇ. ಈ ಆಶ್ವಾಸನೆಗಳ ಬಗ್ಗೆ ಪ್ರೇಕ್ಷಕರಿಗೂ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅವಕಾಶವಿದ್ದ ಚರ್ಚೆಯನ್ನು ಒಂದೆರಡು ಟಿ.ವಿ. ವಾಹಿನಿಗಳಲ್ಲಿ ನಾನು ನೋಡಿದೆ. ಹೆಚ್ಚಿನ ಪ್ರೇಕ್ಷಕರು ಅನುಷ್ಠಾನದ ಸ್ವರೂಪವನ್ನು ತುಂಬಾ ಪ್ರಬುದ್ಧತೆಯಿಂದ ವಿಮರ್ಶಿಸಿದರು. ಆದರೆ ಆ ಚರ್ಚೆಗಳಲ್ಲಿ ಒಂದು ಅಂಶವು ತುಂಬಾ ಕುತೂಹಲಕಾರಿಯಾಗಿ ಕಂಡಿತು. ಚರ್ಚೆಯಲ್ಲಿ ಭಾಗವಹಿಸಿದ್ದವರಲ್ಲಿ ಅನೇಕರು ಎಲ್ಲ ಮಹಿಳೆಯರಿಗೂ ಉಚಿತ ಬಸ್ ಪ್ರಯಾಣ ಸೌಕರ್ಯದ ಬಗ್ಗೆ ತುಂಬಾ ಅಸಮಾಧಾನ ವ್ಯಕ್ತಪಡಿಸಿದರು: 'ಮನೆಯಲ್ಲಿದ್ದು ಕುಟುಂಬವನ್ನು ನೋಡಿಕೊಳ್ಳಬೇಕಾದ ಗೃಹಿಣಿಯರು ಇನ್ನು ಮೇಲೆ ಪ್ರತಿದಿನವೂ ಮನೆಬಿಟ್ಟು ಆ ಊರು ಈ ಊರು ಎಂದು ಅಲೆಯುತ್ತಾರೆ. ಪರಿಣಾಮ, ನೋಡಿಕೊಳ್ಳುವವರಿಲ್ಲದೆ ಮಕ್ಕಳು ಹಾಗೂ ವಯಸ್ಕರು ನರಳುತ್ತಾರೆ. ಗೃಹಲಕ್ಷ್ಮಿ ಯೋಜನೆಯು ಅತ್ತೆ, ಸೊಸೆಯರಲ್ಲಿ ಒಡಕನ್ನುಂಟುಮಾಡಿ, ಮನೆಯನ್ನು ಒಡೆಯುತ್ತದೆ, ಶಿಕ್ಷಣ ವ್ಯವಸ್ಥೆಯನ್ನು ಕುಲಗೆಡಿಸುತ್ತದೆ' ಎಂಬಂತಹ ಮಾತುಗಳನ್ನು ಆಡಿದರು. ಅಂದರೆ, ಇವರ ದೃಷ್ಟಿಯಲ್ಲಿ ಸ್ತ್ರೀಯರು ಜವಾಬ್ದಾರಿ ಇಲ್ಲದವರು, ಅವಕಾಶ ಸಿಕ್ಕಿದ ಕೂಡಲೇ ಮಕ್ಕಳಂತೆ ಕಂಡಕಂಡಲ್ಲಿ ಅಲೆಯುವವರು, ಹಣಕ್ಕಾಗಿ ಕಿತ್ತಾಡುವವರು ಎಂದೇ? ಸ್ತ್ರೀಯರನ್ನು ಕುರಿತ ಇಂತಹ ಕುತ್ಸಿತ ನಿಲುವು ಎಂದು ಬದಲಾಗುತ್ತದೆ? ಈ ದಿನಗಳಲ್ಲಿ, ಸೇನೆಯಲ್ಲಿ ಅಧಿಕಾರಿಗಳಾಗಿ, ಕೇಂದ್ರ, ರಾಜ್ಯ ಮಂತ್ರಿಮಂಡಲಗಳಲ್ಲಿ ಸಚಿವೆಯರಾಗಿ, ನ್ಯಾಯಮೂರ್ತಿಗಳಾಗಿ, ಉದ್ಯಮಿಗಳಾಗಿ, ವಿದ್ವಾಂಸರಾಗಿ– ಒಟ್ಟಿನಲ್ಲಿ ಸಮಾಜದ ಎಲ್ಲ ಕ್ಷೇತ್ರಗಳಲ್ಲಿಯೂ ಉನ್ನತ ಸ್ಥಾನಗಳಲ್ಲಿ ಮಹಿಳೆಯರಿದ್ದಾರೆ. ಈಗಲೂ 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂದೇ ನಾವು ಜಪ ಮಾಡುತ್ತಿರಬೇಕೇ?

ಸಿ.ಎನ್.ರಾಮಚಂದ್ರನ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಪ್ಲಾಸ್ಟಿಕ್ ಮಾಲಿನ್ಯವನ್ನು ತಡೆಯೋಣ



'ಪ್ಲಾಸ್ಟಿಕ್ ಮಾಲಿನ್ಯವನ್ನು ತಡೆಯಿರಿ' ಎಂಬುದು ಈ ಸಾಲಿನ ವಿಶ್ವ ಪರಿಸರ ದಿನಾಚರಣೆಯ ವಿಷಯ. ಏಕಬಳಕೆಯ ಪ್ಲಾಸ್ಟಿಕ್‌ಗಳನ್ನು ದೇಶದಲ್ಲಿ ಈಗಾಗಲೇ ನಿಷೇಧ ಮಾಡಲಾಗಿದೆ. ಆದರೆ, ನಿಷೇಧ ಪರಿಣಾಮಕಾರಿ ಆಗಿಲ್ಲ. ಏಕಬಳಕೆ ಪ್ಲಾಸ್ಟಿಕ್‌ಗಳು ಈಗಲೂ ಲಭ್ಯ ಇವೆ. ಪ್ಲಾಸ್ಟಿಕ್ ಸರ್ವಾಂತರ್ಯಾಮಿ ಎಂಬುದು ನಮಗೆಲ್ಲ ತಿಳಿದಿದೆ. ಅದರಿಂದ ಆಗುವ ಅಪಾಯದ ಅರಿವೂ ಇದೆ. ಹಾಗಿದ್ದರೂ ಪ್ಲಾಸ್ಟಿಕ್ ಬಳಕೆ ನಿಲ್ಲಿಸಲು ನಾವು ಸಿದ್ಧವಿಲ್ಲ. ಪರಿಸರ ದಿನದ ಅಂಗವಾಗಿ, ಪ್ಲಾಸ್ಟಿಕ್ ಕುರಿತ ಜಾಗೃತಿಯ ಲೇಖನ

• ಸುನಿತಾ ನಾರಾಯಣ್



ಹಿಂದೂ ಧರ್ಮದಲ್ಲಿ ಸೃಷ್ಟಿಕರ್ತ ಬ್ರಹ್ಮನಿಗಿಂತ, ಲಯದ ಹೊಣೆ ಹೊತ್ತ ಶಿವನಿಗೆ ಹೆಚ್ಚಿನ ಪ್ರಾಮುಖ್ಯತೆ ಇರಲು ಹಲವು ಕಾರಣಗಳಿವೆ. ದೀರ್ಘಕಾಲ ಬಾಳಿಕೆಯ ಮತ್ತು ಸುಲಭವಾಗಿ ನಾಶವಾಗದ ವಸ್ತುಗಳೆಲ್ಲವೂ ಅತ್ಯದ್ಭುತ ಎಂದು ಪರಿಗಣಿಸಿದ್ದು, ನಾವು ಮಾಡಿದ ದೊಡ್ಡ ತಪ್ಪು ಎಂಬುದನ್ನು ಈ ಹಿಂದಿನ 50 ವರ್ಷಗಳಲ್ಲಿ ನಾವು ಕಲಿತಿದ್ದೇವೆ. ಡಿಡಿಟಿಯನ್ನೇ ಉದಾಹರಣೆಗೆ ತೆಗೆದುಕೊಳ್ಳಿ. ಈ ಕೀಟನಾಶಕವು ಪರಿಸರದಲ್ಲಿ ದೀರ್ಘಕಾಲದವರೆಗೆ ಉಳಿಯುತ್ತದೆ. ಈಗ ಅದು ಪಕ್ಷಿಗಳ ಮೊಟ್ಟೆಗಳು ಮತ್ತು ಮಾನವನ ರಕ್ತವನ್ನೂ ಪ್ರವೇಶಿಸಿದೆ. ನಾಶ ಮಾಡಲು ಆಗದೇ ಇರುವ ಕ್ಲೋರೋಫ್ಲೋರೊಕಾರ್ಬನ್‌ಗಳು ನಮ್ಮ ಓಝೋನ್ ಪದರದಲ್ಲಿ ರಂಧ್ರವನ್ನುಂಟು ಮಾಡಿವೆ. ಇಂಗಾಲದ ಡೈಆಕ್ಸೈಡ್‌ಗಳು ಇನ್ನೂ ವಿನಾಶಕಾರಿ. ನಾವು ಪಳೆಯುಳಿಕೆ ಇಂಧನಗಳನ್ನು ದಹಿಸಿದಾಗ ಉಂಟಾಗುವ ಇಂಗಾಲದ ಡೈಆಕ್ಸೈಡ್ ನಮ್ಮ ವಾತಾವರಣದಲ್ಲಿ 150–200 ವರ್ಷಗಳವರೆಗೆ ಉಳಿಯುತ್ತದೆ. ಅದರ ಪರಿಣಾಮವೇ ವಿಧ್ವಂಸಕಾರಿ ಹವಾಮಾನ ವೈಪರೀತ್ಯ.

'ಪ್ಲಾಸ್ಟಿಕ್ ಮಾಲಿನ್ಯವನ್ನು ತಡೆಯಿರಿ' ಎಂಬುದು ಈ ಸಾಲಿನ ವಿಶ್ವ ಪರಿಸರ ದಿನಾಚರಣೆಯ ವಿಷಯ. ಈ ಸಂದರ್ಭದಲ್ಲಿ ಧರ್ಮ ಮತ್ತು ವಿಜ್ಞಾನದ ಸಮ್ಮಿಲನ ಅತ್ಯಂತ ಮುಖ್ಯವಾದುದು. ಮೇಲೆ ಹೇಳಲಾದಂತಹ 'ಅತ್ಯದ್ಭುತ ವಸ್ತು'ಗಳಲ್ಲಿ ಪ್ಲಾಸ್ಟಿಕ್ ಸಹ ಒಂದು. ನಮ್ಮ ಬದುಕಿನ ಎಲ್ಲಾ ಅಗತ್ಯಗಳಲ್ಲೂ ಇರುವ ಸರ್ವಾಂತರ್ಯಾಮಿ ಪ್ಲಾಸ್ಟಿಕ್. ಅದು ದೀರ್ಘಕಾಲ ಬಾಳಿಕೆ ಬರುತ್ತದೆ ಮತ್ತು ಎಲ್ಲೆಡೆಯೂ, ಅಂದರೆ ನೀರಿನ ಕೊಳವೆಯಿಂದ ಚಿಪ್ಸ್ ಪ್ಯಾಕಿಂಗ್‌ವರೆಗೆ ಅದನ್ನು ಬಳಸಬಹುದು ಎಂಬುದೇ, ಅದರ ಪ್ರಾಮುಖ್ಯವನ್ನು ಹೆಚ್ಚಿಸಿದೆ. ಪ್ಲಾಸ್ಟಿಕ್‌ನ ಈ ಲಕ್ಷಣಗಳೇ, ನಮ್ಮ ಪರಿಸರಕ್ಕೆ ಇಂದು ಮಾರಕವಾಗಿದೆ. ಮನುಷ್ಯನು ಪರಿಸರವನ್ನು ಹಾಳುಗೆಡವುತ್ತಿರುವುದರ ಸಂಕೇತವಾಗಿ ಪ್ಲಾಸ್ಟಿಕ್ ಇದೆ. ಏಕೆಂದರೆ, ಎಲ್ಲಾದರೂ ಪ್ಲಾಸ್ಟಿಕ್ ಕಂಡರೆ ಆ ಸ್ಥಳದಲ್ಲಿ ಮನುಷ್ಯನಿದ್ದಾನೆ ಎಂದು ಸುಲಭವಾಗಿ ಹೇಳಬಹುದು. ಇದಕ್ಕಿಂತಲೂ ದುರ್ಬರವಾದ ಸ್ಥಿತಿಯೆಂದರೆ, ಪ್ಲಾಸ್ಟಿಕ್ ಈಗ ಸಮುದ್ರದಲ್ಲೂ ರಾಶಿರಾಶಿ ಬಿದ್ದಿದೆ. ಅದು ಮೀನಿನ ಮೂಲಕ ನಮ್ಮ ಆಹಾರ ಸರಪಣಿಯನ್ನೂ ಸೇರಿದೆ. ಇದು ನಿಜಕ್ಕೂ ಒಳ್ಳೆಯ ಸುದ್ದಿ ಅಲ್ಲ.

ಹೀಗಾಗಿಯೇ, ಪ್ಲಾಸ್ಟಿಕ್ ಎಂಬ ಉಪದ್ರವವನ್ನು ನಿರ್ವಹಿಸುವಲ್ಲಿ ನಾವು ಏನನ್ನೆಲ್ಲಾ ಮಾಡಲೇಬೇಕು ಎಂಬುದು ಈ ಬಾರಿಯ ವಿಶ್ವ ಪರಿಸರ ದಿನದ ಕೇಂದ್ರ ವಿಷಯವಾಗಿದೆ. ಭಾರತದಲ್ಲಿ ಪ್ಲಾಸ್ಟಿಕ್ ತ್ಯಾಜ್ಯವನ್ನು ನಿರ್ವಹಣೆ ಮತ್ತು ವಿಲೇವಾರಿ ಮಾಡಲು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ಈಚೆಗೆ ಎರಡು ಕಾನೂನುಗಳನ್ನು ಜಾರಿಗೆ ತಂದಿದೆ. ಈ ಕಾನೂನುಗಳು 19 ಸ್ವರೂಪದ ಪ್ಲಾಸ್ಟಿಕ್‌ಗಳನ್ನು 'ಏಕಬಳಕೆಯ ಪ್ಲಾಸ್ಟಿಕ್' ಎಂದು ವರ್ಗೀಕರಿಸಿದೆ. ಮತ್ತು 19 ಸ್ವರೂಪದ ಏಕಬಳಕೆಯ ಪ್ಲಾಸ್ಟಿಕ್‌ಗಳ ತಯಾರಿಕೆ ಮತ್ತು ಬಳಕೆಯನ್ನು ನಿಷೇಧಿಸಿದೆ.

ಇದಕ್ಕಾಗಿ ತಯಾರಕರ ವಿಸ್ತೃತ ಹೊಣೆಗಾರಿಕೆ ನಿಯಮಗಳನ್ನು (ಇಪಿಆರ್) ರೂಪಿಸಲಾಗಿದೆ. ಈ ಇಪಿಆರ್ ನಿಯಮಗಳ ಪ್ರಕಾರ, ಯಾವುದೇ ಕಂಪನಿ ತಾನು ತಯಾರಿಸುವ ಪ್ಲಾಸ್ಟಿಕ್ ತ್ಯಾಜದಷ್ಟೇ ಪ್ಲಾಸ್ಟಿಕ್ ಅನ್ನು ಮರುಬಳಕೆ ಮಾಡಬೇಕು ಇಲ್ಲವೇ ವೈಜ್ಞಾನಿಕವಾಗಿ ಮತ್ತು ಸುರಕ್ಷಿತವಾಗಿ ವಿಲೇವಾರಿ ಮಾಡಬೇಕು.

ಕೆಟ್ಟ ಸುದ್ದಿ ಏನೆಂದರೆ, ದೇಶದಲ್ಲಿ ಉತ್ಪಾದನೆಯಾಗುತ್ತಿರುವ ಎಲ್ಲಾ ಪ್ಲಾಸ್ಟಿಕ್ ತ್ಯಾಜ್ಯವನ್ನು ನಿರ್ವಹಣೆ ಮಾಡುವಲ್ಲಿ ಈ ಕಾನೂನುಗಳು ಪರಿಣಾಮಕಾರಿ ಆಗಿಲ್ಲ. ಏಕಬಳಕೆಯ ಪ್ಲಾಸ್ಟಿಕ್‌ಗಳು ಈಗಲೂ ಲಭ್ಯವಿವೆ. ತಯಾರಿಕೆ ಮತ್ತು ಬಳಕೆಗೆ ಅನುಮತಿ ಇರುವ ಏಕಬಳಕೆಯ ಪ್ಲಾಸ್ಟಿಕ್‌ನ ಗಾತ್ರ (ಮೈಕ್ರಾನ್‌ಗಳಲ್ಲಿ) ಎಷ್ಟು ಇರಬೇಕು ಎಂಬುದರ ಬಗ್ಗೆ ಗೊಂದಲಗಳಿವೆ. ಈ ಕಾನೂನುಗಳಲ್ಲಿನ ಅಪಾರದರ್ಶಕತೆ ಮತ್ತು ಅನುಷ್ಠಾನದಲ್ಲಿನ ಲೋಪಗಳ ಕಾರಣದಿಂದ ಇಪಿಆರ್ ವ್ಯವಸ್ಥೆ ದುರ್ಬಲವಾಗಿದೆ. ತಯಾರಿಕಾ ಕಂಪನಿಗಳು ಬಳಸುತ್ತಿರುವ ಪ್ಲಾಸ್ಟಿಕ್ ಎಷ್ಟು ಮತ್ತು ಅವು ಉತ್ಪಾದಿಸುತ್ತಿರುವ ಪ್ಲಾಸ್ಟಿಕ್ ತ್ಯಾಜ್ಯವೆಷ್ಟು ಎಂಬುದರ ಬಗ್ಗೆ ಮಾಹಿತಿಯೇ ಇಲ್ಲ. ಏಕೆಂದರೆ, ಈ ಎಲ್ಲಾ ದತ್ತಾಂಶಗಳನ್ನು 'ಸ್ವಯಂಘೋಷಣೆ' ಅಡಿಯಲ್ಲಿ ತರಲಾಗಿದೆ. ಈ ನಿಯಮಗಳು ಜಾರಿಯಾಗಿವೆಯೇ? ಈ ಬಗ್ಗೆ ಮಾಹಿತಿಗಳು ಲಭ್ಯವಿವೆಯೇ? ಲಭ್ಯವಿರುವ ಮಾಹಿತಿಯ ಸತ್ಯಾಸತ್ಯತೆ ಏನು ಎಂಬುದನ್ನು ಪರಿಶೀಲಿಸುವ ಯಾವ ವ್ಯವಸ್ಥೆಯೂ ಸಾರ್ವಜನಿಕ ವೇದಿಕೆಗಳಲ್ಲಿ ಲಭ್ಯವಿಲ್ಲ.

ಇದಕ್ಕಿಂತಲೂ ವಿಪರ್ಯಾಸದ ಸಂಗತಿ ಎಂದರೆ, ಕಂಪನಿಗಳು ಈಗ ಉತ್ಪಾದಿಸುತ್ತಿರುವ ಪ್ಲಾಸ್ಟಿಕ್ ತ್ಯಾಜ್ಯವನ್ನು 2024ರ ನಂತರ ಮರುಬಳಕೆ ಮಾಡಬೇಕು. ಹಾಗಿದ್ದರೆ, ಕಂಪನಿಗಳು ಈಗ ತಾವು ಉತ್ಪಾದಿಸುತ್ತಿರುವ ಪ್ಲಾಸ್ಟಿಕ್ ತ್ಯಾಜ್ಯವನ್ನು ಏನು ಮಾಡುತ್ತಿವೆ? 2024ರ ನಂತರ ಮರುಬಳಕೆ ಮಾಡಲು ಪ್ಲಾಸ್ಟಿಕ್ ತ್ಯಾಜ್ಯವನ್ನು ಪೇರಿಸಿ ಇಡುತ್ತಿವೆಯೇ ಅಥವಾ ಅವನ್ನು ಎಲ್ಲೆಂದರಲ್ಲಿ ಬಿಸಾಕುತ್ತಿವೆಯೇ ಎಂಬುದು ನಮ್ಮ ಮುಂದೆ ಇರುವ ದೊಡ್ಡ ಪ್ರಶ್ನೆಗಳು.

ಇಂದು ವಿಶ್ವ ಪರಿಸರ ದಿನ

ಕೆಲವು ಒಳ್ಳೆಯ ಸುದ್ದಿಗಳೂ ಇವೆ. ಮೇಲೆ ಹೇಳಲಾದ ಕಾನೂನುಗಳು ದುರ್ಬಲವಾಗಿದ್ದರೂ, ಕೆಲವೆಡೆ ನಗರಾಡಳಿತ ಸಂಸ್ಥೆಗಳು ಈ ಕಾನೂನುಗಳ ಆಚೆಗೂ ಮುನ್ನಡೆದಿವೆ. ಮಳೆನೀರಿನ ಕಾಲುವೆಗಳಲ್ಲಿ ಕಟ್ಟಿಕೊಳ್ಳುವ, ನಗರದಾಚೆ ತ್ಯಾಜ್ಯದ ಗುಡ್ಡವಾಗುವ ಪ್ಲಾಸ್ಟಿಕ್‌ಗಳ ವಿಲೇವಾರಿಗೆ ಪರಿಹಾರ ಕಂಡುಕೊಳ್ಳಲು ಯತ್ನಿಸಿವೆ. ಹಲವು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಎಲ್ಲಾ ಸ್ವರೂಪದ ಪ್ಲಾಸ್ಟಿಕ್ ಚೀಲಗಳ ಬಳಕೆಯನ್ನು ನಿಷೇಧಿಸಿವೆ. ಪ್ಲಾಸ್ಟಿಕ್ ಬಳಕೆ ನಿಷೇಧವನ್ನು ಅನುಷ್ಠಾನಕ್ಕೆ ತರುವಲ್ಲಿ ಇಂತಹ ನಿಷೇಧಗಳು ನೆರವಾಗಿವೆ. ಹಲವು ನಗರಗಳಲ್ಲಿ ಮನೆಮಟ್ಟದಲ್ಲೇ ಕಸ ವಿಂಗಡಣೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದಿವೆ. ಇದರಿಂದ ಪ್ಲಾಸ್ಟಿಕ್ ಅನ್ನು ಒಳಗೊಂಡ ಎಲ್ಲಾ ಒಣ ಕಸವನ್ನು ಮರುಬಳಕೆ ಮಾಡುವುದು ಸುಲಭವಾಗಿದೆ. ಮರುಬಳಕೆ ಮಾಡಬಹುದಾದ ವಸ್ತುಗಳನ್ನು ಬೇರ್ಪಡಿಸುವ ಘಟಕಗಳನ್ನು ಆರಂಭಿಸಲಾಗಿದೆ. ಕೆಲವೆಡೆ ಮರುಬಳಕೆ ಮಾಡಬಹುದಾದ ವಸ್ತುಗಳನ್ನಷ್ಟೇ ಸಂಗ್ರಹಿಸುತ್ತಿವೆ. ಕೆಲವು ನಗರಾಡಳಿತಗಳು ಹೀಗೆ ಸಂಗ್ರಹಿಸಿದ, ಮರುಬಳಕೆ ಸಾಧ್ಯವಿಲ್ಲದ ಪ್ಲಾಸ್ಟಿಕ್ ಅನ್ನು ಸಿಮೆಂಟ್ ತಯಾರಿಕಾ ಘಟಕಗಳಿಗೆ ರವಾನಿಸುತ್ತಿವೆ. ಅಂತಹ ಪ್ಲಾಸ್ಟಿಕ್ ಅನ್ನು ಸಿಮೆಂಟ್ ತಯಾರಿಕೆ ಅಥವಾ ಡಾಂಬರು ರಸ್ತೆ ನಿರ್ಮಾಣದಲ್ಲಿ ಬಳಸಲಾಗುತ್ತಿದೆ. ಇವೆಲ್ಲವೂ ಪ್ಲಾಸ್ಟಿಕ್ ಮಾರಿಯನ್ನು ನಿಯಂತ್ರಿಸಲು ನೆರವಾಗುತ್ತಿವೆ.



ಆದರೆ ಇಲ್ಲಿ ಬಹುದೊಡ್ಡ ಸವಾಲುಗಳಿವೆ ಮತ್ತು ಆ ಸವಾಲುಗಳನ್ನು ಎದುರಿಸಲು ಮುಂದಿನ ದಿನಗಳಲ್ಲಿ ಕೆಲಸ ಮಾಡಬೇಕಿದೆ. ಮೊದಲು ನಾವು ಈ 'ಏಕ ಬಳಕೆಯ ಪ್ಲಾಸ್ಟಿಕ್' ಎಂಬ ವ್ಯಾಖ್ಯಾನ ಮತ್ತು ವರ್ಗೀಕರಣವನ್ನು ತೆಗೆದುಹಾಕಬೇಕು. ಏಕೆಂದರೆ ಎಲ್ಲಾ ಪ್ಲಾಸ್ಟಿಕ್‌ಗಳು, ಅದರಲ್ಲೂ ಪ್ಯಾಕೇಂಜಿಂಗ್‌ಗೆ ಬಳಸುವ ಪ್ಲಾಸ್ಟಿಕ್ 'ಏಕ ಬಳಕೆಯ ಪ್ಲಾಸ್ಟಿಕ್' ಆಗಿದೆ. ಅವನ್ನು ಪ್ಯಾಕ್ ಮಾಡುತ್ತೇವೆ, ಬಳಸುತ್ತೇವೆ ಮತ್ತು ಬಿಸಾಕುತ್ತೇವೆ. ನಾವು ಸಣ್ಣ ಪ್ರಮಾಣದ ವಸ್ತುಗಳನ್ನು ಮಾತ್ರ ನಿರ್ಬಂಧಿಸುತ್ತಿದ್ದೇವೆ ಮತ್ತು ಅದನ್ನು ಜಾರಿ ಸಂಸ್ಥೆಗಳು ಪರಿಣಾಮಕಾರಿಯಾಗಿ ಜಾರಿಗೆ ತರಲಿ ಎಂದು ನಿರೀಕ್ಷಿಸುತ್ತಿರುವುದು ಏಕೆ ಎಂಬುದನ್ನು ಅರ್ಥಮಾಡಿಕೊಳ್ಳುವುದೇ ಕಷ್ಟ. ಇದರ ಬದಲಿಗೆ 'ಮರುಬಳಕೆ ಸಾಧ್ಯತೆ'ಯ ಆಧಾರದಲ್ಲಿ ನಿಷೇಧವನ್ನು ಹೇರಬೇಕು. ಇಲ್ಲಿಯೇ ನಿಜವಾದ ರಾಜಕೀಯ ಆರಂಭವಾಗುವುದು.

ಯಾವ ಪ್ಲಾಸ್ಟಿಕ್ ಅನ್ನು ಸಂಗ್ರಹಿಸಲು ಕಷ್ಟವೋ, ಅಂತಹ ಪ್ಲಾಸ್ಟಿಕ್ ಅನ್ನು ಮರುಬಳಕೆಗೆ ಕಳುಹಿಸುವುದೂ ಕಷ್ಟ ಎಂಬುದು ಈಗಾಗಲೇ ಸಾಬೀತಾಗಿರುವ ಸತ್ಯ. ಗುಟ್ಕಾ ಮತ್ತು ಚಿಪ್ಸ್ ಪ್ಯಾಕಿಂಗ್‌ನಲ್ಲಿ ಬಳಸುವ ಬಹು–ಪದರದ ಪ್ಲಾಸ್ಟಿಕ್‌ಗಳೂ ಸೇರಿ, ಹಲವು ಸ್ವರೂಪದ ಪ್ಲಾಸ್ಟಿಕ್‌ಗಳ ಮರುಬಳಕೆ ಕಷ್ಟಸಾಧ್ಯ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರವೇ. ಈ ಕಾರಣದಿಂದಲೇ ಬಹು–ಪದರದ ಪ್ಲಾಸ್ಟಿಕ್‌ಗಳನ್ನು 2018ರ ವೇಳೆಗೆ ಹಂತಹಂತವಾಗಿ ನಿಷೇಧಿಸಬೇಕು ಎಂದು 2016ರ ಪ್ಲಾಸ್ಟಿಕ್ ನಿರ್ವಹಣಾ ನಿಯಮಗಳಲ್ಲಿ ಹೇಳಲಾಗಿತ್ತು. ಆದರೆ, ಆನಂತರದ ದಿನಗಳಲ್ಲಿ ಈ ಅಂಶವನ್ನು ತಿದ್ದುಪಡಿ ಮಾಡಲಾಗಿತ್ತು. 'ಬಹು–ಪದರದ ಪ್ಲಾಸ್ಟಿಕ್‌ನ ಮರುಬಳಕೆ ಸಾಧ್ಯವಿಲ್ಲ ಎಂಬುದು ಸಾಬೀತಾಗದೆ, ಅಂತಹ ಪ್ಲಾಸ್ಟಿಕ್ ನಿಷೇಧ ಮಾಡಬಾರದು' ಎಂದು ಕಾನೂನಿನಲ್ಲಿ ತಿದ್ದುಪಡಿ ತರಲಾಯಿತು. ಬಹು–ಪದರ ಪ್ಲಾಸ್ಟಿಕ್‌ಗಳೇ ನಮ್ಮ ಕಸದ ರಾಶಿಯಲ್ಲಿ ಬೆಟ್ಟದಂತೆ ಬಿದ್ದಿರುವುದು, ಅವುಗಳ ಸಂಗ್ರಹವೂ ಕಷ್ಟ, ಅವಕ್ಕೆ ಯಾವುದೇ ಬೆಲೆ ಇಲ್ಲ ಮತ್ತು ಅವುಗಳ ಮರುಬಳಕೆ ಅತ್ಯಂತ ಕಷ್ಟ ಎಂಬುದು ಗೊತ್ತಿದ್ದೂ ಇಂತಹ ತಿದ್ದುಪಡಿ ತರಲಾಯಿತು.

ಎರಡನೆಯದಾಗಿ ನಮ್ಮ 'ತ್ಯಾಜ್ಯ ನಿರ್ವಹಣಾ ಯೋಧ'ರತ್ತ ಗಮನ ಹರಿಸಬೇಕು. ನಾವು ಇಂದು ಪ್ಲಾಸ್ಟಿಕ್ ತ್ಯಾಜ್ಯವನ್ನು ಸ್ವಲ್ಪವಾದರೂ ನಿರ್ವಹಣೆ ಮಾಡುತ್ತಿದ್ದೇವೆ ಎಂದರೆ, ಅದರಲ್ಲಿ ಇಂತಹ ಕೋಟ್ಯಂತರ ಯೋಧರ ಕೊಡುಗೆ ಅಪಾರವಾದುದು ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಅಸಂಘಟಿತ ವಲಯದಲ್ಲಿರುವ ಈ ಯೋಧರು, ಕಸದಿಂದ ರಸ ತೆಗೆಯುತ್ತಿರುವುದರಿಂದಲೇ ಈ ನಿರ್ವಹಣೆ ಸಾಧ್ಯವಾಗುತ್ತಿದೆ. 'ನಾವು ಉತ್ಪಾದಿಸುವ ಕಸಕ್ಕೆ ನಾವೇ ಹೊಣೆಗಾರರು' ಎಂಬ ಮನಃಸ್ಥಿತಿಯನ್ನು ಬೆಳೆಸಿಕೊಳ್ಳಬೇಕಿದೆ. ಇಂದು ನಿಷೇಧವಾಗಿರುವ ಪ್ಲಾಸ್ಟಿಕ್ ಅನ್ನು ನಾವು ಬಳಸಲೇಬಾರದು, ಮುಂದೆ ನಿಷೇಧವಾಗಬೇಕಿರುವ ಪ್ಲಾಸ್ಟಿಕ್ ಇಲ್ಲದೆಯೇ ಬದುಕುವುದನ್ನು ನಾವು ಇಂದೇ ರೂಢಿಸಿಕೊಳ್ಳಬೇಕು. ಅಂತಹ ಪ್ಲಾಸ್ಟಿಕ್ ಅನ್ನು ನಿಷೇಧಿಸಿ ಎಂದು ಈಗಲೇ ಆಗ್ರಹಿಸಬೇಕು.

ಲೇಖಕಿ: ಸೆಂಟರ್ ಫಾರ್ ಸೈನ್ಸ್ ಅಂಡ್ ಎನ್ವಿರಾನ್‌ಮೆಂಟ್‌ನ (ಸಿಎಸ್‌ಇ) ಪ್ರಧಾನ ನಿರ್ದೇಶಕಿ

ಸಿನಿ ಬಿಟ್ಸ್

ರಿಷಿ 'ಗರುಡ ಪುರಾಣ'

'ಆಪರೇಶನ್ ಅಲಮೇಲಮ್ಮ', 'ಕವಲುದಾರಿ' ಚಿತ್ರಗಳಿಂದ ಚಿರಪರಿಚಿತ ನಟ ರಿಷಿ ಅವರ 'ರುದ್ರ ಗರುಡ ಪುರಾಣ' ಚಿತ್ರಕ್ಕೆ ಚಾಲನೆ ದೊರೆತಿದೆ. 'ಚಂಬಲ್', 'ಡಿಯರ್ ವಿಕ್ರಮ್' ಸೇರಿದಂತೆ ಕೆಲವು ಚಿತ್ರಗಳನ್ನು ನಿರ್ದೇಶಿಸಿರುವ ಕೆ.ಎಸ್ ನಂದೀಶ್ ಈ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ.

ಇತ್ತೀಚೆಗೆ ನಡೆದ ಚಿತ್ರದ ಮುಹೂರ್ತ ಸಮಾರಂಭದಲ್ಲಿ ನಟ ನೀನಾಸಂ ಸತೀಶ್ ಚಿತ್ರದ ಮೊದಲ ಸನ್ನಿವೇಶಕ್ಕೆ ಆರಂಭ ಫಲಕ ತೋರಿ ತಂಡಕ್ಕೆ ಶುಭ ಕೋರಿದರು.

ಪ್ರಿಯಾಂಕ ಕುಮಾರ್ ಚಿತ್ರದ ನಾಯಕಿ. ಉದ್ಯಮಿ ಚಿತ್ರ ಲೋಹಿತ್ ನಿರ್ಮಾಣ ಮಾಡುತ್ತಿದ್ದು, ಕಥೆ ಹಾಗೂ ಚಿತ್ರಕಥೆಯನ್ನು ನಿರ್ದೇಶಕರೆ ಬರೆದಿದ್ದಾರೆ. ಸಂಭಾಷಣೆ ರಘು ನಿಡುವಳ್ಳಿ ಅವರದ್ದು.

'ನಾನು ಈ ಚಿತ್ರದಲ್ಲಿ ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ. ಈ ಹಿಂದೆ 'ಕವಲುದಾರಿ' ಚಿತ್ರದಲ್ಲೂ ಪೊಲೀಸ್ ಅಧಿಕಾರಿಯ ಪಾತ್ರ ಮಾಡಿದ್ದೆ. ಹಾಗಾಗಿ, ಅದೇ ರೀತಿಯ ಇನ್ನೊಂದು ಚಿತ್ರ ಮಾಡುವುದಕ್ಕೆ ಇಷ್ಟವಿರಲಿಲ್ಲ. ಆದರೆ ಈ ಚಿತ್ರದ ಕಥೆ ಕೇಳಿದಾಗ ಬಹಳ ಇಷ್ಟವಾಯಿತು. ಎರಡೂ ಚಿತ್ರಗಳ ಮಧ್ಯೆ ಯಾವುದೇ ಹೋಲಿಕೆ ಇಲ್ಲ. ಇದರಲ್ಲಿ ನಾನು ಪೊಲೀಸ್ ಅಧಿಕಾರಿ ಯಾದರೂ ಬಹಳ ವಿಭಿನ್ನವಾಗಿದೆ. ಜೊತೆಗೆ ಕರ್ಮ, ಪಾಪ, ಪುಣ್ಯಕ್ಕೆ ಸಂಬಂಧಿಸಿದ ಗರುಡ ಪುರಾಣದ ಸಾಕಷ್ಟು ಅಂಶಗಳು ಈ ಚಿತ್ರದಲ್ಲಿದೆ' ಎಂದು ನಟ ರಿಷಿ ಹೇಳಿದರು. ❖



ರಿಷಿ, ಪ್ರಿಯಾಂಕ ಕುಮಾರ್

'ಹಿರಣ್ಯ'ನಿಗೆ ರಿಹಾನಾ ನಾಯಕಿ

ಹಿರಿಯ ನಟ ಡಿಂಗ್ರಿ ನಾಗರಾಜ್ ಪುತ್ರ ರಾಜವರ್ಧನ್ ನಟನೆಯ 'ಹಿರಣ್ಯ' ಚಿತ್ರತಂಡ ನಾಯಕಿ ಪರಿಚಯಿಸುವ ಪೋಸ್ಟರ್ ಬಿಡುಗಡೆಗೊಳಿಸಿದೆ. ಯುವನಟಿ ರಿಹಾನಾ ಚಿತ್ರದ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. 'ಖಾಸಗಿ ಕಂಪನಿಯಲ್ಲಿ ಉದ್ಯೋಗಿಯಾಗಿದ್ದ ರಿಹಾನಾ ಅವರನ್ನು ಆಡಿಷನ್ ಮೂಲಕವೇ ಆಯ್ಕೆ ಮಾಡಲಾಗಿದೆ. ಚಿತ್ರದಲ್ಲಿ ಇವರದ್ದು ಪ್ರಬಲ ಪಾತ್ರ. ತುಂಬ ಭಾವುಕವಾಗಿ ಅಭಿನಯಿಸಿದ್ದಾರೆ' ಎನ್ನುತ್ತಾರೆ ನಿರ್ದೇಶಕ ಪ್ರವೀಣ್ ಅವ್ಯಕ್ತ.

ಶೀಘ್ರದಲ್ಲಿಯೇ ಚಿತ್ರ ತೆರೆಗೆ ಬರಲಿದೆ ಎಂದು ಚಿತ್ರತಂಡ ಹೇಳಿದೆ. ಈಗಾಗಲೇ ಚಿತ್ರೀಕರಣ ಮುಗಿದಿದ್ದು, ಪೋಸ್ಟ್ ಪ್ರೊಡಕ್ಷನ್ ಕೆಲಸ ಭರದಿಂದ ಸಾಗುತ್ತಿದೆ.

ಬಿಗ್ ಬಾಸ್ ಖ್ಯಾತಿಯ ದಿವ್ಯಾ ಸುರೇಶ್ ವಿಶೇಷ ಪಾತ್ರದಲ್ಲಿ ನಟಿಸಿದ್ದು, ಹುಲಿ ಕಾರ್ತಿಕ್, ಅರವಿಂದ ರಾವ್, ದಿಲೀಪ್ ಶೆಟ್ಟಿ ಮುಂತಾದವರು ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ವೇದಾಸ್ ಇನ್ಫಿನಿಟಿ ಪಿಕ್ಚರ್ ಬ್ಯಾನರ್‌ನಲ್ಲಿ ವಿಘ್ನೇಶ್ವರ ಯು. ಹಾಗೂ ವಿಜಯ್ ಕುಮಾರ್ ಬಿ. ವಿ ಜಂಟಿಯಾಗಿ ಬಂಡವಾಳ ಹೂಡಿ ನಿರ್ಮಿಸುತ್ತಿರುವ ಸಿನಿಮಾಕ್ಕೆ ಯೋಗೇಶ್ವರನ್ ಆರ್. ಛಾಯಾಗ್ರಹಣವಿದೆ. ಚಿತ್ರದ ಹಾಡುಗಳಿಗೆ ಜ್ಯೂಡಾ ಸ್ಯಾಂಡಿ ಸಂಗೀತ ಸಂಯೋಜನೆಯಿದೆ. ❖



ರಿಹಾನಾ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ


9606038256

ಬಾಲಸೋರ್ ರೈಲು ದುರಂತಕ್ಕೆ ಮಸೀದಿ ಮತ್ತು ಶುಕ್ರವಾರದ ನಮಾಜ್ ಕಾರಣ ಎಂಬ ಅರ್ಥದ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ರೈಲು ದುರಂತದ ಚಿತ್ರವನ್ನು ಅಂತಹ ಪೋಸ್ಟ್‌ಗಳ ಜತೆಗೆ ಹಂಚಿ ಕೊಳ್ಳಲಾಗಿದೆ. ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ ರೈಲು ಬೋಗಿಗಳು ಮತ್ತು ರೈಲು ಹಳಿಯ ಸಮೀಪ ಇರುವ ಮಸೀದಿಯನ್ನು ಹೋಲುವ ಕಟ್ಟಡವನ್ನು ಈ ಚಿತ್ರದಲ್ಲಿ ಗುರುತು ಮಾಡಲಾಗಿದೆ. ಆದರೆ, ಇದು ಸುಳ್ಳು ಮತ್ತು ಪ್ರಚೋದನಕಾರಿಯಾದ ಮಾಹಿತಿ.



'ಇದು ಸುಳ್ಳು ಸುದ್ದಿ ಎಂದು ಒಡಿಶಾ ಪೊಲೀಸರು ಸ್ಪಷ್ಟಪಡಿಸಿದ್ದಾರೆ. ರೈಲು ಅಪಘಾತಕ್ಕೆ ಹಳಿಯಲ್ಲಿನ ಎಲೆಕ್ಟ್ರಾನಿಕ್ ಇಂಟರ್‌ಲಾಕಿಂಗ್ ವ್ಯವಸ್ಥೆಯಲ್ಲಿನ ಲೋಪ ಕಾರಣ ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಆದರೆ, ಒಂದು ಸಮುದಾಯವನ್ನು ಗುರಿ ಮಾಡಿಕೊಂಡು, ಅಪಘಾತಕ್ಕೆ ಮಸೀದಿಯೇ ಕಾರಣ ಎಂದು ಕೆಲವರು ಪೋಸ್ಟ್‌ಗಳನ್ನು ಹಂಚಿದ್ದಾರೆ. ಈ ಮೂಲಕ ಒಡಿಶಾದಲ್ಲಿನ ಕೋಮು ಸೌಹಾರ್ದವನ್ನು ಹದಗೆಡಿಸಲು ಯತ್ನಿಸಿದ್ದಾರೆ. ಅಂತಹವರ ವಿರುದ್ಧ ದೂರು ದಾಖಲಿಸಲಾಗಿದೆ. ಕಠಿಣ ಕ್ರಮವನ್ನೂ ತೆಗೆದುಕೊಳ್ಳಲಾಗುವುದು' ಎಂದು ಒಡಿಶಾ ಪೊಲೀಸರು ಟ್ವೀಟ್ ಮಾಡಿದ್ದಾರೆ. ಹಳಿಯ ಸಮೀಪ ಇರುವುದು ದೇವಾಲಯ. ಆದರೆ, ಅದನ್ನು ಮಸೀದಿ ಎಂದು ಸುಳ್ಳು ಸುದ್ದಿ ಹರಡಲಾಗಿದೆ ಎಂದು ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಪ್ರಪಂಚವೆಂಬ ಮೆರವಣಿಗೆ

ನರನರೀ ಚಿತ್ರಗಳು, ನಾಟಕದ ಪಾತ್ರಗಳು |
ಪರಿಪರಿಯ ವೇಷಗಳು, ವಿವಿಧ ಭಾಷೆಗಳು ||
ಬರುತಿಹವು, ಬೆರಗೆನಿಸಿ ಮೆರೆಯುವುವು, ತೆರಳುವುವು |
ಮೆರವಣಿಗೆಯೋ ಲೋಕ – ಮಂಕುತಿಮ್ಮ
|| 898 ||

ಪದ-ಅರ್ಥ: ನರನರೀ = ಪುರುಷ-ಸ್ತ್ರೀ, ಬೆರಗೆನಿಸಿ = ಬೆರಗು + ಎನಿಸಿ,

ವಾಚ್ಯಾರ್ಥ: ಈ ಲೋಕವೊಂದು ದೊಡ್ಡ ಮೆರವಣಿಗೆ, ಇಲ್ಲಿ ಸ್ತ್ರೀ- ಪುರುಷಾಕಾರದ ಚಿತ್ರಗಳು. ಇವೆಲ್ಲ ನಾಟಕದ ಪಾತ್ರಗಳು, ತರತಹದ ವೇಷಗಳು, ವಿವಿಧ ಭಾಷೆಗಳು. ಇವು ಈ ಲೋಕದಲ್ಲಿ ಬರುತ್ತವೆ, ಬೆರಗಾಗಿ ಮೆರೆಯುತ್ತವೆ, ನಂತರ ಮರೆಯಾಗಿ ತೆರಳುತ್ತವೆ.

ವಿವರಣೆ: ಈ ಪ್ರಪಂಚವೇ ಒಂದು ಮಾಯೆ ಎಂದು ಜ್ಞಾನಿಗಳು ಹೇಳುತ್ತಾರೆ. ಮಾಯೆಯೆಂದರೆ ಏನು? ಅದು ಇದ್ದ ಹಾಗೆ ತೋರುತ್ತದೆ, ಭ್ರಮೆ ಹುಟ್ಟಿಸುತ್ತದೆ, ಒದ್ದಾಡಿಸುತ್ತದೆ, ಕೊನೆಗೆ ಮರೆಯಾಗುತ್ತದೆ. ಪ್ರಪಂಚ ಇರುವುದೇ ಹಾಗೆ. ಅದರ ಆಕರ್ಷಣೆ, ಮೆರಗು, ಬೆರಗು ಹುಟ್ಟಿಸುತ್ತದೆ. ಅದೊಂದು ಅತ್ಯದ್ಭುತವಾದ ಮೆರವಣಿಗೆ ಅದು ಯಾರನ್ನೂ ಆಕರ್ಷಿಸಿಬಿಡುವಂಥದ್ದು.

ನಾರದ, ಪರಮಾತ್ಮನ ಅಂತರಂಗ ಭಕ್ತ. ನಿತ್ಯ ಅವನನ್ನು ಕಾಣುವವನು. ಅವನಿಗೂ ಒಮ್ಮೆ ಭಗವಂತನ ಮಾಯೆಯ ಪ್ರಭಾವವನ್ನು ಕಾಣಬೇಕೆನ್ನಿಸಿತು. ತಾನು ಮಾಯೆಯಿಂದ ಹೊರಗಾದವನು ಎಂಬ ನಂಬಿಕೆ ಅವನಿಗೆ. ಅದಕ್ಕೆ ನಾರಾಯಣನನ್ನು ಪ್ರಾರ್ಥಿಸಿದ. ಪರಮಾತ್ಮ ನಕ್ಕು 'ಆಗಲಿ' ಎಂದ. ಒಂದೆರಡು ದಿನಗಳ ನಂತರ ಪರಮಾತ್ಮ ನಾರದನನ್ನು ಕರೆದು, 'ನನಗೆ ಬಾಯಾರಿಕೆಯಾಗಿದೆ. ಕುಡಿಯಲು ನೀರು ತರುತ್ತೀಯಾ?' ಎಂದ ಕೇಳಿದ. ತಕ್ಷಣ ಹೊರಟ ನಾರದ. ಹತ್ತಿರದಲ್ಲೊಂದು ಹಳ್ಳಿ. ಅಲ್ಲೊಂದು ಮನೆ. ನಾರದ ಬಾಗಿಲು ತಟ್ಟಿದ. ಬಾಗಿಲನ್ನು ತೆರೆದವಳು ಅಪರೂಪದ ಸುಂದರಿ. ಪ್ರೇಮಾಂಕುರವಾಯಿತು, ಮದುವೆಯಾಯಿತು. ಅನೇಕ ಮಕ್ಕಳಾದವು. ಮಾವ ಸತ್ತು ಅವನ ಆಸ್ತಿಯೆಲ್ಲ ಇವನಿಗೇ ಬಂತು. ಹೆಂಡತಿ ಮಕ್ಕಳೊಡನೆ ಅಪರಿಮಿತ ಸಂತೋಷ. ಒಮ್ಮೆ ಭಾರೀ ಪ್ರವಾಹ ಬಂತು. ಪಾರಾಗಲು ಒಂದು ಕೈಯಲ್ಲಿ ಹೆಂಡತಿ, ಮತ್ತೊಂದು ಕೈಯಲ್ಲಿ ಒಂದು ಮಗು ಮತ್ತು ಹೆಗಲ ಮೇಲೆ ಇನ್ನೊಂದು ಮಗುವನ್ನು ಹಿಡಿದು ಹೊರಟ. ಹೆಗಲ ಮೇಲಿನ ಮಗು ಪ್ರವಾಹದಲ್ಲಿ ಬಿದ್ದು ಕೊಚ್ಚಿಕೊಂಡು ಹೋಯಿತು. ಅಯ್ಯೋ ಎನ್ನುವುದರಲ್ಲಿ ಮತ್ತೊಂದು ಮಗುವೂ ತೇಲಿಹೋಯಿತು. ಶಕ್ತಿ ಮೀರಿ ಪ್ರಯತ್ನಿಸಿದರೂ ಹೆಂಡತಿಯನ್ನು ಹಿಡಿದುಕೊಳ್ಳಲಾಗಲಿಲ್ಲ. ದುಃಖದಿಂದ, ಎಲ್ಲವನ್ನೂ ಕಳೆದುಕೊಂಡ ನಾರದ ಭೋರೆಂದು ಅಳುತ್ತ, ನದಿಯ ದಂಡೆಯ ಮೇಲೆ ಕುಳಿತಾಗ, ನಾರಾಯಣ ಬಂದು, 'ಯಾಕೆ ನಾರದ ನೀರು ತರಲಿಲ್ಲ, ಆಗಲೇ ಅರ್ಧ ಗಂಟೆಯಾಯಿತಲ್ಲ?' ಎಂದು ಕೇಳಿದ. ನಾರದನಿಗೆ ಅರ್ಥವಾಯಿತು. ಇಡೀ ಜೀವನದ ಮೆರವಣಿಗೆ ನಡೆದದ್ದು ಕೇವಲ ಅರ್ಧಗಂಟೆಯಲ್ಲಿ ಎಂದು.

ಕಗ್ಗ ಅದನ್ನು ಹೇಳುತ್ತದೆ. ಈ ಪ್ರಪಂಚ ಒಂದು ಮೆರವಣಿಗೆ. ಮೆರವಣಿಗೆ ಯಾವಾಗಲೂ ಇರುವುದಿಲ್ಲ. ಕೆಲಕಾಲ ಸಂಭ್ರಮವನ್ನು ಸೃಷ್ಟಿಸಿ, ಬೆರಗುಗೊಳಿಸಿ ಕೊನೆಯಾಗುತ್ತದೆ. ಅದಕ್ಕೇ ಇಲ್ಲಿ ಸ್ತ್ರೀ- ಪುರುಷ ಆಕಾರಗಳು, ನಾಟಕದ ಪಾತ್ರಗಳಂತೆ ಬರುತ್ತವೆ. ಪರಿಪರಿಯ ವೇಷಗಳನ್ನು ಹಾಕಿಕೊಳ್ಳುತ್ತವೆ, ವಿವಿಧ ಭಾಷೆಗಳನ್ನು ಬಳಸುತ್ತವೆ. ಎಲ್ಲ ಪಾತ್ರಗಳು ಪ್ರಪಂಚದ ರಂಗಭೂಮಿಯ ಮೇಲೆ ಬಂದು, ಬೆರಗು ಹುಟ್ಟಿಸುವಂತೆ ಮೆರೆಯುತ್ತವೆ. ತಮ್ಮ ಪಾತ್ರ ಮುಗಿದೊಡನೆ ಮರೆಯಾಗಿಬಿಡುತ್ತವೆ. ಇದೊಂದು ದೊಡ್ಡ ಮೆರವಣಿಗೆ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಸೋಮವಾರ ಜೂನ್ 5, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ಪ್ರತಿಪದ್ ಗಂ. 06-40 ನಂತರ ದ್ವಿತೀಯ ಗಂ. 27-50 ನಕ್ಷತ್ರ: ಮೂಲಾ ಗಂ. 25-23 ಯೋಗ: ಸಾಧ್ಯಾ ಗಂ. 08-48, ಕರಣ: ಕೌಲವ ಗಂ. 06-40, ವೃಷಭ ಮಾಸದ 21 ನೇ ದಿನ, ಮಳೆನಕ್ಷತ್ರ: ರೋಹಿಣಿ 4. ರಾಹುಕಾಲ: ಬೆಳಿಗ್ಗೆ 07-30 – 09-00, ಸೂರ್ಯೋದಯ: 06-06 ಸೂರ್ಯಾಸ್ತ: 06-52, ಮುಸ್ಲಿಂ ದಿನಾಂಕ: 16 ಜುಲ್ಖಾಯದ್, ದಿನ ವಿಶೇಷ: ಗುರು ಹರಗೋವಿಂದರ ಜನ್ಮದಿನ, ಅದೃಷ್ಟ ಸಂಖ್ಯೆ: 5, 1

ಮೇಷ: ಕೆಲಸ ಕಾರ್ಯಗಳಲ್ಲಿ ಬಾಧೆಯಾಗಿ ನಿಲ್ಲುತ್ತಿದ್ದ ವ್ಯಕ್ತಿ ದಾರಿಯಿಂದ ದೂರ ಸರಿಯಲಿದ್ದಾರೆ. ದುಃಖಗಳನ್ನೆಲ್ಲವನ್ನೂ ಮೀರಿ ನಿಮ್ಮ ಮುಖದಲ್ಲಿ ಮಂದಹಾಸ ಇರಲೇಬೇಕಾಗುತ್ತದೆ. ನಿಮ್ಮ ಜವಬ್ದಾರಿ ಎಲ್ಲದಕ್ಕಿಂತ ಮುಖ್ಯವಾಗುತ್ತದೆ.

ವೃಷಭ: ಮನೆಯ ಹಿರಿಯರ ಮುಂದೆ ಪರಂಪರೆಗಳನ್ನು, ನೀತಿ ನಿಯಮಗಳನ್ನು ಮೀರಿ ನಡೆದು ಅವರ ಅಸಮಾಧಾನಕ್ಕೆ ಕಾರಣಕರ್ತರಾಗುವಿರಿ. ಇಂದು ಸಂದರ್ಶನ ನಡೆಸುವಲ್ಲಿ ಯೋಗ್ಯತೆಯನ್ನು ಪರೀಕ್ಷಿಸುವಲ್ಲಿ ಕಷ್ಟಪಡುವಿರಿ.

ಮಿಥುನ: ಆತ್ಮಗೌರವ ರಕ್ಷಣೆ ದೃಷ್ಟಿಯಿಂದ ಸಂದರ್ಭಗಳೊಡನೆ ರಾಜಿಮಾಡಿಕೊಳ್ಳುವುದು ಸರಿ ಎನಿಸಲಿದೆ. ಉನ್ನತ ವ್ಯಾಸಂಗದ ವಿದ್ಯಾರ್ಥಿಗಳಿಗೆ ಓದಿನಲ್ಲಿ ಹೆಚ್ಚಿನ ಆಸಕ್ತಿ ಬರುವುದು. ಷೇರು ಬಂಡವಾಳದಲ್ಲಿ ಹೆಚ್ಚು ಲಾಭ ಸಿಗುವುದು.

ಕರ್ಕಾಟಕ: ಸಿವಿಲ್ ಎಂಜಿನಿಯರ್‌ಗಳಿಗೆ ಖಾಸಗಿ ಸಂಸ್ಥೆಯಲ್ಲಿ ಉದ್ಯೋಗ ದೊರೆಯುವುದು. ಕೌಟುಂಬಿಕವಾಗಿ ಖರ್ಚುಗಳು ಅಧಿಕವೆನಿಸಿದರೂ ಆರ್ಥಿಕವಾಗಿ ನಿಮ್ಮ ಆದಾಯ ಏರಿಳಿತಗಳಿರದೆ ಸಮನಾಗಿರುವುದು.

ಸಿಂಹ: ರಾಜಕೀಯದಲ್ಲಿ ಯಾವುದೇ ರೀತಿಯ ಬದಲಾವಣೆ ಸರಿಯಲ್ಲ. ವೈಯಕ್ತಿಕ ಜೀವನದಲ್ಲಿ ನೀವು ಕೆಲವೊಂದು ಬದಲಾವಣೆಗೆ ಹೊಂದಿಕೊಳ್ಳಬೇಕಾದ ಅನಿವಾರ್ಯತೆ ಉಂಟಾಗಲಿದೆ. ನೀರಾವರಿ ಬೆಳೆಗಳು ಲಾಭ ತರಲಿದೆ.

ಕನ್ಯಾ: ಭಾವನಾತ್ಮಕ ಸಂಬಂಧಗಳನ್ನು ಬೆಳೆಸಲು ಇದು ಸೂಕ್ತ ಕಾಲವಾಗಿದೆ. ನಿಮ್ಮ ನಡೆಯು ನಿಮ್ಮ ಮೇಲಧಿಕಾರಿ ಅಥವಾ ಪಾಲುದಾರರಿಗೆ ಇಷ್ಟವಾಗುವ ರೀತಿಯಲ್ಲಿ ಇರುವುದು ಉತ್ತಮ. ಆರೋಗ್ಯದಲ್ಲಿ ಜಾಗ್ರತೆವಹಿಸಿ.

ತುಲಾ: ಬ್ಯಾಂಕಿನ ಸಾಲಗಳು ತೀರಿ ಮನೆಯಲ್ಲಿ ನೆಮ್ಮದಿ ಪರಿಸರ ಮೂಡಲಿದೆ. ಕೌಟುಂಬಿಕ ವಿಷಯಗಳತ್ತ, ಅದರಲ್ಲೂ ಮಡದಿಯ ಆರೋಗ್ಯ ವಿಚಾರದಲ್ಲಿ ಹೆಚ್ಚು ಗಮನಹರಿಸಬೇಕಾಗುವುದು. ಮಾವು ವ್ಯಾಪಾರಿಗಳಿಗೆ ಲಾಭದ ದಿನ.

ವೃಶ್ಚಿಕ: ಮಾನಸಿಕವಾಗಿ ಕುಗ್ಗದೇ ಧೈರ್ಯದಿಂದಿರುವುದು ಮೂಲ ಮಂತ್ರವಾಗಿರಲಿ. ಹೊಸ ಬದುಕನ್ನು ಆರಂಭಿಸಲು ಅವಕಾಶದ ಬಾಗಿಲು ತೆರೆದಿದೆ. ಅನಿವಾರ್ಯವಾಗಿ ದೂರದ ಊರಿಗೆ ಪ್ರಯಾಣ ಮಾಡಬೇಕಾಗಬಹುದು.

ಧನು: ಪ್ರಿಯ ವ್ಯಕ್ತಿಯೊಂದಿಗೆ ವಿಚಾರ ವಿನಿಮಯ ಮಾಡಿಕೊಳ್ಳಲು ಸೂಕ್ತ ರೀತಿಯಲ್ಲಿ ಅವಕಾಶ ಸಿಗುವುದು. ನೂತನ ವಾಹನ ಕೊಳ್ಳುವ ಆಲೋಚನೆಗಳು ಬರುವುದು. ಸರ್ಕಾರಿ ಉದ್ಯೋಗಿಗಳಿಗೆ ವರ್ಗಾವಣೆಯಾಗುವ ಸಂಭವ.

ಮಕರ: ಸಹೋದರರಲ್ಲಿನ ಕೋರ್ಟ್ ವ್ಯವಹಾರಗಳನ್ನು ರಾಜಿ ಅಥವಾ ಸಂಧಾನ ಮೂಲಕ ಬಗೆ ಹರಿಸಿಕೊಳ್ಳುವ ಪ್ರಯತ್ನ ಮಾಡುವುದು ಒಳ್ಳೆಯದು. ಸಮಾಜದಲ್ಲಿ ಗೌರವಾನ್ವಿತವಾಗಿ ಬದುಕುವುದನ್ನು ರೂಢಿಸಿಕೊಳ್ಳಿರಿ.

ಕುಂಭ: ಕಾರ್ಯರಂಗದಲ್ಲಿ ಮುನ್ನಡೆಗೆ ಸಹೋದ್ಯೋಗಿಗಳ ನಿರ್ಧಾರಗಳಿಂದ ಸಮಸ್ಯೆ ಇರುತ್ತದೆ. ಆದ್ದರಿಂದ ಯೋಚಿಸಿ ಸ್ವಂತ ನಿರ್ಧಾರ ತೆಗೆದುಕೊಳ್ಳುವುದು ಒಳ್ಳೆಯದು. ನಿಮ್ಮ ಹಳೆಯ ಕಾಲೇಜನ್ನು ಸಂದರ್ಶಿಸುವಿರಿ.

ಮೀನ: ಹೊಸ ವೃತ್ತಿ ವಿಚಾರವಾಗಿ ಉತ್ತಮ ಅವಕಾಶಗಳು ನಿಮ್ಮೆಡೆಗೆ ಬರಲಿದೆ. ಅದನ್ನು ಪ್ರಯೋಜನಾಕಾರಿಯಾಗಿ ಉಪಯೋಗಿಸಿಕೊಳ್ಳಿ. ಈ ದಿನದ ಪ್ರಮುಖ ಕೆಲಸಗಳು ಅನಾಯಾಸವಾಗಿ ಪೂರ್ಣಗೊಳ್ಳುವವು.

ಪದಬಂಧ 5340


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

3.ಅರಸುತ್ತಿರುವಾಗ ರಾಜ ಸಿಕ್ಕಿರುವನಲ್ಲಾ (3)
5.ದಿಗಂಬರನಾಗಿರುವವನು (2)
6.ರತ್ನಗಳ ಆಶ್ರಯಸ್ಥಾನವಾಗಿರುವ ಸಮುದ್ರ (4)
7.ತರುಣ ಇಲ್ಲಿದ್ದಾನೆ (3)
9.ಸಂಸಾರ ಬಂಧನಕ್ಕೆ ಒಳಗಾದವನು (2)
10.ಒಳ್ಳೆಯ ಅವಕಾಶ (3)
11.ಪರಂಪರೆಯಲ್ಲಿ ಬಂದಿರುವ ಕೋಲಾಹಲ (2)
12.ಪೆದ್ದ ಇಲ್ಲಿದ್ದಾನೆ (3)
14.ಚಾರನ ನಡುವೆ ನುಸುಳಿರುವ ಪಿಸುಣ (4)
15.ಮಧುರ ಫಲ ನೀಡುವ ವೃಕ್ಷ (2)
16.ಇದು ಒಳ್ಳೆಯ ದಿನ (3)

ಮೇಲಿಂದ ಕೆಳಕ್ಕೆ

1.ಬಡಿವಾರ ಮಾಡುವಾಗ ಆವರಿಸಿದ ಕ್ಷಾಮ (2)
2.ತಲ್ಲೀನ ಎಂದು ಹೀಗೆ ಹೇಳಿ (2)
3.ಕಡಿಮೆ ಆಯುಸ್ಸುಳ್ಳವನು (3)
4.ಈತ ಸರಿಸಮಾನನಾದವನು (3)
5.ಮನುಷ್ಯರನ್ನು ತಿನ್ನುವ ಪ್ರಾಣಿ (5)
6.ನೆತ್ತರು ಪ್ರವಹಿಸುವಿಕೆ (5)
8.ಲಗ್ನದಲ್ಲಿ ಹೆಣ್ಣಿನ ತಂದೆ ವರನಿಗೆ ಕೊಡುವ ಉಡುಗೊರೆ (5)
12.ಇನ್ನೂ ಕರುಹಾಕದ ಹಸು (3)
13.ವನದ ಕಡೆ ನೋಡುತ್ತಿರುವ ಮುಖ (3)
15.ಮೃತ್ತಿಕೆ ಇಲ್ಲಿದೆ (2)
17.ದಿಟ್ಟತನದಿಂದ ನುಡಿದ ಸತ್ಯ (2)



5339ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಪಲಾಯನ 4.ಜನಬಲ
6.ಕರಡಿ 7.ಜತನ
8.ಗಣಪ 10.ಗುಮಾನಿ
12.ರಿವಾಜು 13.ಗುಲಾಮ
14.ಸಮರಸ 16.ರಣಭೇರಿ

ಮೇಲಿಂದ ಕೆಳಕ್ಕೆ:

1.ಪಗಡಿ 2.ನಜ
3.ಬಾಲ 5.ನಸುನಗು
6.ಕರಗ 7.ಜಹಜು
9.ಪರಿಹಾರ 11.ನಿಯಮ
13.ಗುಜರಿ 14.ಸಸಿ
15.ಸರ

ಸುಡೊಕು 5726

	4					8	2	
8		9						5
	6					3		7
	8			1			5	
9		3	5	2	8	4		6
	5			3			8	
5		4		8			7	
2	9		1		7	5		4
		6		4			9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5725 ಸುಡೊಕು

9	2	5	1	8	3	4	7	6
6	8	4	7	2	5	3	1	9
7	3	1	4	6	9	2	5	8
4	7	9	8	1	6	5	3	2
3	6	2	5	4	7	8	9	1
1	5	8	3	9	2	6	4	7
8	9	7	2	5	4	1	6	3
5	1	6	9	3	8	7	2	4
2	4	3	6	7	1	9	8	5

ರೆಪೊ ದರದಲ್ಲಿ ಯಥಾಸ್ಥಿತಿ ಸಾಧ್ಯತೆ

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತನ್ನ ಮುಂಬರುವ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯಲ್ಲಿ ರೆಪೊ ದರವನ್ನು ಶೇ 6.5ರಲ್ಲಿಯೇ ಉಳಿಸಿಕೊಳ್ಳುವ ಸಾಧ್ಯತೆ ಇದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಚಿಲ್ಲರೆ ಹಣದುಬ್ಬರವು ಏಪ್ರಿಲ್‌ನಲ್ಲಿ ಶೇ 4.7ಕ್ಕೆ ಇಳಿಕೆ ಕಂಡಿದ್ದು, ಮುಂಬರುವ ತಿಂಗಳುಗಳಲ್ಲಿ ಇನ್ನಷ್ಟು ಇಳಿಕೆ ಆಗುವ ನಿರೀಕ್ಷೆ ಇಟ್ಟುಕೊಳ್ಳಲಾಗಿದೆ. ಜೂನ್ 6 ರಿಂದ 8ರವರೆಗೆ ಆರ್‌ಬಿಐನ ಹಣಕಾಸು ನೀತಿ ಸಮಿತಿಯು ಸಭೆ ಸೇರಲಿದ್ದು, ಜೂನ್ 8ರಂದು ಸಭೆಯ ನಿರ್ಧಾರವನ್ನು ಪ್ರಕಟಿಸಲಿದೆ.

ಏಪ್ರಿಲ್‌ನಲ್ಲಿ ಸಭೆ ಸೇರಿದ್ದ ಸಮಿತಿಯು ಬಡ್ಡಿದರದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಅದಕ್ಕೂ ಮೊದಲು 2022ರ ಮೇ ತಿಂಗಳಿನಿಂದ ಶೇ 2.50ರಷ್ಟು ಬಡ್ಡಿದರವನ್ನು ಹೆಚ್ಚಳ ಮಾಡಿತ್ತು.

ಏಪ್ರಿಲ್‌ನಲ್ಲಿ ಚಿಲ್ಲರೆ ಹಣದುಬ್ಬರ ಶೇ 5ಕ್ಕಿಂತಲೂ ಕೆಳಕ್ಕೆ ಇಳಿಕೆ ಕಂಡಿದ್ದು, ಮೇನಲ್ಲಿ ಇನ್ನಷ್ಟು ಇಳಿಕೆ ಆಗುವ ಸಾಧ್ಯತೆ ಇದೆ. ಹೀಗಾದಲ್ಲಿ, ಈ ಹಿಂದೆ ಬಡ್ಡಿದರದಲ್ಲಿ ಮಾಡಿರುವ ಏರಿಕೆಯು ಹಣದುಬ್ಬವರನ್ನು ನಿಯಂತ್ರಿಸಲು ನೆರವಾಗಿದೆ ಎಂದಾಗುತ್ತದೆ. ಹೀಗಾಗಿ ಈ ಬಾರಿಯ ಸಭೆಯಲ್ಲಿ ಮತ್ತೊಮ್ಮೆ ಬಡ್ಡಿದರವನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಳ್ಳುವ ನಿರೀಕ್ಷೆ ಮಾಡಬಹುದು ಎಂದು ಬ್ಯಾಂಕ್ ಆಫ್ ಬರೋಡಾದ ಮುಖ್ಯ ಆರ್ಥಿಕ ತಜ್ಞ ಮದನ್ ಸಬ್ನವೀಸ್ ಹೇಳಿದ್ದಾರೆ.

ಅಕ್ಟೋಬರ್ ನಂತರ ರೆಪೊ ದರದಲ್ಲಿ ಶೇ 25 ರಿಂದ ಶೇ 50ರವರೆಗೆ ಇಳಿಕೆ ಆಗುವ ಸಾಧ್ಯತೆ ಇದೆ ಎಂದೂ ಅವರು ಸೂಚನೆ ನೀಡಿದ್ದಾರೆ.

ನೆಮ್ಮದಿಯ ನಿವೃತ್ತಿಗೆ ಎನ್‌ಪಿಎಸ್



ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ತೆರಿಗೆ ಉಳಿತಾಯವಾಗಬೇಕು, ನಿವೃತ್ತಿಯ ನಂತರ ನಿಯಮಿತ ಆದಾಯ ಸಿಗಬೇಕು, ತೊಡಗಿಸಿದ ಹಣದ ಮೇಲೆ ಉತ್ತಮ ಲಾಭಾಂಶವೂ ದೊರಕಬೇಕು ಎನ್ನುವವರಿಗೆ ಒಳ್ಳೆಯ ಹೂಡಿಕೆ ಆಯ್ಕೆ ಎನ್‌ಪಿಎಸ್. ಎನ್‌ಪಿಎಸ್ ಅಂದರೆ ರಾಷ್ಟ್ರೀಯ ಪಿಂಚಣಿ ಯೋಜನೆ. ತೆರಿಗೆ ನಿಯಮಗಳಲ್ಲಿ ಸುಧಾರಣೆ, ಹೂಡಿಕೆದಾರರಿಗೆ ಪೂರಕವಾದ ನಿಯಮಾವಳಿಗಳ ರಚನೆ ಸೇರಿದಂತೆ ಕಳೆದ ಒಂದು ದಶಕದಲ್ಲಿ ತಂದ ಸಾಕಷ್ಟು ಸುಧಾರಣೆಗಳಿಂದಾಗಿ ಎನ್‌ಪಿಎಸ್ ಈಗ ಹೆಚ್ಚು ಅನುಕೂಲಕರ ಹೂಡಿಕೆಯಾಗಿ ಮಾರ್ಪಟ್ಟಿದೆ. ಬನ್ನಿ ಎನ್ ಪಿಎಸ್ ಹೂಡಿಕೆಯಿಂದಾಗುವ ಲಾಭಗಳೇನು ತಿಳಿಯೋಣ.

ಏನಿದು ಎನ್‌ಪಿಎಸ್ ಯೋಜನೆ?: ರಾಷ್ಟ್ರೀಯ ಪಿಂಚಣಿ ಯೋಜನೆ ಭಾರತದ ನಾಗರಿಕರಿಗೆ ವೃದ್ಧಾಪ್ಯ ಭದ್ರತೆಯನ್ನು ಒದಗಿಸಲು ಭಾರತ ಸರ್ಕಾರ ಪ್ರಾರಂಭಿಸಿರುವ ಪಿಂಚಣಿ ಮತ್ತು ಹೂಡಿಕೆ ಯೋಜನೆಯಾಗಿದೆ. ರಾಷ್ಟ್ರೀಯ ಪಿಂಚಣಿ ಯೋಜನೆಯನ್ನು ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಪಿಎಫ್‌ಆರ್‌ಡಿಎ) ನಿಯಂತ್ರಿಸುತ್ತದೆ. ನಿವೃತ್ತಿ ನಂತರವೂ ನಿಯಮಿತ ಆದಾಯ ಒದಗಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಇದನ್ನು ರೂಪಿಸಿದೆ. ಎಪಿಎಸ್ ಹೂಡಿಕೆ ಎಲ್ಲರಿಗೂ ಮುಕ್ತವಾಗಿದೆ ಆದರೆ ಸರ್ಕಾರಿ ನೌಕರರಿಗೆ ಕಡ್ಡಾಯವಾಗಿದೆ.

ಖಾತೆ ಆರಂಭಿಸುವುದು ಹೇಗೆ?: ಎನ್‌ಪಿಎಸ್‌ನಲ್ಲಿ ಹೂಡಿಕೆಯಲ್ಲಿ ಎರಡು ರೀತಿಯ ಖಾತೆಗಳಿವೆ. ಶ್ರೇಣಿ 1 (Tier -1) ಮತ್ತು ಶ್ರೇಣಿ 2 (Tier-2) ಖಾತೆ. ಶ್ರೇಣಿ 1 ಖಾತೆ ನಿವೃತ್ತಿ ಖಾತೆಯಾಗಿದ್ದು ಸಾಕಷ್ಟು ತೆರಿಗೆ ಲಾಭಗಳು ಈ ಖಾತೆಯಲ್ಲಿ ಸಿಗುತ್ತವೆ. ಆದರೆ ಇದರಲ್ಲಿ ಹೂಡಿಕೆ ಮಾಡುವಾಗ ನಿವೃತ್ತಿಯ ತನಕ ಅಂದ್ರೆ 60 ವರ್ಷದ ವರೆಗೆ ಹೂಡಿಕೆ ಹಣ ಹಿಂಪಡೆಯಲು ಅವಕಾಶವಿಲ್ಲ. ಶ್ರೇಣಿ 2 ಖಾತೆಗೆ ನಿಬಂಧನೆಗಳಲ್ಲಿ, ಹೂಡಿಕೆ ಮಾಡಿದ ಮೊತ್ತವನ್ನು ಬೇಕಾದಾಗ ಹಿಂಪಡೆಯಬಹುದು. ಆನ್‌ಲೈನ್ ಮೂಲಕ ರಾಷ್ಟ್ರೀಯ ಪಿಂಚಣಿ ಯೋಜನೆ ವೆಬ್ ಸೈಟ್‌ನಲ್ಲಿ https://enps.nsdl.com/eNPS/NationalPensionSystem.html ಎನ್‌ಪಿಎಸ್ ಖಾತೆ ಆರಂಭಿಸಬಹುದು. ಇಲ್ಲವಾದಲ್ಲಿ ಬ್ಯಾಂಕ್‌ಗಳಲ್ಲಿ ಪಾಯಿಂಟ್ ಆಫ್ ಪ್ರೆಸೆನ್ಸ್ ಸರ್ವಿಸ್ ಪ್ರೊವೈಡರ್ ಗಳ ಮೂಲಕ ಖಾತೆ ತೆರೆಯಬಹುದು)

ಜನಪ್ರಿಯತೆ ಪಡೆದಿಲ್ಲ: ಎನ್‌ಪಿಎಸ್ ಒಂದು ಒಳ್ಳೆಯ ಹೂಡಿಕೆ ಯೋಜನೆಯಾಗಿದ್ದರೂ ಈಗಲೂ ಅಷ್ಟೇನು ಜನಪ್ರಿಯತೆ ಪಡೆದುಕೊಂಡಿಲ್ಲ. ಹೂಡಿಕೆದಾರರಿಗೆ ಎನ್‌ಪಿಎಸ್ ಉತ್ಪನ್ನದ ಬಗ್ಗೆ ಇರುವ ಅರಿವಿನ ಕೊರತೆಯೇ ಇದಕ್ಕೆ ಪ್ರಮುಖ ಕಾರಣ. ಕಾರ್ಮಿಕರ ಭವಿಷ್ಯ ನಿಧಿಗೆ (ಪಿಎಫ್) ಸುಮಾರು 6 ಕೋಟಿ ಚಂದಾದಾರರಿದ್ದಾರೆ. ಮ್ಯೂಚುವಲ್ ಫಂಡ್‌ಗಳಲ್ಲಿ ಸುಮಾರು 3.77 ಕೋಟಿ ಹೂಡಿಕೆದಾರರಿದ್ದಾರೆ. ಇನ್ನು ಪಿಪಿಎಫ್, ಅಂದ್ರೆ ಸಾರ್ವಜನಿಕ ಭವಿಷ್ಯ ನಿಧಿಯಲ್ಲೂ ಸುಮಾರು 2.4 ಕೋಟಿ ಮಂದಿ ಹಣ ತೊಡಗಿಸಿದ್ದಾರೆ. ಆದ್ರೆ ಎನ್‌ಪಿಎಸ್ ಹೂಡಿಕೆದಾರರ ಸಂಖ್ಯೆ 46.4 ಲಕ್ಷ ಮಾತ್ರ(ಸರ್ಕಾರಿ ನೌಕರರನ್ನು ಹೊರತುಪಡಿಸಿ) ಇದೆ.

ಎನ್‌ಪಿಎಸ್ ಹೂಡಿಕೆ, ತೆರಿಗೆ ಅನುಕೂಲಗಳು: ಎನ್‌ಪಿಎಸ್ ಹೂಡಿಕೆಗೆ ಹಲವು ತೆರಿಗೆ ಅನುಕೂಲಗಳಿವೆ. ಆದಾಯ ತೆರಿಗೆಯ ಸೆಕ್ಷನ್ 80 ಸಿ ಅಡಿಯಲ್ಲಿ ₹ 1.5 ಲಕ್ಷದ ವರೆಗಿನ ಹೂಡಿಕೆಗೆ ತೆರಿಗೆ ವಿನಾಯಿತಿ ಸಿಗುತ್ತದೆ. ಹೆಚ್ಚುವರಿ ₹ 50 ಸಾವಿರದ ವರೆಗಿನ ಹೂಡಿಕೆಗೆ ಸೆಕ್ಷನ್ 80ಸಿಸಿಡಿ 1ಬಿ ಅಡಿಯಲ್ಲಿ ತೆರಿಗೆ ಅನುಕೂಲ ಲಭಿಸುತ್ತದೆ. ನಿಮ್ಮ ಮೂಲ ವೇತನದ ಶೇ 10 ರಷ್ಟು ಮೊತ್ತವನ್ನು ಎನ್ ಪಿಎಸ್‌ನಲ್ಲಿ ಹೂಡಿಕೆ ಮಾಡಿದರೆ ಸೆಕ್ಷನ್ 80 ಸಿಸಿಡಿ 2 ಅಡಿಯಲ್ಲಿ ತೆರಿಗೆ ವಿನಾಯಿತಿ ಸಿಗುತ್ತದೆ. ಆದರೆ 80 ಸಿಸಿಡಿ 2 ಸೆಕ್ಷನ್‌ನ ತೆರಿಗೆ ಲಾಭ ಪಡೆಯಲು ಹೂಡಿಕೆಯನ್ನು ನಿಮ್ಮ ಉದ್ಯೋಗದಾತ ಸಂಸ್ಥೆ ಮೂಲಕವೇ ಮಾಡಬೇಕು. ನೀವೇ ನೇರವಾಗಿ ಹೂಡಿಕೆ ಮಾಡಲು ಅವಕಾಶವಿರುವುದಿಲ್ಲ.

ಎಷ್ಟು ತೆರಿಗೆ ಉಳಿಸೋಕೆ ಸಾಧ್ಯ?: ಬಹುಪಾಲು ಮಂದಿ ಎನ್‌ಪಿಎಸ್‌ನ ತೆರಿಗೆ ಲಾಭಗಳನ್ನು ಅರಿಯದೆ ಅದರಿಂದ ದೂರ ಉಳಿಯುತ್ತಿದ್ದಾರೆ. ಉದಾಹರಣೆಗೆ, 44 ವರ್ಷದ ಹರ್ಷ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಆ ಕಂಪನಿಯಲ್ಲಿ ಸುಮಾರು 7 ವರ್ಷಗಳ ಹಿಂದೆಯೇ ಸೆಕ್ಷನ್ 80 ಸಿಸಿಡಿ 2 ಅಡಿಯಲ್ಲಿ ಎನ್‌ಪಿಎಸ್ ಹೂಡಿಕೆಗೆ ಅವಕಾಶ ಕಲ್ಪಿಸಿದ್ದರು. ಮಾನವ ಸಂಪನ್ಮೂಲ ವಿಭಾಗದವರೂ ಕೂಡ ಹರ್ಷಗೆ ಈ ಬಗ್ಗೆ ತಿಳಿಸಿದ್ದರು. ಆದರೆ ಹರ್ಷ ಎನ್‌ಪಿಎಸ್ ಹೂಡಿಕೆಗೆ ಗಮನ ಕೊಡಲಿಲ್ಲ. ಪರಿಣಾಮ ಹರ್ಷಾಗೆ 7 ವರ್ಷಗಳಲ್ಲಿ ಸುಮಾರು ₹ 3 ಲಕ್ಷ ತೆರಿಗೆ ಉಳಿಸಿಕೊಳ್ಳುವ ಅವಕಾಶ ತಪ್ಪಿ ಹೋಯಿತು. ಇದು ಹರ್ಷ ಅವರೊಬ್ಬರ ಕಥೆಯಲ್ಲ, ಬಹುಪಾಲು ಮಂದಿ ಹೀಗೆಯೇ ತಡ ಮಾಡಿ ನಷ್ಟ ಮಾಡಿಕೊಳ್ಳುತ್ತಾರೆ. ಹಾಗಾಗಿ ಎನ್‌ಪಿಎಸ್ ಬಗ್ಗೆ ಸಷ್ಟ ಅರಿವು ಹೊಂದುವುದು ಬಹಳ ಮುಖ್ಯ.

ಎನ್‌ಪಿಎಸ್ ಹೂಡಿಕೆಗೆ ಶುಲ್ಕ ಕಡಿಮೆ: ಮ್ಯೂಚುವಲ್ ಫಂಡ್‌ಗಳಲ್ಲಿ ಫಂಡ್ ವಾರ್ಷಿಕ ನಿರ್ವಹಣೆ ಶುಲ್ಕ ಶೇ 1.5 ರಿಂದ ಶೇ 2.5 ರ ವರೆಗೂ ಇರುತ್ತದೆ. ಆದರೆ ಎನ್‌ಪಿಎಸ್ ಹೂಡಿಕೆಯಲ್ಲಿ ವಾರ್ಷಿಕ ಫಂಡ್ ನಿರ್ವಹಣೆ ಶುಲ್ಕ ಗರಿಷ್ಠ ಶೇ 0.09 ರಷ್ಟು ಮಾತ್ರ. ಅಂದರೆ ನೀವು ರ₹ 1 ಲಕ್ಷ ಹೂಡಿಕೆ ಮಾಡಿದರೆ ವಾರ್ಷಿಕ ಫಂಡ್ ನಿರ್ವಹಣೆ ಶುಲ್ಕ ₹ 90 ಮಾತ್ರ. ಈ ಕಾರಣದಿಂದಾಗಿ ನಿವೃತ್ತಿಗಾಗಿ ಹೂಡಿಕೆ ಮಾಡುವವರಿಗೆ ಎನ್‌ಪಿಎಸ್ ಹೆಚ್ಚು ಆಕರ್ಷಕ ಎನಿಸುತ್ತಿದೆ.

ಎನ್‌ಪಿಎಸ್ ಹಣ ಎಲ್ಲಿ ಹೂಡಿಕೆಯಾಗುತ್ತದೆ?: ಎನ್‌ಪಿಎಸ್ ನಲ್ಲಿ ನೀವು ಹೂಡಿಕೆ ಮಾಡುವ ಮೊತ್ತವನ್ನು ಷೇರು ಮಾರುಕಟ್ಟೆ, ಸಾಲ ಪತ್ರಗಳು, ಸರ್ಕಾರಿ ಬಾಂಡ್ ಗಳು, ಕಾರ್ಪೊರೇಟ್ ಬಾಂಡ್ ಗಳಲ್ಲಿ ಹೂಡಿಕೆ ಮಾಡಲಾಗುತ್ತದೆ. ಯಾವ ರೀತಿಯ ಹೂಡಿಕೆಗೆ ಎಷ್ಟು ಮೊತ್ತ ಹೂಡಬೇಕು ಎನ್ನುವುದನ್ನು ನೀವು ತೀರ್ಮಾನಿಸಲು ಸಾಧ್ಯವಿದೆ. ನಿಮ್ಮ ಹೂಡಿಕೆ ಮೊತ್ತದ ಶೇ 75 ರಷ್ಟನ್ನು ಷೇರು ಮಾರುಕಟ್ಟೆಯಲ್ಲಿ ತೊಡಗಿಸುವಂತೆ ಸೂಚನೆ ಕೊಡಬಹುದು. ಯಾವ ಹೂಡಿಕೆಗೆ ಎಷ್ಟು ಮೊತ್ತ ಹಾಕಬೇಕು ಎನ್ನುವ ಸ್ಥಾಯಿ ಸೂಚನೆಯನ್ನು ವರ್ಷದಲ್ಲಿ ನಾಲ್ಕು ಬಾರಿ ಬದಲಿಸಬಹುದು.

(ಲೇಖಕಿ ಚಾರ್ಟರ್ಡ್ ಅಕೌಂಟೆಂಟ್)

ಅಲ್ಪ ಗಳಿಕೆ ಕಂಡ ಸೂಚ್ಯಂಕಗಳು

ಷೇರುಪೇಟೆ

ಮೇ 26 ರಿಂದ ಜೂನ್ 2ರವರೆಗಿನ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಅಲ್ಪ ಗಳಿಕೆ ದಾಖಲಿಸಿವೆ. 62,547 ಅಂಶಗಳಲ್ಲಿ ವಹಿವಾಟು ಮುಗಿಸಿದ ಸೆನ್ಸೆಕ್ಸ್, ವಾರದ ಅವಧಿಯಲ್ಲಿ 45.42 ಅಂಶಗಳಷ್ಟು ಗಳಿಸಿಕೊಂಡಿದೆ. 18,543 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ 34.75 ಅಂಶಗಳಷ್ಟು ಜಿಗಿದಿದೆ. ಜಿಡಿಪಿ ದರದಲ್ಲಿ ನಿರೀಕ್ಷೆಗೂ ಮೀರಿದ ಏರಿಕೆ, ಉತ್ಪಾದನಾ ವಲಯದಲ್ಲಿ ಕಂಡುಬಂದಿರುವ ಚೇತರಿಕೆ, ಉತ್ತಮ ಜಿಎಸ್ ಟಿ ಸಂಗ್ರಹ, ಮೇ ತಿಂಗಳ ವಾಹನ ಮಾರಾಟದಲ್ಲಿ ಗಣನೀಯ ಏರಿಕೆ ಸೇರಿ ಹಲವು ಅಂಶಗಳು ಮಾರುಕಟ್ಟೆ ಸುಧಾರಿಸಿಕೊಳ್ಳಲು ಕೊಡುಗೆ ನೀಡಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 4 ರಷ್ಟು ಗಳಿಸಿಕೊಂಡಿದೆ. ಮಾಧ್ಯಮ ಸೂಚ್ಯಂಕ ಶೇ 3, ಮತ್ತು ಆರೋಗ್ಯ ಸೂಚ್ಯಂಕ ಶೇ 2.5 ರಷ್ಟು ಹೆಚ್ಚಳ ಕಂಡಿವೆ. ಅನಿಲ ಮತ್ತು ತೈಲ ಸೂಚ್ಯಂಕ ಶೇ 2.7 ಮತ್ತು ಎನರ್ಜಿ ಸೂಚ್ಯಂಕ ಶೇ 2 ರಷ್ಟು ಕುಸಿದಿವೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 6,519.73 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶಿಯ ಸಾಂಸ್ಥಿಕ ಹೂಡಿಕೆದಾರರು ₹ 1,043.1 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಐಸಿಐಸಿಐ ಲೋಂಬಾರ್ಡ್ ಜನರಲ್ ಇನ್ಶುರೆನ್ಸ್, ನೈಕಾ, ಎಚ್‌ಡಿಎಫ್‌ಸಿ ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿ, ಜೊಮಾಟೊ ಮತ್ತು ಐಸಿಐಸಿಐ ಪ್ರೂಡೆನ್ಶಿಯಲ್ ಲೈಫ್ ಇನ್ಶೂರೆನ್ಸ್ ಕಂಪನಿಗಳು ಗಳಿಸಿಕೊಂಡಿವೆ. ಅದಾನಿ ಟೋಟಲ್ ಗ್ಯಾಸ್, ಅದಾನಿ ಟ್ರಾನ್ಸ್‌ಮಿಷನ್, ವೇದಾಂತ, ಆಯಿಲ್ ಅಂಡ್ ನ್ಯಾಚುರಲ್ ಗ್ಯಾಸ್ ಕಾರ್ಪೊರೇಷನ್, ಕೋಲ್ ಇಂಡಿಯಾ ಮತ್ತು ಅದಾನಿ ಎಂಟರ್ ಪ್ರೈಸಸ್ ಕುಸಿದಿವೆ.

ಮುನ್ನೋಟ: ಈ ವಾರ ಅಪೆಕ್ಸ್ ಕ್ಯಾಪಿಟಲ್ ಅಂಡ್ ಫೈನಾನ್ಸ್ ಲಿ., ಅನಿಕ್ ಇಂಡಸ್ಟ್ರೀಸ್ ಲಿ., ನ್ಯೂಟೈಮ್ ಇನ್ಫ್ರಾಸ್ಟ್ರಕ್ಚರ್ ಲಿ., ಎಸ್‌ಬಿಎಲ್ ಇನ್ಫ್ರಾ ಟೆಕ್ ಸೇರಿ ಕೆಲ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ. ಆರ್‌ಬಿಐ ಜೂನ್ 6 ರಿಂದ 8 ರ ತನಕ ಹಣಕಾಸು ಸಮಿತಿ ಸಭೆ ನಡೆಸಲಿದ್ದು ಬಡ್ಡಿ ದರಗಳನ್ನು ಯಥಾಸ್ಥಿತಿಯಲ್ಲಿಡುವ ನಿರೀಕ್ಷೆಯಿದೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಹಾಗೂ ದೇಶಿಯ ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

‘ವಿಡಾ ವಿ1 ಪ್ರೊ’ ಬೆಲೆ ₹ 6 ಸಾವಿರ ಏರಿಕೆ

ನವದೆಹಲಿ (ಪಿಟಿಐ): ಹೀರೊ ಮೋಟೊಕಾರ್ಪ್ ಕಂಪನಿಯು ತನ್ನ ವಿದ್ಯುತ್ ಚಾಲಿತ ಸ್ಕೂಟರ್ ‘ವಿಡಾ ವಿ1 ಪ್ರೊ’ ಬೆಲೆಯನ್ನು ₹ 6 ಸಾವಿರದಷ್ಟು ಹೆಚ್ಚಿಸಿದೆ.

ವಿದ್ಯುತ್ ಚಾಲಿತ ದ್ವಿಚಕ್ರ ವಾಹನಗಳಿಗೆ (ಇ.ವಿ) ಸಿಗುವ ಸಬ್ಸಿಡಿಯು ಜೂನ್ 1ರಿಂದ ಅನ್ವಯವಾಗುವಂತೆ ಕಡಿಮೆ ಆಗಿಗಿರುವುದರಿಂದ ಅದನ್ನು ಸರಿದೂಗಿಸಲು ಈ ಬೆಲೆ ಏರಿಕೆ ಮಾಡಲಾಗಿದೆ. ಇ-ಸ್ಕೂಟರ್‌ನ ಬೆಲೆಯು ಫೇಮ್-2 ಸಬ್ಸಿಡಿ ಮತ್ತು ಪೋರ್ಟೆಬಲ್ ಚಾರ್ಜರ್ ನೊಂದಿಗೆ ₹1,45,900ಕ್ಕೆ ಏರಿಕೆ ಆಗಿದೆ ಎಂದು ತಿಳಿಸಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹565
12 ಮೊಟ್ಟೆಗೆ	₹73
ಮೈಸೂರು	
100 ಮೊಟ್ಟೆಗೆ	₹572


ಭಾರತದ ಒಟ್ಟು ಆಮದಿನಲ್ಲಿ ರಷ್ಯಾ ಪಾಲು ಶೇ 42ರಷ್ಟು

ರಷ್ಯಾ ತೈಲ: ಹೆಚ್ಚುತ್ತಲೇ ಇದೆ ಆಮದು

ನವದೆಹಲಿ (ಪಿಟಿಐ): ಭಾರತವು ರಷ್ಯಾದಿಂದ ಆಮದು ಮಾಡಿಕೊಳ್ಳುವ ಕಚ್ಚಾ ತೈಲದ ಪ್ರಮಾಣವು ಮೇ ತಿಂಗಳಿನಲ್ಲಿ ಶೇ 15ರಷ್ಟು ಹೆಚ್ಚಾಗಿದೆ. ಸೌದಿ ಅರೇಬಿಯಾ, ಇರಾಕ್, ಯುಎಇ ಮತ್ತು ಅಮೆರಿಕದಿಂದ ಭಾರತಕ್ಕೆ ಆಮದಾಗುವ ಒಟ್ಟು ಪ್ರಮಾಣಕ್ಕಿಂತಲೂ ಹೆಚ್ಚಿನ ತೈಲವು ರಷ್ಯಾದಿಂದ ಆಮದಾಗುತ್ತಿದೆ ಎಂದು ಉದ್ಯಮ ವಲಯದ ಅಂಕಿ–ಅಂಶಗಳು ಹೇಳುತ್ತಿವೆ.

ಮೇ ತಿಂಗಳಿನಲ್ಲಿ ಭಾರತವು ರಷ್ಯಾದಿಂದ ಪ್ರತಿ ದಿನಕ್ಕೆ 19.6 ಲಕ್ಷ ಬ್ಯಾರಲ್ ತೈಲವನ್ನು ಆಮದು ಮಾಡಿಕೊಂಡಿದೆ. ಏಪ್ರಿಲ್‌ಗೆ ಹೋಲಿಸಿದರೆ ಶೇ 15ರಷ್ಟು ಹೆಚ್ಚಾಗಿದೆ ಎಂದು ಇಂಧನ ಸಾಗಣೆಯ ಅಂಕಿ–ಅಂಶಗಳನ್ನು ದಾಖಲಿಸುವ ವೊರ್ಟೆಕ್ಸಾ ಕಂಪನಿ ಹೇಳಿದೆ.

ಭಾರತವು ಮೇನಲ್ಲಿ ಆಮದು ಮಾಡಿಕೊಂಡಿರುವ ಕಚ್ಚಾ ತೈಲದಲ್ಲಿ ರಷ್ಯಾದ ಪಾಲು ಶೇ 42ರವರೆಗೆ ಇದೆ. ಈಚಿನ ವರ್ಷಗಳಲ್ಲಿ ದೇಶವೊಂದು ಹೊಂದಿರುವ ಅತಿ ಹೆಚ್ಚಿನ ಪಾಲು ಇದಾಗಿದೆ.



ಸೌದಿ ಅರೇಬಿಯಾದಿಂದ ಭಾರತಕ್ಕೆ ಆಮದಾಗುವ ತೈಲದ ಪ್ರಮಾಣವು ಮೇನಲ್ಲಿ 5.60 ಲಕ್ಷ ಟನ್‌ಗೆ ಇಳಿಕೆ ಆಗಿದ್ದು, 2021ರ ಫೆಬ್ರುವರಿ ನಂತರದ ಕನಿಷ್ಠ ಮಟ್ಟ ಇದಾಗಿದೆ.

ರಷ್ಯಾ–ಉಕ್ರೇನ್ ಸಮರ ಆರಂಭ ಆಗುವುದಕ್ಕೂ ಮೊದಲು ಭಾರತವು ಆಮದು ಮಾಡಿಕೊಳ್ಳುವ ಕಚ್ಚಾ ತೈಲದಲ್ಲಿ ಶೇ 90ರಷ್ಟು ಪಾಲು ಒಪೆಕ್‌ನಿಂದ ಪೂರೈಕೆ ಆಗುತ್ತಿತ್ತು. ಆದರೆ, ಫೆಬ್ರುವರಿಯಲ್ಲಿ ಉಕ್ರೇನ್ ಮೇಲೆ ರಷ್ಯಾ ಯುದ್ಧ ಆರಂಭಿಸಿದ ಬಳಿಕ ಪಾಶ್ಚಿಮಾತ್ಯ ದೇಶಗಳು ರಷ್ಯಾದ ಮೇಲೆ ಹಲವು ರೀತಿಯ ನಿರ್ಬಂಧಗಳನ್ನು ವಿಧಿಸಿದವು. ಇದರಿಂದಾಗಿ ಜಾಗತಿಕ ಮಾರುಕಟ್ಟೆಯ ದರಕ್ಕಿಂತ ಕಡಿಮೆ ಬೆಲೆಗೆ ರಷ್ಯಾ ದೇಶವು ಭಾರತಕ್ಕೆ ತೈಲ ಪೂರೈಕೆ ಆರಂಭಿಸಿತು. ಹೀಗಾಗಿ ಮೇನಲ್ಲಿ ಭಾರತಕ್ಕೆ ಪೂರೈಕೆ ಆಗಿರುವ ತೈಲದಲ್ಲಿ ಒಪೆಕ್ ಪಾಲು ಶೇ 39ಕ್ಕೆ ಇಳಿಕೆ ಕಂಡಿದೆ.

ಸಾಗರೋತ್ತರ ಕಾಂಗ್ರೆಸ್ ಔತಣಕೂಟದಲ್ಲಿ ರಾಹುಲ್ ಗಾಂಧಿ ಹೇಳಿಕೆ

‘ಭಾರತದ ಜನರು ಬಿಜೆಪಿ ಸೋಲಿಸಲಿದ್ದಾರೆ’



ರಾಹುಲ್

ನ್ಯೂಯಾರ್ಕ್ (ಪಿಟಿಐ): ‘ಕರ್ನಾಟಕದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನ ಗೆಲುವಿನ ಬಳಿಕ, ತೆಲಂಗಾಣ ಮತ್ತು ಇತರ ರಾಜ್ಯಗಳ ಚುನಾವಣೆಯಲ್ಲಿ ನಮ್ಮ ಪಕ್ಷವು ಬಿಜೆಪಿಯನ್ನು ಸೋಲಿಸಲಿದೆ. ದ್ವೇಷದಿಂದ ಕೂಡಿರುವ ಸಿದ್ಧಾಂತವನ್ನು ಬರೀ ಕಾಂಗ್ರೆಸ್ ಪಕ್ಷವಲ್ಲ, ಭಾರತದ ಜನರೇ ಸೋಲಿಸಲಿದ್ದಾರೆ’ ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಹೇಳಿದ್ದಾರೆ.

ನ್ಯೂಯಾರ್ಕ್‌ನಲ್ಲಿ ಭಾರತದ ಸಾಗರೋತ್ತರ ಕಾಂಗ್ರೆಸ್ (ಅಮೆರಿಕ) ಶನಿವಾರ ಆಯೋಜಿಸಿದ್ದ ಔತಣಕೂಟದಲ್ಲಿ ಪಾಲ್ಗೊಂಡಿದ್ದ ಅವರು, ‘ಬಿಜೆಪಿಯನ್ನು ಧ್ವಂಸ ಮಾಡಬಲ್ಲೆವು ಎಂದು ನಾವು ಕರ್ನಾಟಕದಲ್ಲಿ ತೋರಿಸಿದ್ದೇವೆ. ನಾವು ಅವರನ್ನು ಕೇವಲ ಸೋಲಿಸಿಲ್ಲ. ಅವರನ್ನು ನಾಶ ಮಾಡಿದ್ದೇವೆ’ ಎಂದು ತಿಳಿಸಿದ್ದಾರೆ.

‘ಕರ್ನಾಟಕದ ಚುನಾವಣೆಯಲ್ಲಿ ಬಿಜೆಪಿಯು ಮಾಧ್ಯಮಗಳು ಸೇರಿದಂತೆ ಎಲ್ಲವನ್ನೂ ತನ್ನ ಪರ ಮಾಡಿಕೊಳ್ಳಲು ಪ್ರಯತ್ನಿಸಿತು. ನಮಗಿಂತ ಹತ್ತು ಪಟ್ಟು ಹೆಚ್ಚಿನ ಹಣವನ್ನು ಅವರು ಹೊಂದಿದ್ದರು. ಅವರ ಬಳಿ ಸರ್ಕಾರವಿತ್ತು. ಅವರ ಬಳಿ ತನಿಖಾ ಸಂಸ್ಥೆಗಳೂ ಇದ್ದವು. ಅವರ ಬಳಿ ಎಲ್ಲವೂ ಇದ್ದವು. ಆದರೆ, ನಾವು ಅವರನ್ನು ಸೋಲಿಸಿದೆವು. ಮುಂದೆ ಅವರನ್ನು ನಾವು ತೆಲಂಗಾಣದಲ್ಲೂ ಸೋಲಿಸುತ್ತೇವೆ’ ಎಂದು ಹೇಳಿದರು.

‘ಕರ್ನಾಟಕದಲ್ಲಿ ಬಿಜೆಪಿಯು ಚುನಾವಣಾ ಸಂದರ್ಭದಲ್ಲಿ ಸಮುದಾಯಗಳ ನಡುವೆ ಕೋಮು ಧ್ರುವೀಕರಣಗೊಳಿಸಲು, ದ್ವೇಷ ಬಿತ್ತಲು ಪ್ರಯತ್ನಿಸಿತು. ಪ್ರಧಾನಿ ಅವರೇ ಇದಕ್ಕೆ ಪ್ರಯತ್ನಿಸಿದರು. ಆದರೆ, ಇದು ಕೆಲಸ ಮಾಡಿತೇ’ ಎಂದು ರಾಹುಲ್ ಸಭಿಕರನ್ನು ಪ್ರಶ್ನಿಸಿದಾಗ ಅವರು ‘ಇಲ್ಲ’ ಎಂದು ಉತ್ತರಿಸಿದರು.

‘ತೆಲಂಗಾಣದ ಚುನಾವಣೆಯ ಬಳಿಕ, ರಾಜಸ್ಥಾನ, ಮಧ್ಯಪ್ರದೇಶ ಮತ್ತು ಛತ್ತೀಸಗಢದಲ್ಲಿನ ಚುನಾವಣೆಯಲ್ಲೂ ನಾವು ಕರ್ನಾಟಕದಲ್ಲಿ ಮಾಡಿದಂತೆಯೇ ಮಾಡುತ್ತೇವೆ. ಕಾಂಗ್ರೆಸ್ ಪಕ್ಷವೊಂದೇ ಬಿಜೆಪಿಯನ್ನು ಸೋಲಿಸುವುದಿಲ್ಲ. ಬದಲಿಗೆ ಭಾರತದ ಜನರು, ಮಧ್ಯಪ್ರದೇಶ, ತೆಲಂಗಾಣ, ರಾಜಸ್ಥಾನ, ಛತ್ತೀಸಗಢದ ಜನರು ಬಿಜೆಪಿಯನ್ನು ಸೋಲಿಸಲಿದ್ದಾರೆ’ ಎಂದು ರಾಹುಲ್ ಹೇಳಿದಾಗ ಅಲ್ಲಿದ್ದವರು ಭಾರಿ ಚಪ್ಪಾಳೆಯ ಮೂಲಕ ಬೆಂಬಲ ವ್ಯಕ್ತಪಡಿಸಿದರು.

‘ಸಮಾಜದಲ್ಲಿ ಬಿಜೆಪಿ ಹರಡುತ್ತಿರುವ ದ್ವೇಷದ ರೂಪಕ ಅಥವಾ ಮಾದರಿ ಮುಂದುವರಿಯಲು ಸಾಧ್ಯವಿಲ್ಲ ಎಂದು ಭಾರತ ಅರ್ಥ ಮಾಡಿಕೊಂಡಿರುವುದೇ ಇದಕ್ಕೆ ಕಾರಣ. 2024ರ ಲೋಕಸಭಾ ಚುನಾವಣೆಯಲ್ಲೂ ಬಿಜೆಪಿ ಸೋಲಲಿದೆ. ಈ ದಿಸೆಯಲ್ಲಿ ನಾವೆಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡುತ್ತಿದ್ದೇವೆ. ಇದೊಂದು ಸೈದ್ಧಾಂತಿಕ ಹೋರಾಟ. ಒಂದೆಡೆ ಬಿಜೆಪಿಯ ವಿಭಜಕ, ದ್ವೇಷ ತುಂಬಿದ ಸಿದ್ಧಾಂತವಿದ್ದರೆ, ಮತ್ತೊಂದೆಡೆ ಕಾಂಗ್ರೆಸ್‌ನ ಪ್ರೀತಿ, ವಾತ್ಸಲ್ಯದ ಸಿದ್ಧಾಂತವಿದೆ’ ಎಂದರು.

‘ರಾಹುಲ್‌ಗೆ ತಂತ್ರಜ್ಞಾನದ ಆಳ ಜ್ಞಾನವಿದೆ’

ಸಿಲಿಕಾನ್ ವ್ಯಾಲಿ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ತಂತ್ರಜ್ಞಾನದ ಬಗ್ಗೆ ಆಳವಾದ ಜ್ಞಾನ ಇದೆ. ಸಾಮಾನ್ಯ ಮನುಷ್ಯನ ಮತ್ತು ಔದ್ಯೋಗಿಕ ಕ್ಷೇತ್ರದ ಮೇಲೆ ಅದು ಬೀರುವ ಪರಿಣಾಮವನ್ನು ವಿವರಿಸಲು ಸಮರ್ಥರಿದ್ದಾರೆ ಎಂದು ಸಿಲಿಕಾನ್ ವ್ಯಾಲಿಯ ಸ್ಟಾರ್ಟ್ ಅಪ್ ಫಿಕ್ಸ್‌ನಿಕ್ಸ್ ಸಂಸ್ಥಾಪಕ ಶಾನ್ ಶಂಕರನ್ ಹೇಳಿದ್ದಾರೆ.

ಕೃತಕ ಬುದ್ಧಿಮತ್ತೆ (ಎ.ಐ) ಮತ್ತು ಇತರ ಅತ್ಯಾಧುನಿಕ ತಂತ್ರಜ್ಞಾನಗಳ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಸಿಲಿಕಾನ್ ವ್ಯಾಲಿಯ ಸ್ಟಾರ್ಟ್ ಅಪ್ ಉದ್ಯಮಿಗಳ ಜತೆ ಅಮೆರಿಕ ಪ್ರವಾಸದಲ್ಲಿರುವ ರಾಹುಲ್ ಗಾಂಧಿಯವರಿಗಾಗಿ ಸಭೆಯನ್ನು ಭಾರತೀಯ ಅಮೆರಿಕನ್ ಉದ್ಯಮಿಯೂ ಆದ ಶಾನ್ ಶಂಕರನ್ ಆಯೋಜಿಸಿದ್ದರು.

ಕೃತಕ ಬುದ್ಧಿಮತ್ತೆಯಂತಹ ತಂತಜ್ಞಾನಗಳನ್ನು ನಿಷೇಧಿಸುವ ಬದಲು, ನಿಯಂತ್ರಿಸುವುದರ ಪರವಿದ್ದಾರೆ ರಾಹುಲ್ ಗಾಂಧಿ ಎಂದು ಶಂಕರನ್ ಅವರು ಹೇಳಿದ್ದಾರೆ.

‘ದೇಶದಿಂದ ಹೊರಗೆ ರಾಜಕೀಯ ಸಲ್ಲ’



ಎಸ್. ಜೈಶಂಕರ್

ಕೇಪ್‌ಟೌನ್ (ಪಿಟಿಐ): ‘ದೇಶದಿಂದ ಹೊರಗೆ ಕಾಲಿಟ್ಟಾಗ ಸಂಗತಿಗಳು ಕೆಲವೊಮ್ಮೆ ರಾಜಕೀಯಕ್ಕಿಂತ ದೊಡ್ಡದಿರುತ್ತವೆ’ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಹೇಳಿದರು. ಸದ್ಯ ಅಮೆರಿಕ ಪ್ರವಾಸದಲ್ಲಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮೇಲಿಂದ ಮೇಲೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಮತ್ತು ಕೇಂದ್ರ ಸರ್ಕಾರವನ್ನು ಟೀಕಿಸುತ್ತಿರುವ ಬೆನ್ನಲ್ಲೇ ಜೈಶಂಕರ್ ಹೀಗೆ ಹೇಳಿದರು.

ದಕ್ಷಿಣ ಆಫ್ರಿಕಾದ ಕೇಪ್‌ಟೌನ್‌ನಲ್ಲಿ ಶನಿವಾರ ನಡೆದ ‘ಬ್ರಿಕ್ಸ್’ ವಿದೇಶಾಂಗ ವ್ಯವಹಾರಗಳ ಸಚಿವರ ಸಭೆಯಲ್ಲಿ ಪಾಲ್ಗೊಂಡ ಬಳಿಕ ಅವರು ಭಾರತೀಯ ಸಮುದಾಯ ಆಯೋಜಿಸಿದ್ದ ಸಭೆಯಲ್ಲಿ ಪಾಲ್ಗೊಂಡಿದ್ದರು.

‘ವಿದೇಶ ಪ್ರವಾಸ ಕೈಗೊಂಡ ವೇಳೆ ನಾನು ನನ್ನ ವಿಚಾರಗಳ ಬಗ್ಗೆ ಮಾತನಾಡಬಹುದು. ಹೋದಲ್ಲಿ ರಾಜಕೀಯ ಮಾಡಲಾಗದು. ತಾಯ್ನೆಲದಲ್ಲಿ ನಾನು ಚರ್ಚೆಯಲ್ಲಿ ಪಾಲ್ಗೊಳ್ಳಲು ಸಮರ್ಪಕವಾಗಿ ತಯಾರಾಗಿರುತ್ತೇನೆ ಮತ್ತು ಹುರುಪಿನಿಂದ ವಾದಿಸುತ್ತೇನೆ. ಆದರೆ ವಿದೇಶದಲ್ಲಿ ಹಾಗೆ ಮಾಡಲಾಗುವುದಿಲ್ಲ’ ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸಂಕ್ಷಿಪ್ತ ಸುದ್ದಿ

ಕೇರಳಕ್ಕೆ ಮುಂಗಾರು ಪ್ರವೇಶ ವಿಳಂಬ

ನವದೆಹಲಿ (ಪಿಟಿಐ): ಕೇರಳಕ್ಕೆ ಈ ಬಾರಿ ನೈರುತ್ಯ ಮುಂಗಾರು ಮಾರುತಗಳ ಪ್ರವೇಶವು ಇನ್ನೂ ಮೂರು ಅಥವಾ ನಾಲ್ಕು ದಿನ ವಿಳಂಬವಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ(ಐಎಂಡಿ) ತಿಳಿಸಿದೆ.

ಜೂನ್ 1ರಂದು ಕೇರಳಕ್ಕೆ ಮುಂಗಾರು ಪ್ರವೇಶಿಸುವುದು ವಾಡಿಕೆ. ಈ ಬಾರಿ 4ರಂದು ಪ್ರವೇಶಿಸಲಿದೆ ಎಂದು ಇಲಾಖೆ ಹೇಳಿತ್ತು. ಅರಬ್ಬಿ ಸಮುದ್ರದ ದಕ್ಷಿಣ ಭಾಗದ ಮೇಲೆ ಪಶ್ಚಿಮ ಮಾರುತಗಳು ತೀವ್ರವಾಗಿ ಬೀಸುತ್ತಿವೆ. ಇದು ಮುಂಗಾರು ಆಗಮನದ ಮುನ್ಸೂಚನೆಯಾಗಿದೆ ಎಂದು ಇಲಾಖೆ ತಿಳಿಸಿದೆ.

ಬೆಟ್ಟ ಕುಸಿದು 14 ಮಂದಿ ಸಾವು

ಬೀಜಿಂಗ್ (ಪಿಟಿಐ): ಚೀನಾದ ಸಿಚುವಾನ್ ಪ್ರಾಂತ್ಯದ ಲೆಶನ್ ನಗರದಲ್ಲಿ ಭಾನುವಾರ ಬೆಟ್ಟವೊಂದು ಕುಸಿದು 14 ಮಂದಿ ಮೃತಪಟ್ಟಿದ್ದು, ಐವರು ನಾಪತ್ತೆಯಾಗಿದ್ದಾರೆ.

500 ಮಕ್ಕಳ ಹತ್ಯೆ: ಝೆಲೆನ್‌ಸ್ಕಿ

ಕೀವ್ (ಎಪಿ): ರಷ್ಯಾ ನಡೆಸುತ್ತಿರುವ ಯುದ್ಧ 16ನೇ ತಿಂಗಳಿಗೆ ಕಾಲಿಟ್ಟಿದ್ದು, ಈ ಯುದ್ಧದಲ್ಲಿ ಉಕ್ರೇನ್‌ನ ಸುಮಾರು 500 ಮಕ್ಕಳನ್ನು ರಷ್ಯಾ ಸೇನೆ ಕೊಂದಿದೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಭಾನುವಾರ ಹೇಳಿದರು.

ಇತ್ತೀಚಿನ ದಾಳಿಯಲ್ಲಿ ಮೃತಪಟ್ಟ 2 ವರ್ಷದ ಬಾಲಕಿಯ ಶವವನ್ನು ರಕ್ಷಣಾ ಸಿಬ್ಬಂದಿ ಪತ್ತೆ ಮಾಡಿದ ಬಳಿಕ ಅವರು ಈ ಮಾಹಿತಿ ಹಂಚಿಕೊಂಡಿದ್ದಾರೆ.

ಘಟನಾ ಸ್ಥಳಕ್ಕೆ ತೆರಳಿ ಮಾಹಿತಿ ಪಡೆದ ಕಾರ್ಮಿಕ ಸಚಿವ ಸಂತೋಷ್ ಲಾಡ್ ನೇತೃತ್ವದ ತಂಡ

‘ರೈಲು ಅಪಘಾತ: ಸಂತ್ರಸ್ತರಲ್ಲಿ ಕನ್ನಡಿಗರಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಡಿಶಾದ ಬಾಲಸೋರ್‌ನಲ್ಲಿ ಸಂಭವಿಸಿರುವ ರೈಲು ಅಪಘಾತದ ಸಂತ್ರಸ್ತರಲ್ಲಿ ಕರ್ನಾಟಕದ ಯಾರೊಬ್ಬರೂ ಪತ್ತೆಯಾಗಿಲ್ಲ ಎಂದು ದುರ್ಘಟನೆಯಲ್ಲಿ ತೊಂದರೆಗೆ ಒಳಗಾದ ಕನ್ನಡಿಗರನ್ನು ರಕ್ಷಿಸಿ ಕರೆತರಲು ನಿಯೋಜಿಸಿರುವ ರಕ್ಷಣಾ ತಂಡದ ಮುಖ್ಯಸ್ಥ, ಕಾರ್ಮಿಕ ಸಚಿವ ಸಂತೋಷ್ ಲಾಡ್ ತಿಳಿಸಿದ್ದಾರೆ.

‘ಘಟನಾ ಸ್ಥಳಕ್ಕೆ ತೆರಳಿ ಮಾಹಿತಿ ಪಡೆದಿದ್ದೇವೆ. ದುರ್ಘಟನೆಯಲ್ಲಿ ಗಾಯಗೊಂಡಿರುವವರನ್ನು ಬಾಲಸೋರ್ ಮತ್ತು ಭದ್ರಕ್ ಜಿಲ್ಲೆಗಳ ಐದು ಆಸ್ಪತ್ರೆಗಳಿಗೆ ದಾಖಲಿಸಿ, ಚಿಕಿತ್ಸೆ ನೀಡಲಾಗುತ್ತಿದೆ. ಮೃತದೇಹಗಳನ್ನೂ ಇದೇ ಆಸ್ಪತ್ರೆಗಳಲ್ಲಿ ಇರಿಸಲಾಗಿದೆ. ಐದೂ ಆಸ್ಪತ್ರೆಗಳಿಗೆ ನಮ್ಮ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿದೆ’ ಎಂದು ಅವರು ಭಾನುವಾರ ಪತ್ರಿಕಾ ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

‘ಗಾಯಾಳುಗಳು ಮತ್ತು ಮೃತಪಟ್ಟವರಲ್ಲಿ ಕರ್ನಾಟಕದ ವ್ಯಕ್ತಿಗಳು ಪತ್ತೆಯಾಗಿಲ್ಲ. ಒಡಿಶಾ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರ ಜತೆಗೂ ಸಭೆ ನಡೆಸಿದ್ದೇವೆ. ವೈದ್ಯಕೀಯ ನೆರವು ಸೇರಿದಂತೆ ಯಾವುದೇ ಬಗೆಯ ಸಹಾಯ ನೀಡಲು ಕರ್ನಾಟಕ ಸರ್ಕಾರ ಸಿದ್ಧವಿದೆ ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಂದೇಶವನ್ನು ತಲುಪಿಸಲಾಗಿದೆ’ ಎಂದು ತಿಳಿಸಿದ್ದಾರೆ.

ಆದರೆ, ಬೆಂಗಳೂರಿನ ಹೋಟೆಲ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದ ಪಶ್ಚಿಮ ಬಂಗಾಳದ ಕಾರ್ಮಿಕರೊಬ್ಬರು ಈ ಅಪಘಾತದಲ್ಲಿ ಮೃತಪಟ್ಟಿದ್ದಾರೆ.



ರೈಲು ಅಪಘಾತದಲ್ಲಿ ಮೃತಪಟ್ಟವರ ಫೋಟೊಗಳನ್ನು ಅಧಿಕಾರಿಗಳು ಭಾನುವಾರ ಪ್ರಕಟಿಸಿದ್ದು, ಜನ ತಮ್ಮವರ ಹುಡುಕಾಟದಲ್ಲಿ ತೊಡಗಿದ್ದರು –ಪಿಟಿಐ ಚಿತ್ರ

‘ಸುಪ್ರೀಂ’ಗೆ ಪಿಐಎಲ್ (ನವದೆಹಲಿ ವರದಿ, ಪಿಟಿಐ): ದುರಂತದ ಬಗ್ಗೆ ತನಿಖೆ ನಡೆಸಲು ನಿವೃತ್ತ ನ್ಯಾಯಮೂರ್ತಿ ನೇತೃತ್ವದ ತನಿಖಾ ಆಯೋಗ ರಚಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ಕೋರಿ ಸುಪ್ರೀಂ ಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗಿದೆ.

ವಕೀಲ ವಿಶಾಲ್ ತಿವಾರಿ ಪಿಐಎಲ್ ಸಲ್ಲಿಸಿದ್ದು, ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ತಕ್ಷಣವೇ ತಾಂತ್ರಿಕ ಪರಿಣತರನ್ನು ಒಳಗೊಂಡ ತಜ್ಞರ ಆಯೋಗ ರಚನೆಯಾಗಬೇಕು. ಈ ಆಯೋಗವು ಎರಡು ತಿಂಗಳಲ್ಲಿ ತನಿಖೆ ಮುಕ್ತಾಯಗೊಳಿಸಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಕೋಮು ಬಣ್ಣ-ಒಡಿಶಾ ಪೊಲೀಸರಿಂದ ಎಚ್ಚರಿಕೆ (ಭುವನೇಶ್ವರ ವರದಿ): ಬಾಲಸೋರ್ ರೈಲು ಅಪಘಾತಕ್ಕೆ ಕೋಮು ಬಣ್ಣ ಬಳಿಯದಂತೆ ಒಡಿಶಾ ಪೊಲೀಸರು ಸಮಾಜದ ಎಲ್ಲಾ ವರ್ಗಗಳಿಗೂ ಮನವಿ ಮಾಡಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಒಡಿಶಾ ಪೊಲೀಸ್, ‘ಕೆಲವು ಸಾಮಾಜಿಕ ಮಾಧ್ಯಮ ಖಾತೆಗಳಲ್ಲಿ ಬಾಲಸೋರ್ ರೈಲು ದುರಂತಕ್ಕೆ ಕೋಮು ಬಣ್ಣ ಬಳಿಯುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಇದು ಅತ್ಯಂತ ದುರದೃಷ್ಟಕರ. ಈ ರೀತಿಯ ದುರುದ್ದೇಶಪೂರಿತ ಪೋಸ್ಟ್‌ಗಳನ್ನು ಮಾಡದಂತೆ ಮನವಿ ಮಾಡುತ್ತೇವೆ. ಅಪಘಾತದ ಕುರಿತು ವದಂತಿ ಹಬ್ಬಿಸಿ ಕೋಮು ಸೌಹಾರ್ದ ಹಾಳುಮಾಡಲು ಪ್ರಯತ್ನಿಸುವವರ ವಿರುದ್ಧ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು’ ಎಂದಿದ್ದಾರೆ.

‘ಅಪಘಾತದಲ್ಲಿ ಚಾಲಕನ ತಪ್ಪಿಲ್ಲ’

ನವದೆಹಲಿ (ಪಿಟಿಐ): ‘ಕೋರೊಮಂಡಲ್ ಎಕ್ಸ್‌ಪ್ರೆಸ್ ಅತಿ ವೇಗದಲ್ಲಿ ಚಲಿಸುತ್ತಿರಲಿಲ್ಲ. ಗೂಡ್ಸ್ ರೈಲು ನಿಂತಿದ್ದ ಲೂಪ್ ಲೈನ್ ಪ್ರವೇಶಿಸಲು ಹಸಿರು ನಿಶಾನೆ ದೊರಕಿತ್ತು. ಅಪಘಾತದಲ್ಲಿ ಚಾಲಕನ ಲೋಪ ಇಲ್ಲ’ ಎಂದು ರೈಲ್ವೆ ಇಲಾಖೆ ಭಾನುವಾರ ತಿಳಿಸಿದೆ.

ರೈಲ್ವೆ ಮಂಡಳಿಯ ಇಬ್ಬರು ಪ್ರಮುಖ ಅಧಿಕಾರಿಗಳಾದ ಸಿಗ್ನಲಿಂಗ್‌ನ ಪ್ರಧಾನ ಕಾರ್ಯನಿರ್ವಾಹಕ ನಿರ್ದೇಶಕ ಸಂದೀಪ್ ಮಾಥುರ್ ಹಾಗೂ ಕಾರ್ಯಾಚರಣೆ ಮತ್ತು ವ್ಯವಹಾರ ಅಭಿವೃದ್ಧಿ ಸದಸ್ಯ ಜಯವರ್ಮ ಸಿನ್ಹಾ ಅವರು ಅಪಘಾತ ಹೇಗೆ ಸಂಭವಿಸಿರಬಹುದು ಎಂಬುದನ್ನು ವಿವರಿಸಿದ್ದಾರೆ.

‘ಕೋರೊಮಂಡಲ್ ಎಕ್ಸ್‌ಪ್ರೆಸ್ 128 ಕಿ.ಮೀ ವೇಗದಲ್ಲಿತ್ತು. ಬೆಂಗಳೂರು-ಹೌರಾ ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್ 126 ಕಿ.ಮೀ ವೇಗದಲ್ಲಿ ಚಲಿಸುತ್ತಿತ್ತು. ಎರಡೂ ರೈಲುಗಳಲ್ಲಿ ಅತಿಯಾದ ವೇಗದ ಪ್ರಶ್ನೆಯೇ ಇರಲಿಲ್ಲ. ಸಿಗ್ನಲಿಂಗ್ ಸಮಸ್ಯೆ ಇದೆ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ’ ಎಂದು ಸಿನ್ಹಾ ಹೇಳಿದರು.

‘ಕೋರೊಮಂಡಲ್ ಎಕ್ಸ್‌ಪ್ರೆಸ್ ರೈಲು ಗೂಡ್ಸ್ ರೈಲಿಗೆ ಡಿಕ್ಕಿ ಹೊಡೆದಿದೆ. ಈ ರಭಸಕ್ಕೆ ಅದರ ಬೋಗಿಗಳು ಹಳಿ ತಪ್ಪಿ ಮತ್ತೊಂದು ಹಳಿ ಮೇಲೆ ಬಿದ್ದಿದೆ’ ಎಂದು ಅವರು ಹೇಳಿದರು.

- ಅಪಘಾತಕ್ಕೀಡಾಗಿರುವ ರೈಲಿನಲ್ಲಿ ಟಿಕೆಟ್ ಇಲ್ಲದೆ ಪ್ರಯಾಣಿಸಿದ್ದವರಿಗೂ ಪರಿಹಾರ ಸಿಗಲಿದೆ ಎಂದು ರೈಲ್ವೆ ವಕ್ತಾರ ಅಮಿತಾಭ್ ಶರ್ಮಾ ಭಾನುವಾರ ತಿಳಿಸಿದ್ದಾರೆ.
- ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟೊನಿ ಬ್ಲಿಂಕನ್ ಅವರು ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರಿಗೆ ಕರೆ ಮಾಡಿ ರೈಲು ಅಪಘಾತದಲ್ಲಿ ಮಡಿದವರ ಸಂಬಂಧಿಕರಿಗೆ ಸಾಂತ್ವನ ಹೇಳಿದ್ದಾರೆ
- ಮೂರು ರೈಲು ಅಪಘಾತದ ಸಾವಿನ ಸಂಖ್ಯೆಯನ್ನು 288 ರಿಂದ 275ಕ್ಕೆ ಭಾನುವಾರ ಪರಿಷ್ಕರಿಸಲಾಗಿದೆ ಹಾಗೂ ಗಾಯಗೊಂಡವರ ಸಂಖ್ಯೆಯನ್ನು 1,175ಕ್ಕೆ ಒಡಿಶಾ ಸರ್ಕಾರ ಇಳಿಸಿದೆ.
- 123 ರೈಲುಗಳ ಸಂಚಾರ ರದ್ದಾಗಿದೆ. 56 ರೈಲುಗಳ ಸಂಚಾರದ ಮಾರ್ಗದಲ್ಲಿ ಬದಲಾವಣೆಯಾಗಿದೆ. 14 ರೈಲುಗಳ ಸಂಚಾರ ಸಮಯ ಮರು ನಿಗದಿಯಾಗಿದೆ. 10 ರೈಲುಗಳ ಸಮಯ ಅಲ್ಪಾವಧಿಗೆ ಮರು ನಿಗದಿಯಾಗಿದೆ
- ‘ರೈಲು ಅಪಘಾತಗಳನ್ನು ತಡೆಯುವ ಸಲುವಾಗಿ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಸಿಎಜಿ ಕಳೆದ ವರ್ಷದ ತನ್ನ ವರದಿಯಲ್ಲಿ ಕೆಲ ಸಲಹೆಗಳನ್ನು ನೀಡಿತ್ತು. ಆ ಸಲಹೆಗಳನ್ನು ಪಾಲನೆ ಮಾಡದ ಕಾರಣ ಅಪಘಾತ ಸಂಭವಿಸಿದೆ ಎಂಬುದು ಸ್ಪಷ್ಟವಾಗುತ್ತಿದೆ’ ಎಂದು ಎನ್‌ಸಿಪಿ ವಕ್ತಾರ ಕ್ಲಾಯ್ಡ್ ಕ್ರಾಸ್ಟೊ ಹೇಳಿಕೆಯಲ್ಲಿ ಟೀಕಿಸಿದ್ದಾರೆ.
- ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರು ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿ, ಅಪಘಾತದ ಬಳಿಕ ಕೈಗೊಂಡ ರಕ್ಷಣಾ ಕಾರ್ಯ ಸೇರಿದಂತೆ ವಸ್ತುಸ್ಥಿತಿ ಕುರಿತು ಮಾಹಿತಿ ನೀಡಿದರು.

‘ವಿಧ್ವಂಸಕ ಕೃತ್ಯದ ಶಂಕೆ’

ಒಂದನೇ ಪುಟದಿಂದ...

‘ಮೂರು ರೈಲುಗಳ ಅಪಘಾತಕ್ಕೂ, ಸುರಕ್ಷಾ ವ್ಯವಸ್ಥೆಯಾದ ‘ಕವಚ’ಕ್ಕೂ ಸಂಬಂಧ ಇಲ್ಲ. ಈ ಅಪಘಾತಕ್ಕೆ ಮೂಲ ಕಾರಣವನ್ನು ಪತ್ತೆ ಹಚ್ಚಲಾಗಿದ್ದು, ಹೆಚ್ಚಿನ ವಿವರಗಳನ್ನು ನೀಡಬಯಸುವುದಿಲ್ಲ’ ಎಂದರು.

ಸಿಬಿಐ ತನಿಖೆಗೆ ಶಿಫಾರಸು (ಭುವನೇಶ್ವರ ವರದಿ): ಬಾಲಸೋರ್ ಬಳಿ ಸಂಭವಿಸಿದ ರೈಲುಗಳ ಅಪಘಾತ ಕುರಿತು ಸಿಬಿಐ ತನಿಖೆಗೆ ಶಿಫಾರಸು ಮಾಡಲಾಗಿದೆ ಎಂದು ಸಚಿವ ಅಶ್ವಿನಿ ವೈಷ್ಣವ್ ಭುವನೇಶ್ವರದಲ್ಲಿ ಸುದ್ದಿಗಾರರಿಗೆ ತಿಳಿಸಿದರು.

‘ರೈಲುಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕೇಬಲ್‌ಗಳ ದುರಸ್ತಿ ಕಾರ್ಯ ಮುಂದುವರಿದಿದೆ. ಹೀಗಾಗಿ, ದುರಸ್ತಿ ಮಾಡಲಾದ ಎರಡು ಮಾರ್ಗಗಳಲ್ಲಿ ಸದ್ಯ ಡೀಸೆಲ್ ಚಾಲಿತ ರೈಲುಗಳು ಮಾತ್ರ ಸಂಚರಿಸಬಹುದು’ ಎಂದು ಅಧಿಕಾರಿಗಳು ಹೇಳಿದ್ದಾರೆ.

ಹೊರಗಿನವರ ಕೃತ್ಯ ಶಂಕೆ: ರೈಲುಗಳಿಗೆ ಸಿಗ್ನಲ್ ನೀಡುವುದು ಹಾಗೂ ರೈಲುಗಳ ಸುರಕ್ಷಿತ ಸಂಚಾರದಲ್ಲಿ ಎಲೆಕ್ಟ್ರಾನಿಕ್ ಇಂಟರ್‌ಲಾಕಿಂಗ್ ವ್ಯವಸ್ಥೆ ಹಾಗೂ ‘ಪಾಯಿಂಟ್ ಯಂತ್ರ’ ಮಹತ್ವದ ಪಾತ್ರ ವಹಿಸುತ್ತವೆ.

ಈ ವ್ಯವಸ್ಥೆಗಳ ಕಾರ್ಯದ ಬಗ್ಗೆ ರೈಲ್ವೆ ಅಧಿಕಾರಿಗಳು ದೆಹಲಿಯಲ್ಲಿ ವಿವರಣೆ ನೀಡಿದರು.

‘ಒಂದು ವೇಳೆ ಈ ವ್ಯವಸ್ಥೆಯು ವಿಫಲಗೊಂಡರೆ, ಎಲ್ಲ ಸಿಗ್ನಲ್‌ಗಳು ಅಪಾಯದ ಮುನ್ಸೂಚನೆ ನೀಡುತ್ತವೆ. ಎಲ್ಲ ರೈಲುಗಳ ಕಾರ್ಯಾಚರಣೆ ಸ್ಥಗಿತಗೊಳ್ಳುತ್ತದೆ. ಇಲ್ಲಿ ವ್ಯವಸ್ಥೆಯ ವೈಫಲ್ಯ ಕಂಡುಬಂದಿಲ್ಲ. ಹೀಗಾಗಿ, ಹೊರಗಿನವರ ಹಸ್ತಕ್ಷೇಪದ ಸಾಧ್ಯತೆಯನ್ನು ಅಲ್ಲಗಳೆಯಲಾಗದು’ ಎಂದು ರೈಲ್ವೆ ಮಂಡಳಿ ಸದಸ್ಯ (ಕಾರ್ಯಾಚರಣೆ ಮತ್ತು ವ್ಯವಹಾರ ಅಭಿವೃದ್ಧಿ) ಜಯವರ್ಮ ಸಿನ್ಹಾ ಹೇಳಿದರು.

‘ಕೃತಕ ಬುದ್ಧಿಮತ್ತೆ ಆಧಾರದಲ್ಲಿ ಕಾರ್ಯನಿರ್ವಹಿಸುವ ಎಲೆಕ್ಟ್ರಾನಿಕ್ ಇಂಟರ್‌ಲಾಕಿಂಗ್ ವ್ಯವಸ್ಥೆಯಲ್ಲಿ ಉದ್ದೇಶಪೂರ್ವಕವಾಗಿ ಬದಲಾವಣೆ ಮಾಡಿರುವ ಸಾಧ್ಯತೆ ಇದೆ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ, ರೈಲ್ವೆಯ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

ಹಳಿ ದುರಸ್ತಿ: ಚಲಿಸಿದ ಗೂಡ್ಸ್ ರೈಲು

ಬೆಂಗಳೂರು –ಹೌರಾ ಎಕ್ಸ್‌ಪ್ರೆಸ್ ರೈಲು ಅಪಘಾತಕ್ಕೀಡಾದ ಮಾರ್ಗದಲ್ಲಿಯೇ ಭಾನುವಾರ ರಾತ್ರಿ 10.40ಗಂಟೆಗೆ ವಿಶಾಖಪಟ್ಟಣದ ಬಂದರಿನಿಂದ ಕಲ್ಲಿದ್ದಲು ತುಂಬಿದ್ದ ಗೂಡ್ಸ್ ರೈಲು ರೂರ್ಕೆಲಾ ಉಕ್ಕು ಸ್ಥಾವರದತ್ತ ಸಂಚರಿಸಿತು.

ಅಪಘಾತ ಸಂಭವಿಸಿದ 51 ಗಂಟೆಗಳ ಬಳಿಕ ಈ ಮಾರ್ಗದಲ್ಲಿ ಸಂಚರಿಸಿದ ಮೊದಲ ರೈಲು ಇದಾಗಿದೆ ಎಂದು ರೈಲ್ವೆ ಸಚಿವರು ಟ್ವೀಟ್ ಮಾಡಿದ್ದಾರೆ.

ಲೈವ್ ಲೊಕೇಷನ್ ಕಳಿಸಿದ್ದ ಯೋಧ


ಭುವನೇಶ್ವರ/ನವದೆಹಲಿ (ಪಿಟಿಐ): ರಾಷ್ಟ್ರೀಯ ವಿಪತ್ತು ನಿರ್ವಹಣಾ ದಳದ (ಎನ್‌ಡಿಆರ್‌ಎಫ್) ಯೋಧ ಎನ್.ಕೆ ವೆಂಕಟೇಶ್ ಎಂಬವರು ಬಾಲಸೋರ್‌ನಲ್ಲಿ ಸಂಭವಿಸಿದ ರೈಲು ದುರಂತದ ಕುರಿತು ಅಧಿಕಾರಿಗಳಿಗೆ ಮೊದಲು ಮಾಹಿತಿ ನೀಡಿದ ವ್ಯಕ್ತಿ. ಅವರ ಸಮಯಪ್ರಜ್ಞೆಯಿಂದಾಗಿ ದುರಂತ ಸ್ಥಳಕ್ಕೆ ರಕ್ಷಣಾ ಪಡೆಗಳು ಶೀಘ್ರ ತಲುಪಲು ಸಾಧ್ಯವಾಯಿತು.

ಕೋಲ್ಕತ್ತದ ಎನ್‌ಡಿಆರ್‌ಎಫ್‌ನ 2ನೇ ಬೆಟಾಲಿಯನ್‌ನ ಯೋಧ ವೆಂಕಟೇಶ್ ಎನ್.ಕೆ. (39) ಅವರು ತಮಿಳುನಾಡಿನ ತಂಜಾವೂರಿನವರು. ಅವರು ಶುಕ್ರವಾರ ಪಶ್ಚಿಮ ಬಂಗಾಳದ ಹೌರಾದಿಂದ ತಮಿಳುನಾಡಿಗೆ ಕೋರೊಮಂಡಲ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಪ್ರಯಾಣಿಸುತ್ತಿದ್ದರು. ಹವಾನಿಯಂತ್ರಿತ ಬೋಗಿಯಲ್ಲಿದ್ದ ಅವರು ಅಪಘಾತದಲ್ಲಿ ಸ್ವಲ್ಪದರಲ್ಲೇ ಪಾರಾಗಿದ್ದಾರೆ. ಅಪಘಾತ ಸಂಭವಿಸಿದ ಕೆಲವೇ ಕ್ಷಣಗಳಲ್ಲಿ ಅವರು ಸುಬೇದಾರ್ ಮೇಜರ್ ಅವರಿಗೆ ಕರೆ ಮಾಡಿ ರೈಲು ಅಪಘಾತದ ತೀವ್ರತೆ ಕುರಿತು ಮಾಹಿತಿ ನೀಡಿದ್ದಾರೆ. ಜೊತೆಗೆ, ಸ್ಥಳದ ಲೈವ್ ಲೊಕೇಷನ್ ಅನ್ನು ವಾಟ್ಸ್‌ಆ್ಯಪ್ ಮೂಲಕ ಕಳುಹಿಸಿದ್ದಾರೆ.

‘ಸುಬೇದಾರ್ ಮೇಜರ್ ಅವರು ಒಡಿಶಾದ ಎನ್‌ಡಿಆರ್‌ಎಫ್ ಬೆಟಾಲಿಯನ್‌ಗೆ ಕೂಡಲೇ ಮಾಹಿತಿ ನೀಡಿದರು. ಇದರಿಂದಾಗಿ ದುರಂತ ಸಂಭವಿಸಿದ ಒಂದು ಗಂಟೆಯೊಳಗೆ ಅಗ್ನಿಶಾಮಕ ದಳ, ಎನ್‌ಡಿಆರ್‌ಎಫ್ ಸಿಬ್ಬಂದಿ ಸ್ಥಳಕ್ಕೆ ತಲುಪಲು ಸಾಧ್ಯವಾಯಿತು’ ಎಂದು ವೆಂಕಟೇಶ್ ಹೇಳಿದರು.

ಅಪಘಾತ: ಸಚಿವರ ನಡೆ

ನವದೆಹಲಿ: ಬಾಲಸೋರ್ ರೈಲು ದುರಂತದ ನೈತಿಕ ಹೊಣೆ ಹೊತ್ತು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ರಾಜೀನಾಮೆ ನೀಡಬೇಕು ಎಂದು ವಿರೋಧ ಪಕ್ಷಗಳು ಆಗ್ರಹಿಸಿವೆ. ಈ ಹಿಂದೆ ಇಂಥದ್ದೇ ಅಪಘಾತಗಳು ಸಂಭವಿಸಿದಾಗ ಲಾಲ್ ಬಹದ್ದೂರ್ ಶಾಸ್ತ್ರಿ ಮತ್ತು ನಿತೀಶ್ ಕುಮಾರ್ ಮಾತ್ರ ರಾಜೀನಾಮೆ ಸಲ್ಲಿಸಿದ್ದರು.



ಲಾಲ್ ಬಹದ್ದೂರ್ ಶಾಸ್ತ್ರಿ: 1956ರಲ್ಲಿ ಅಪಘಾತಗಳ ನಂತರ ಎರಡು ಬಾರಿ ರಾಜೀನಾಮೆ ಸಲ್ಲಿಸಿದ್ದರು. 112 ಜನರ ಸಾವಿಗೆ ಕಾರಣವಾದ ಮೆಹಬೂಬ್ ನಗರ ಅಪಘಾತದ ಬಳಿಕ 1956ರ ಆಗಸ್ಟ್‌ನಲ್ಲಿ ಅವರು ರಾಜೀನಾಮೆ ನೀಡಿದಾಗ, ಪ್ರಧಾನಿ ಜವಾಹರಲಾಲ್ ನೆಹರೂ ಅದನ್ನು ಸ್ವೀಕರಿಸಲು ನಿರಾಕರಿಸಿದ್ದರು. ಮೂರು ತಿಂಗಳ ನಂತರ ನವೆಂಬರ್‌ನಲ್ಲಿ ಅರಿಯಲೂರಿನಲ್ಲಿ ನಡೆದ ಮತ್ತೊಂದು ಅಪಘಾತದಲ್ಲಿ 144 ಜನರು ಮೃತಪಟ್ಟರು. ಆಗ, ಶಾಸ್ತ್ರಿ ಅವರು ‘ನಾನು ಹೊಂದಿರುವ ಹುದ್ದೆಯನ್ನು ಸದ್ದಿಲ್ಲದೆ ತೊರೆದರೆ ಒಳ್ಳೆಯದು’ ಎಂದು ರಾಜೀನಾಮೆಯಲ್ಲಿ ಬರೆದಿದ್ದರು. ನೆಹರೂ ಒಲ್ಲದ ಮನಸ್ಸಿನಿಂದ ಒಪ್ಪಿಕೊಂಡರು.



ನಿತೀಶ್ ಕುಮಾರ್: 1999ರಲ್ಲಿ ಗಸೈಲ್ (ಅಸ್ಸಾಂ) ಅಪಘಾತದಲ್ಲಿ 290 ಜನರು ಪ್ರಾಣ ಕಳೆದುಕೊಂಡ ನಂತರ ರಾಜೀನಾಮೆ ನೀಡಿದರು. ಆದಾಗ್ಯೂ, ಎರಡು ವರ್ಷಗಳ ನಂತರ ಅವರು ಮತ್ತೆ ರೈಲ್ವೆ ಸಚಿವರಾದರು.



ಮಮತಾ ಬ್ಯಾನರ್ಜಿ: 2000ರಲ್ಲಿ ಪಂಜಾಬ್‌ನಲ್ಲಿ ಸಂಭವಿಸಿದ ರೈಲು ಅಪಘಾತದಲ್ಲಿ 43 ಮಂದಿ ಮೃತಪಟ್ಟ ಬಳಿಕ ರಾಜೀನಾಮೆ ನೀಡಲು ಮುಂದಾಗಿದ್ದರು. ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ರಾಜೀನಾಮೆ ಸ್ವೀಕರಿಸಲು ನಿರಾಕರಿಸಿದ್ದರು. ನಂತರ ಅವರು ಯುಪಿಎ ಸರ್ಕಾರದಲ್ಲಿ ರೈಲ್ವೆ ಸಚಿವರಾಗಿದ್ದರು. ಆದರೆ, ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಲು ರಾಜೀನಾಮೆ ನೀಡಿದರು.



ಸುರೇಶ್ ಪ್ರಭು: ಸರಣಿ ಅಪಘಾತಗಳ ನಂತರ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಲು ಮುಂದಾದರು. ಆದರೆ, ಅದನ್ನು ತಿರಸ್ಕರಿಸಲಾಯಿತು. ಕಾನ್ಪುರದ ಬಳಿ ಪಟ್ನಾ ಇಂದೋರ್ ಎಕ್ಸ್‌ಪ್ರೆಸ್ ಹಳಿ ತಪ್ಪಿ 150 ಜನರು ಮೃತಪಟ್ಟರು. ಅವರನ್ನು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯಕ್ಕೆ ವರ್ಗಾಯಿಸಲಾಯಿತು.



ರಾಮ್ ವಿಲಾಸ್ ಪಾಸ್ವಾನ್: 1997ರಲ್ಲಿ ಹಿಮಸಾಗರ್ ಮತ್ತು ಕರ್ನಾಟಕ ಎಕ್ಸ್‌ಪ್ರೆಸ್ ರೈಲು ಡಿಕ್ಕಿ ಹೊಡೆದ ನಂತರ ರಾಜೀನಾಮೆ ನೀಡಲಿಲ್ಲ. ‘ಚಾಲಕ ಮತ್ತೊಂದು ರೈಲಿಗೆ ಡಿಕ್ಕಿ ಹೊಡೆದರೆ ಅದು ರೈಲ್ವೆ ಸಚಿವರ ತಪ್ಪಲ್ಲ. ಕಾರು ಅಪಘಾತದ ನಂತರ ಮುಖ್ಯಮಂತ್ರಿಗಳು ರಾಜೀನಾಮೆ ನೀಡುತ್ತಾರೆಯೇ’ ಎಂದು ಪ್ರಶ್ನಿಸಿದ್ದರು.

ಮಣಿಪುರ ಗಲಭೆ: ಹೈಕೋರ್ಟ್ ನಿವೃತ್ತ ಸಿಜೆಗೆ ತನಿಖೆ ಹೊಣೆ

ನವದೆಹಲಿ(ಪಿಟಿಐ): ಮಣಿಪುರದಲ್ಲಿ ನಡೆದ ಹಿಂಸಾಚಾರದ ಬಗ್ಗೆ ತನಿಖೆ ನಡೆಸಲು ಗುವಾಹಟಿ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಅಜೈ ಲಂಬಾ ನೇತೃತ್ವದಡಿ ಮೂವರು ಸದಸ್ಯರನ್ನು ಒಳಗೊಂಡ ನ್ಯಾಯಾಂಗ ಆಯೋಗ ರಚಿಸಿ ಕೇಂದ್ರ ಸರ್ಕಾರ ಭಾನುವಾರ ಅಧಿಕೃತವಾಗಿ ಆದೇಶ ಹೊರಡಿಸಿದೆ.

ನಿವೃತ್ತ ಐಎಎಸ್ ಅಧಿಕಾರಿ ಹಿಮಾಂಶು ಶೇಖರ್ ದಾಸ್ ಹಾಗೂ ನಿವೃತ್ತ ಐಪಿಎಸ್ ಅಧಿಕಾರಿ ಅಲೋಕ್ ಪ್ರಭಾಕರ್ ಈ ಆಯೋಗದ ಇತರೆ ಸದಸ್ಯರಾಗಿದ್ದಾರೆ.

ಮೇ 3ರಿಂದ ಮಣಿಪುರದಲ್ಲಿ ಮೈತೇಯಿ ಮತ್ತು ಕುಕಿ ಸಮುದಾಯದ ನಡುವಣ ನಡೆದ ಸರಣಿ ಹಿಂಸಾಚಾರದ ಬಗ್ಗೆ ಆಯೋಗವು ತನಿಖೆ ನಡೆಸಲಿದೆ. ವಿವಿಧ ಸಮುದಾಯದ ಜನರನ್ನು ಗುರಿಯಾಗಿಸಿಕೊಂಡು ನಡೆದ ಹಿಂಸಾಚಾರಕ್ಕೆ ನೈಜ ಕಾರಣ ಏನೆಂಬುದರ ಬಗ್ಗೆ ತನಿಖೆ ನಡೆಸಲಿದೆ ಎಂದು ಕೇಂದ್ರ ಗೃಹ ಸಚಿವಾಲಯ ತಿಳಿಸಿದೆ.

ಹಿಂಸಾಚಾರ ಉಲ್ಬಣಕ್ಕೆ ಕಾರಣವಾದ ಅಂಶಗಳೇನು, ಸರ್ಕಾರಿ ಸಂಸ್ಥೆಗಳು ಅಥವಾ ಅಧಿಕಾರಿಗಳ ವೈಫಲ್ಯ, ಘರ್ಷಣೆ ತಡೆಗೆ ಆಡಳಿತಾತ್ಮಕವಾಗಿ ಕೈಗೊಂಡ ಕ್ರಮಗಳ ಬಗ್ಗೆ ತನಿಖೆ ನಡೆಸಲಿದೆ. ಸಂತ್ರಸ್ತರು ಅಥವಾ ಸಂಘ–ಸಂಸ್ಥೆಗಳ ಅಹವಾಲು ಆಲಿಸಲಿದೆ. ತನಿಖೆ ಆರಂಭಿಸಿದ ಆರು ತಿಂಗಳೊಳಗೆ ಆಯೋಗವು ಕೇಂದ್ರಕ್ಕೆ ವರದಿ ಸಲ್ಲಿಸಬೇಕಿದೆ. ಆದರೆ, ಈ ಅವಧಿಗೂ ಮೊದಲು ಮಧ್ಯಂತರ ವರದಿ ಸಲ್ಲಿಸುವ ನಿರೀಕ್ಷೆಯಿದೆ.

ಇಲ್ಲಿಯವರೆಗೆ ಹಿಂಸಾಚಾರದಿಂದ 80 ನಾಗರಿಕರು ಮೃತಪಟ್ಟಿದ್ದಾರೆ.

ಹೆದ್ದಾರಿ ತಡೆ ತಾತ್ಕಾಲಿಕ ಹಿಂತೆಗೆತ: ಗೃಹ ಸಚಿವ ಅಮಿತ್ ಶಾ ಅವರ ಮನವಿ ಮಾಡಿದ ಬೆನ್ನಲ್ಲೇ, ಕುಕಿ ಗುಂಪುಗಳು ರಾಷ್ಟ್ರೀಯ ಹೆದ್ದಾರಿ -2 ಬಂದ್ ಮಾಡಿರುವುದನ್ನು ತಾತ್ಕಾಲಿಕವಾಗಿ ಭಾನುವಾರ ಹಿಂದಕ್ಕೆ ಪಡೆದವು.

ಕುಸಿದುಬಿದ್ದ ಬೃಹತ್ ಸೇತುವೆ

ಸುಲ್ತಾನ್‌ಗಂಜ್ (ಬಿಹಾರ): ಬಾಗಲ್ಪುರ ಜಿಲ್ಲೆಯಲ್ಲಿ ಗಂಗಾ ನದಿಗೆ ಅಡ್ಡಲಾಗಿ ನಿರ್ಮಿಸಲಾಗುತ್ತಿದ್ದ ಅಂದಾಜು ₹1,700 ಕೋಟಿ ವೆಚ್ಚದ ನಾಲ್ಕು ಪಥಗಳ ಬೃಹತ್ ಸೇತುವೆ ಭಾನುವಾರ ಸಂಜೆ 6 ಗಂಟೆ ಸುಮಾರಿಗೆ ಕುಸಿದುಬಿದ್ದಿದೆ. ನಿರ್ಮಾಣ ಹಂತದ ಸೇತುವೆ ವರ್ಷ ತುಂಬುವುದರಲ್ಲಿ ಕುಸಿದು ಬಿದ್ದಿರುವುದು ಇದು ಎರಡನೇ ಬಾರಿ. ಕಳೆದ ಡಿಸೆಂಬರ್‌ನಲ್ಲಿ ಎರಡು ತುಂಡಾಗಿ ಬಿದ್ದಿತ್ತು.

ಸೇತುವೆ ಗಂಗಾನದಿಯಲ್ಲಿ ಕುಸಿದುಬೀಳುವ ದೃಶ್ಯವನ್ನು ಸ್ಥಳೀಯರು ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದಾರೆ. ಈ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ. ಯಾವುದೇ ಸಾವು– ನೋವು ಸಂಭವಿಸಿದ ಬಗ್ಗೆ ವರದಿಯಾಗಿಲ್ಲ. ಮುಖ್ಯಮಂತ್ರಿ ತನಿಖೆಗೆ ಆದೇಶಿಸಿದ್ದಾರೆ ಎಂದು ‘ಎನ್‌ಡಿಟಿವಿ’ ವರದಿ ಮಾಡಿದೆ.



ಬಾಗಲ್ಪುರದಲ್ಲಿ ಗಂಗಾ ನದಿಗೆ ಅಡ್ಡಲಾಗಿ ನಿರ್ಮಾಣ ಹಂತದಲ್ಲಿದ್ದ ನಾಲ್ಕು ಪಥಗಳ ಬೃಹತ್ ಸೇತುವೆ ಭಾನುವಾರ ಕುಸಿದಿದೆ –ಪಿಟಿಐ ಚಿತ್ರ

ಸುಲ್ತಾನ್‌ಗಂಜ್ ಮತ್ತು ಖಗಾಡಿಯಾ ಜಿಲ್ಲೆಗಳನ್ನು ಸಂಪರ್ಕಿಸುವ ಈ ಸೇತುವೆಯನ್ನು ನಿರ್ಮಾಣ ಹಂತದಲ್ಲಿರುವಾಗಲೇ ಮುಖ್ಯಮಂತ್ರಿ ನಿತೀಶ್ ಕುಮಾರ್ 2014ರಲ್ಲಿ ಉದ್ಘಾಟಿಸಿದ್ದರು.

ಜ್ಞಾನವಾಪಿ: ಹಿಂದೆ ಸರಿದ ಹಿಂದೂ ಅರ್ಜಿದಾರ

ವಾರಾಣಸಿ (ಪಿಟಿಐ): ಜ್ಞಾನವಾಪಿ-ಶೃಂಗಾರ ಗೌರಿ ವಿವಾದಕ್ಕೆ ಸಂಬಂಧಿಸಿ ವಿವಿಧ ನ್ಯಾಯಾಲಯಗಳಲ್ಲಿ ಹಾಕಿದ್ದ ಅರ್ಜಿಗಳನ್ನು ವಾಪಾಸು ಪಡೆಯುವುದಾಗಿ ಮುಖ್ಯ ಅರ್ಜಿದಾರ ಜಿತೇಂದ್ರ ಸಿಂಗ್ ವಿಸೇನ್ ಅವರು ಘೋಷಿಸಿದ್ದಾರೆ.

ವಿಶ್ವ ವೇದಿಕ್ ಸಂಸ್ಥಾನದ ಮುಖ್ಯಸ್ಥ ಜಿತೇಂದ್ರ ಸಿಂಗ್ ವಿಸೇನ್ ಅವರು ಶನಿವಾರ ತಮ್ಮ ಹೇಳಿಕೆ ಬಿಡುಗಡೆ ಮಾಡಿದ್ದಾರೆ. ಈ ಹಿಂದೆ ವಿಸೇನ್ ಅವರ ವಕೀಲರೂ ಈ ಪ್ರಕರಣದಿಂದ ಹಿಂದೆ ಸರಿದಿದ್ದರು.

‘ಹಿಂದೂ ಪರವಾಗಿ ಇರುವವರೂ ನನಗೆ ಹಿಂಸೆ ನೀಡುತ್ತಿದ್ದಾರೆ. ಜೊತೆಗೆ ಇನ್ನೂ ಹಲವರಿಂದ ಹಿಂಸೆ ಆಗುತ್ತಿದೆ. ಆದ್ದರಿಂದ ನಾನು ಹಾಗೂ ನನ್ನ ಕುಟುಂಬದವರು (ಪತ್ನಿ ಕಿರಣ್ ಸಿಂಗ್ ಮತ್ತು ಸೊಸೆ ರಾಖಿ ಸಿಂಗ್) ಈ ಪ್ರಕರಣದಿಂದ ಹಿಂದೆ ಸರಿಯುತ್ತಿದ್ದೇವೆ’ ಎಂದು ವಿಸೇನ್ ಅವರು ಹೇಳಿದ್ದಾರೆ.

‘ದೇಶ ಹಾಗೂ ಧರ್ಮದ ಹಿತಾಸಕ್ತಿಯ ಹಿನ್ನೆಲೆಯಲ್ಲಿ ನಾವು ಅರ್ಜಿ ಸಲ್ಲಿಸಿದ್ದೆವು. ಹಿಂಸೆಯನ್ನು ತಾಳಿಕೊಳ್ಳುವ ಶಕ್ತಿ ಮತ್ತು ಸಂಪನ್ಮೂಲ ನಮ್ಮ ಬಳಿ ಇಲ್ಲ. ‘ಧರ್ಮ’ಕ್ಕಾಗಿ ಹೋರಾಡುವ ಶಕ್ತಿ ಇನ್ನು ಉಳಿದಿಲ್ಲ’ ಎಂದು ವಿಸೇನ್ ಹೇಳಿದ್ದಾರೆ.

ನಟಿ ಸುಲೋಚನಾ ನಿಧನ



ಮುಂಬೈ: ಬಾಲಿವುಡ್ ನಟಿ ಸುಲೋಚನಾ ಲಾಟ್ಕರ್ (94) ಅವರು ಮುಂಬೈನ ಖಾಸಗಿ ಆಸ್ಪತ್ರೆಯಲ್ಲಿ ಭಾನುವಾರ ನಿಧನರಾದರು.

ಹಿಂದಿ, ಮರಾಠಿ ಭಾಷೆಯ 250ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದರು. 1928ರ ಜುಲೈ 30ರಂದು ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಖಡಕ್ಲಾತ ಗ್ರಾಮದಲ್ಲಿ ಜನಿಸಿದ್ದ ಅವರು, 1946ರಲ್ಲಿ ಚಿತ್ರರಂಗಕ್ಕೆ ಪದಾರ್ಪಣೆ ಮಾಡಿದ್ದರು. ಅಶೋಕ್‌ಕುಮಾರ್, ದಿಲೀಪ್‌ಕುಮಾರ್, ರಾಜ್‌ಕಪೂರ್ ಹಾಗೂ ದೇವಾನಂದ್ ಸೇರಿದಂತೆ ಖ್ಯಾತನಟರೊಂದಿಗೆ ನಟಿಸಿದ್ದರು. 1999ರಲ್ಲಿ ಪದ್ಮಶ್ರೀ ಪುರಸ್ಕಾರಕ್ಕೆ ಭಾಜನರಾಗಿದ್ದ ಅವರಿಗೆ 2004ರಲ್ಲಿ ಫಿಲ್ಮ್‌ಫೇರ್ ಜೀವಮಾನ ಸಾಧನೆ ಪ್ರಶಸ್ತಿ ಲಭಿಸಿತ್ತು. 2008ರಲ್ಲಿ ಮಹಾರಾಷ್ಟ್ರ ಸರ್ಕಾರವು ಅತ್ಯುನ್ನತ ‘ಮಹಾರಾಷ್ಟ್ರ ಭೂಷಣ’ ಪ್ರಶಸ್ತಿ ನೀಡಿ ಗೌರವಿಸಿತ್ತು.

ಸುಳ್ಳುಪತ್ತೆ ಪರೀಕ್ಷೆ ವರದಿ ಕೂಡ ಸಾಕ್ಷ್ಯವೇ ಆಗಿದೆ: ‘ಸುಪ್ರೀಂ’

ನವದೆಹಲಿ: ಪ್ರಕರಣವೊಂದರಲ್ಲಿ ವ್ಯಕ್ತಿಯನ್ನು ತಪ್ಪಿತಸ್ಥ ಎಂದು ಪರಿಗಣಿಸಲು ಆತನ ಮೇಲೆ ನಡೆಸುವ ಸುಳ್ಳು ಪತ್ತೆ ಪರೀಕ್ಷೆ, ಮಂಪರು ಪರೀಕ್ಷೆ ಸೇರಿದಂತೆ ಮನೋವೈಜ್ಞಾನಿಕ ವಿಶ್ಲೇಷಣೆಗಳು ಸಾಕಾಗದಿರಬಹುದು. ಆದರೆ ಅವು ಕೂಡ ಸಾಕ್ಷ್ಯವೇ ಆಗಿವೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಅಭಯ್ ಎಸ್.ಓಕಾ ಮತ್ತು ರಾಜೇಶ್ ಬಿಂದಲ್ ಅವರಿದ್ದ ನ್ಯಾಯಪೀಠ ಈ ಮಾತು ಹೇಳಿದೆ.



ಹೈದರಾಬಾದ್‌ನಲ್ಲಿ ಭಾನುವಾರ ಹಮ್ಮಿಕೊಂಡಿದ್ದ 24ನೇ ಲಿಂಗಾಯತ ಮಹಾ ರ್‍ಯಾಲಿಯಲ್ಲಿ ಅಪಾರ ಸಂಖ್ಯೆಯ ಜನ ಪಾಲ್ಗೊಂಡಿದ್ದರು

ಹೈದರಾಬಾದ್‌ನಲ್ಲಿ ಲಿಂಗಾಯತ ಮಹಾರ್‍ಯಾಲಿ

ಸ್ವತಂತ್ರ ಧರ್ಮದ ಮಾನ್ಯತೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೀದರ್: ಲಿಂಗಾಯತಕ್ಕೆ ಸ್ವತಂತ್ರ ಧರ್ಮದ ಸಾಂವಿಧಾನಿಕ ಮಾನ್ಯತೆ ನೀಡಬೇಕು. ಅಲ್ಪಸಂಖ್ಯಾತರ ಸ್ಥಾನಮಾನ ಕೊಡಬೇಕು. ತೆಲಂಗಾಣದಲ್ಲಿ ಇತರೆ ಹಿಂದುಳಿದ ವರ್ಗದವರ (ಒಬಿಸಿ) ಪಟ್ಟಿಗೆ ಸೇರಿಸಬೇಕೆಂದು ಆಗ್ರಹಿಸಿ ಲಿಂಗಾಯತ ಸಮನ್ವಯ ಸಮಿತಿಯಿಂದ ಹೈದರಾಬಾದ್‌ನಲ್ಲಿ ಭಾನುವಾರ 24ನೇ ಲಿಂಗಾಯತ ಮಹಾ ರ್‍ಯಾಲಿ ಹಮ್ಮಿಕೊಳ್ಳಲಾಗಿತ್ತು.

ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಕರ್ನಾಟಕ, ತೆಲಂಗಾಣ ಸೇರಿದಂತೆ ವಿವಿಧ ಕಡೆಗಳಿಂದ ಅಪಾರ ಸಂಖ್ಯೆಯಲ್ಲಿ ಬಂದಿದ್ದ ಲಿಂಗಾಯತರು ಹೈದರಾಬಾದ್‌ನ ನಾಂಪಲ್ಲಿ ಸಮೀಪದ ವಸ್ತು ಪ್ರದರ್ಶನ ಕೇಂದ್ರದಲ್ಲಿ ಸೇರಿದರು. ‘ಕೊಡಲೇಬೇಕು, ಕೊಡಲೇಬೇಕು ಲಿಂಗಾಯತಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ಕೊಡಲೇಬೇಕು’ ಎಂದು ಘೋಷಣೆಗಳನ್ನು ಹಾಕುತ್ತ, ಷಟಸ್ಥಲ ಚಿಹ್ನೆ ಹೊಂದಿದ ಕೇಸರಿ ಧ್ವಜ, ಟೋಪಿ ಧರಿಸಿ ಹೆಜ್ಜೆ ಹಾಕಿದರು. ಅಲ್ಲಿಂದ ಪ್ರಮುಖ ಮಾರ್ಗಗಳ ಮೂಲಕ ವಿಧಾನಸೌಧದವರೆಗೆ ರ್‍ಯಾಲಿ ನಡೆಸಿ, ನಂತರ ಮನವಿ ಪತ್ರ ಸಲ್ಲಿಸಿದರು.

ಲಿಂಗಾಯತಕ್ಕೆ ಸ್ವತಂತ್ರ ಧರ್ಮದ ಸಾಂವಿಧಾನಿಕ ಮಾನ್ಯತೆ ನೀಡಬೇಕೆಂದು ತೆಲಂಗಾಣ ಸರ್ಕಾರವು, ಕೇಂದ್ರಕ್ಕೆ ಶಿಫಾರಸು ಮಾಡಬೇಕು. ತೆಲಂಗಾಣ ವಿಧಾನಸೌಧದ ಆವರಣದಲ್ಲಿ ಬಸವೇಶ್ವರರ ಪ್ರತಿಮೆ ಸ್ಥಾಪಿಸಬೇಕು. ಪ್ರತಿಯೊಂದು ಗ್ರಾಮಗಳಲ್ಲಿ ಲಿಂಗಾಯತರಿಗೆ ಸ್ಮಶಾನಭೂಮಿ ಮೀಸಲಿಡಬೇಕು. ಬಸವೇಶ್ವರ ಆರ್ಥಿಕ ಅಭಿವೃದ್ಧಿ ನಿಗಮ ಸ್ಥಾಪಿಸಬೇಕು. ಪ್ರತಿ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಬಸವ ಮಂಟಪ ಸ್ಥಾಪಿಸಬೇಕೆಂದು ಒತ್ತಾಯಿಸಿದರು.

ವೇದಿಕೆ ಕಾರ್ಯಕ್ರಮದಲ್ಲಿ ಕೇಂದ್ರ ಪ್ರವಾಸೋದ್ಯಮ ಸಚಿವ ಜಿ. ಕಿಶನ್ ರೆಡ್ಡಿ, ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ರಾಜ್ಯ ಸಚಿವ ಭಗವಂತ ಖೂಬಾ, ಬೀದರ್ ದಕ್ಷಿಣ ಕ್ಷೇತ್ರದ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ, ಲಿಂಗಾಯತ ಧರ್ಮ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಚನ್ನಬಸವಾನಂದ ಸ್ವಾಮೀಜಿ, ಬಸವಕಲ್ಯಾಣ ಅನುಭವ ಮಂಟಪದ ಬಸವಲಿಂಗ ಪಟ್ಟದ್ದೇವರು, ಕೂಡಲಸಂಗಮ ಬಸವಧರ್ಮ ಪೀಠದ ಮಾತೆ ಗಂಗಾದೇವಿ, ಬೀದರ್‌ನ ಅಕ್ಕ ಅನ್ನಪೂರ್ಣ, ಅಕ್ಕ ಗಂಗಾಂಬಿಕೆ, ಹುಲಸೂರಿನ ಶಿವಾನಂದ ಸ್ವಾಮೀಜಿ, ಭಾಲ್ಕಿ ಹಿರೇಮಠದ ಗುರುಬಸವ ಪಟ್ಟದ್ದೇವರು, ಹೈದರಾಬಾದಿನ ಅನಿಮಿಷಾನಂದ ಸ್ವಾಮೀಜಿ, ರಾಷ್ಟ್ರೀಯ ಬಸವ ದಳದ ಅಧ್ಯಕ್ಷ ಬಸವರಾಜ ಧನ್ನೂರ, ಭಾರತೀಯ ಬಸವ ಬಳಗದ ಅಧ್ಯಕ್ಷ ಬಾಬು ವಾಲಿ, ತೆಲಂಗಾಣ ಬಸವ ದಳದ ಅಧ್ಯಕ್ಷ ಶಂಕ್ರೆಪ್ಪ ಪಾಟೀಲ, ಪ್ರಮುಖರಾದ ರಾಜೇಂದ್ರ ಗಂದಗೆ, ಬಿ.ಜಿ. ಶೆಟಕಾರ, ಬಸವರಾಜ ಬುಳ್ಳಾ, ರಾಜಾಸಿಂಗ್, ಬಿ.ವಿ. ಪಾಟೀಲ ಜಹೀರಾಬಾದ್, ಸುರೇಶ ಶೆಟಕಾರ ಇತರರಿದ್ದರು.

ಹೆಚ್ಚುವರಿ ಆಯ್ಕೆ ಪಟ್ಟಿ ಗೊಂದಲ: ಮುಖ್ಯಮಂತ್ರಿ ಮಧ್ಯಪ್ರವೇಶಕ್ಕೆ ಆಗ್ರಹ

ಕೆಪಿಎಸ್‌ಸಿ ತಿಕ್ಕಾಟ: ಅಭ್ಯರ್ಥಿಗಳ ಪೀಕಲಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಹುದ್ದೆಗಳಿಗೆ ಅಭ್ಯರ್ಥಿಗಳ ನೇಮಕಾತಿ ನಿಯಮಗಳ ಅನುಷ್ಠಾನ ವಿಚಾರದಲ್ಲಿ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಮತ್ತು ಆಯೋಗದ ಕಾರ್ಯದರ್ಶಿ ನಡುವೆ ಒಮ್ಮತ ಮೂಡದ ಕಾರಣ 133 ಇಲಾಖೆಗಳಿಗೆ ಹೆಚ್ಚುವರಿ ಪಟ್ಟಿಯಿಂದ ಆಯ್ಕೆ ನಿರೀಕ್ಷೆಯಲ್ಲಿರುವ ಸುಮಾರು 3,000 ಅಭ್ಯರ್ಥಿಗಳ ಭವಿಷ್ಯ ಅತಂತ್ರವಾಗಿದೆ.

ಕೆಪಿಎಸ್‌ಸಿ ನಡೆಸುವ ನೇಮಕಾತಿ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಆಯೋಗದ ಅಧ್ಯಕ್ಷರು ಮತ್ತು ಕಾರ್ಯದರ್ಶಿ ನಡುವೆ ಹಲವು ತಿಂಗಳುಗಳಿಂದ ತಿಕ್ಕಾಟ ನಡೆಯುತ್ತಿದೆ. ಹೆಚ್ಚುವರಿ ಆಯ್ಕೆ ಪಟ್ಟಿ ಪ್ರಕಟಿಸುವ ಕುರಿತ ಗೊಂದಲ ಪರಿಹರಿಸುವಂತೆ ಅಭ್ಯರ್ಥಿಗಳು ಈಗಾಗಲೇ ಮುಖ್ಯ ಕಾರ್ಯದರ್ಶಿಗೆ ದೂರು ನೀಡಿದ್ದಾರೆ. ಕೆಪಿಎಸ್‌ಸಿ ಸ್ವಾಯತ್ತ ಸಂಸ್ಥೆ ಆಗಿರುವುದರಿಂದ ಈ ವಿಚಾರದಲ್ಲಿ ಮುಖ್ಯಮಂತ್ರಿ ಮಧ್ಯ ಪ್ರವೇಶಿಸಿ ಗೊಂದಲಕ್ಕೆ ತಾರ್ಕಿಕ ಅಂತ್ಯ ಕಾಣಿಸಬೇಕು ಎಂದು ಅಭ್ಯರ್ಥಿಗಳು ಆಗ್ರಹಿಸಿದ್ದಾರೆ.

> **ಹೆಚ್ಚುವರಿ ಆಯ್ಕೆ ಪಟ್ಟಿ ಕುರಿತು ಡಿಪಿಎಆರ್‌ನಿಂದ ಸ್ಪಷ್ಟೀಕರಣ ಬಂದಿದೆ. ಅದನ್ನು ಆಯೋಗದ ಗಮನಕ್ಕೆ ತಂದಿದ್ದೇನೆ. ನಿಯಮದ ಪ್ರಕಾರ ಪಟ್ಟಿ ತಯಾರಿಸಲಾಗಿದೆ**
>
> **ಸುರಳ್ಕರ್ ವಿಕಾಸ್ ಕಿಶೋರ್**
> ಕಾರ್ಯದರ್ಶಿ, ಕೆಪಿಎಸ್‌ಸಿ

ಏನಿದು ಹೆಚ್ಚುವರಿ ಪಟ್ಟಿ ಪ್ರಕರಣ: ಕೆಪಿಎಸ್‌ಸಿ 2017ರಿಂದ 2022ರ ವರೆಗೆ ನಡೆಸಿದ 133 ಇಲಾಖೆಗಳ ತಾಂತ್ರಿಕ, ತಾಂತ್ರಿಕೇತರ, ಎಫ್‌ಡಿಎ, ಎಸ್‌ಡಿಎ, ವಸತಿ ಶಾಲೆ ಶಿಕ್ಷಕರು, ಮೌಲಾನ ಆಜಾದ್ ಶಿಕ್ಷಕರು ಸೇರಿದಂತೆ ಗ್ರೂಪ್ ‘ಬಿ’, ‘ಸಿ’ ಮತ್ತು ‘ಡಿ’ ಹುದ್ದೆಗಳಿಗೆ ‘ಕರ್ನಾಟಕ ಸಿವಿಲ್ ಸೇವಾ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಗಳು 2006 ಮತ್ತು ತಿದ್ದುಪಡಿ ನಿಯಮಗಳು (2015 ಡಿ. 31)’ ಪ್ರಕಾರ ಅಂತಿಮ ಆಯ್ಕೆ ಪಟ್ಟಿಯ ಜೊತೆಗೆ ಹೆಚ್ಚುವರಿ ಆಯ್ಕೆ ಪಟ್ಟಿ ಪ್ರಕಟಿಸಬೇಕು. ಈ ಹೆಚ್ಚುವರಿ ಪಟ್ಟಿ ಒಂದೂವರೆ ವರ್ಷ ಅಥವಾ ಕೆಲವು ಇಲಾಖೆಗಳಲ್ಲಿ ಮುಂದಿನ ನೇಮಕಾತಿವರೆಗೂ ಚಾಲ್ತಿಯಲ್ಲಿರುತ್ತದೆ.

ಆದರೆ, ಕೆಪಿಎಸ್‌ಸಿ 2017ರಲ್ಲಿ ಈ ನಿಯಮ ಅಳವಡಿಸಿಕೊಳ್ಳುವ ಬದಲು ನಿರ್ಣಯವೊಂದನ್ನು ತೆಗೆದುಕೊಂಡು, ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸಿದ ದಿನದಿಂದ ಒಂದೂವರೆ ವರ್ಷದ ಒಳಗೆ ನೇಮಕಾತಿ ಪ್ರಾಧಿಕಾರಗಳು ಖಾಲಿ ಹುದ್ದೆಗಳ ಕುರಿತು ಪ್ರಸ್ತಾವನೆ (ನಮೂನೆ-7) ಸಲ್ಲಿಸಿದರೆ ಹೆಚ್ಚುವರಿ ಪಟ್ಟಿಯನ್ನು ಸಿದ್ಧಪಡಿಸಲು ಕ್ರಮ ಕೈಗೊಂಡಿದೆ. ಆದರೆ, ಕೋವಿಡ್ ಕಾರಣದಿಂದ 2020 ಮತ್ತು 2021ರಲ್ಲಿ ಕಾಲಮಿತಿ ಒಳಗೆ ಖಾಲಿ ಹುದ್ದೆಗಳ ಪ್ರಸ್ತಾವನೆ ಸಲ್ಲಿಸಲು ಇಲಾಖೆಗಳಿಗೆ ಸಾಧ್ಯವಾಗಿಲ್ಲ. ಆದ್ದರಿಂದ, ಆಯೋಗವು ಹಲವು ಇಲಾಖೆಗಳು ಸಲ್ಲಿಸಿದ್ದ ಖಾಲಿ ಹುದ್ದೆಗಳ ಪಟ್ಟಿಯನ್ನು ತಿರಸ್ಕರಿಸಿ ಸಂಬಂಧಪಟ್ಟ ಇಲಾಖೆಗಳಿಗೆ ಮರಳಿಸಿದೆ.

ಇದನ್ನು ಪ್ರಶ್ನಿಸಿ ಕೆಲವು ಅಭ್ಯರ್ಥಿಗಳು ನ್ಯಾಯಾಲಯದ ಮೆಟ್ಟಿಲೇರಿದ್ದರು. ನ್ಯಾಯಾಲಯವು ನಿಯಮದ ಪ್ರಕಾರ ಅಂತಿಮ ಆಯ್ಕೆ ಪಟ್ಟಿಯ ಜೊತೆಗೇ ಹೆಚ್ಚುವರಿ ಪಟ್ಟಿಯನ್ನು ಆಯೋಗ ಸಿದ್ಧಪಡಿಸದಿರುವುದರಿಂದ ಪ್ರಸ್ತುತ ಹೆಚ್ಚುವರಿ ಪಟ್ಟಿ ಸಿದ್ಧಪಡಿಸುವಂತೆ ಆದೇಶಿಸಿದೆ.

ಈ ಮಧ್ಯೆ, ಕೋವಿಡ್ ಕಾರಣಕ್ಕೆ ನಿಯಮ ಸಡಿಲಿಸಿ, ಹೆಚ್ಚುವರಿ ಆಯ್ಕೆ ಪಟ್ಟಿ ಸಲ್ಲಿಕೆಯ ಅವಧಿಯನ್ನು 2023ರ ಫೆ. 28 ರವರೆಗೆ ವಿಸ್ತರಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಆದೇಶ ಹೊರಡಿಸಿತ್ತು. ಆದರೆ, ಕಾರ್ಯಭಾರ ಒತ್ತಡದ ಕಾರಣದಿಂದ ಈ ಅವಧಿಯ ಒಳಗೆ ಎಲ್ಲ ಹೆಚ್ಚುವರಿ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸಿ ಆಯೋಗಕ್ಕೆ ಸಲ್ಲಿಸಲು ಕೆಪಿಎಸ್‌ಸಿಗೆ ಸಾಧ್ಯವಾಗಿಲ್ಲ. ಇದು ಎಲ್ಲ ಗೊಂದಲಗಳಿಗೆ ಕಾರಣವಾಗಿದೆ.

ಈ ಗೊಂದಲ ಬಗ್ಗೆ ಪ್ರತಿಕ್ರಿಯೆ ಪಡೆಯಲು ಕೆಪಿಎಸ್‌ಸಿ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ ಅವರನ್ನು ಸಂಪರ್ಕಿಸಲು ಯತ್ನಿಸಿದರೂ ಅವರು ಕರೆ ಸ್ವೀಕರಿಸಲಿಲ್ಲ.

98 ಇಲಾಖೆಗಳಿಂದ ಖಾಲಿ ಹುದ್ದೆ ಪ್ರಸ್ತಾವ

ಹೆಚ್ಚುವರಿ ಆಯ್ಕೆ ಪಟ್ಟಿ ಸಲ್ಲಿಕೆ ಅವಧಿಯನ್ನು ಡಿಪಿಎಆರ್ ವಿಸ್ತರಿಸಿದ ಕಾರಣ 98 ಇಲಾಖೆಗಳು ಖಾಲಿ ಹುದ್ದೆಗಳ ಪ್ರಸ್ತಾವನೆಯನ್ನು ಕೆಪಿಎಸ್‌ಸಿಗೆ ಸಲ್ಲಿಸಿವೆ. ಆ ಪೈಕಿ, 84 ಇಲಾಖೆಗಳ ಖಾಲಿ ಹುದ್ದೆಗಳಿಗೆ ಹೆಚ್ಚುವರಿ ಪಟ್ಟಿಯನ್ನು ಆಯೋಗ ಈಗಾಗಲೇ ಸಿದ್ಧಪಡಿಸಿದೆ. ಒಟ್ಟು 133 ಇಲಾಖೆಗಳ ಹೆಚ್ಚುವರಿ ಪಟ್ಟಿಯ ಪೈಕಿ ಈಗಾಗಲೇ 75 ಪಟ್ಟಿಗೆ ಆಯೋಗ ಅನುಮೋದನೆ ನೀಡಿದೆ. 12 ಹೆಚ್ಚುವರಿ ಪಟ್ಟಿಗೆ ಅನುಮೋದನೆ ನೀಡದೆ ಕಾರ್ಯದರ್ಶಿಗೆ ವಾಪಸ್ ಮಾಡಿದೆ. ಇನ್ನೂ 31 ಹೆಚ್ಚುವರಿ ಪಟ್ಟಿ ಸಿದ್ಧವಾಗಿದ್ದು, ಆಯೋಗಕ್ಕೆ ಸಲ್ಲಿಕೆ ಆಗಬೇಕಿದೆ. ಆದರೆ, ಯಾವುದೇ ಹೆಚ್ಚುವರಿ ಪಟ್ಟಿಯಿಂದ ಹೆಚ್ಚುವರಿ ಆಯ್ಕೆ ಪಟ್ಟಿಯಲ್ಲಿ ಸಿದ್ಧಪಡಿಸಿಲ್ಲ ಎಂದು ಕೆಪಿಎಸ್‌ಸಿ ಮೂಲಗಳು ತಿಳಿಸಿವೆ.

‘ಇಂಡಿಯನ್ ಒಪೀನಿಯನ್’ ಪತ್ರಿಕೆಯ 120ನೇ ವರ್ಷಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಆಫ್ರಿಕಾದಲ್ಲಿ ಮಹಾತ್ಮ ಗಾಂಧಿ ಅವರು ಪ್ರಾರಂಭಿಸಿದ ‘ಇಂಡಿಯನ್ ಒಪೀನಿಯನ್’ ಪತ್ರಿಕೆಗೆ ಈಗ 120 ವರ್ಷಗಳ ಸಂಭ್ರಮ. 1903ರ ಜೂನ್ 4 ರಂದು ಗಾಂಧೀಜಿ ಅವರು ಈ ಪತ್ರಿಕೆಯನ್ನು ಪ್ರಾರಂಭಿಸಿದ್ದರು.

ದಕ್ಷಿಣ ಆಫ್ರಿಕಾದ ಡರ್ಬನ್‌ನ ಹೊರವಲಯದಲ್ಲಿರುವ ಫೀನಿಕ್ಸ್ ಪ್ರದೇಶದ ಬೆಟ್ಟದ ತುದಿಯಲ್ಲಿರುವ ಕಟ್ಟಡದಲ್ಲಿ ‘ಇಂಡಿಯನ್ ಒಪೀನಿಯನ್’ ಪತ್ರಿಕೆ ಆರಂಭಿಸಲಾಗಿತ್ತು. ಈ ಕಟ್ಟಡದ ಆವರಣದಲ್ಲೇ ವಾರ್ಷಿಕೋತ್ಸವ ಸಮಾರಂಭ ನೆರವೇರಿತು.

ಸಮಾರಂಭದಲ್ಲಿ ಮಾತನಾಡಿದ ಗಾಂಧೀಜಿ ಮೊಮ್ಮಗಳು ಇಳಾ ಗಾಂಧಿ ಅವರು, ಪತ್ರಿಕೆ ಪ್ರಾರಂಭದ ಅಗತ್ಯದ ಕುರಿತ ಚಾರಿತ್ರಿಕ ನೆನಪುಗಳನ್ನು ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ಹಾಜರಿದ್ದ ದಕ್ಷಿಣ ಆಫ್ರಿಕಾದ ಖ್ಯಾತ ತತ್ವಜ್ಞಾನಿ, ಶಿಕ್ಷಣತಜ್ಞ, ಕಾದಂಬರಿಕಾರ ಮತ್ತು ಕವಿ ಜಾನ್ ಲಂಗಾಲಿಬಾಲೆ ಡ್ಯೂಬ್ ಅವರ ಮೊಮ್ಮಗ ಲಂಗಾ ಡ್ಯೂಬ್ ಅವರು, ತಮ್ಮ ತಾತನಿಗೂ ಹಾಗೂ ಗಾಂಧೀಜಿ ಅವರಿಗೂ ಇದ್ದ ಸ್ನೇಹವನ್ನು ಸ್ಮರಿಸಿದರು.

ಕಾನ್ಸುಲೇಟ್ ರಾಹುಲ್ ಕೆ.ಸಿ., ಕರ್ನಾಟಕದವರಾದ ನರೇಂದ್ರ, ಸುಜಾತ, ವಿಶುಕುಮಾರ್, ಎಸ್. ಜಿ. ಸಿದ್ದರಾಮಯ್ಯ, ತಮಿಳುನಾಡಿನ ಅಣ್ಣಾಮಲೈ ಭಾಗವಹಿಸಿದ್ದರು. ಕಾರ್ಯಕ್ರಮದ ವೇದಿಕೆಯು ಕೋರ್ಟ್‌ನ ಕಟಕಟೆಯ ಮಾದರಿಯಲ್ಲಿದ್ದು, ಅತಿಥಿಗಳು ಕಟಕಟೆಯಲ್ಲಿ ನಿಂತೇ ಮಾತನಾಡಿದರು.

ಫ್ರೆಂಚ್ ಓಪನ್: ದಾಖಲೆಯ 17ನೇ ಬಾರಿ ಎಂಟರ ಘಟ್ಟ ಪ್ರವೇಶಿಸಿದ ಸರ್ಬಿಯದ ಆಟಗಾರ

ಕ್ವಾರ್ಟರ್‌ಗೆ ಜೊಕೊ, ಅಲ್ಕರಾಜ್

ಪ್ಯಾರಿಸ್ (ರಾಯಿಟರ್ಸ್/ ಎಎಫ್‌ಪಿ): ದಾಖಲೆಯ 23ನೇ ಗ್ರ್ಯಾನ್ ಸ್ಲಾಮ್ ಪ್ರಶಸ್ತಿ ಮೇಲೆ ಕಣ್ಣಿಟ್ಟಿರುವ ಸರ್ಬಿಯದ ನೊವಾಕ್ ಜೊಕೊವಿಚ್ ಮತ್ತು ವಿಶ್ವದ ಅಗ್ರ ರ‍್ಯಾಂಕ್‌ನ ಆಟಗಾರ ಕಾರ್ಲೋಸ್ ಅಲ್ಕರಾಜ್ ಅವರು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಫಿಲಿಪ್ ಶಾಟ್ರಿಯರ್ ಕೋರ್ಟ್‌ನಲ್ಲಿ ಭಾನುವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ನಾಲ್ಕನೇ ಸುತ್ತಿನ ಪಂದ್ಯದಲ್ಲಿ ಅಮೋಘ ಆಟವಾಡಿದ ಜೊಕೊವಿಚ್ 6-3, 6-2, 6-2 ರಲ್ಲಿ ಪೆರುವಿನ ಯುವಾನ್ ಪಾಬ್ಲೊ ವರಿಯಾಸ್ ವಿರುದ್ಧ ಗೆದ್ದರು.

ವಿಶ್ವದ ಮೂರನೇ ರ‍್ಯಾಂಕ್‌ನ ಆಟಗಾರ ಈ ಮೂಲಕ ಫ್ರೆಂಚ್ ಓಪನ್‌ನಲ್ಲಿ ದಾಖಲೆಯ 17ನೇ ಬಾರಿ ಎಂಟರಘಟ್ಟ ಪ್ರವೇಶಿಸಿದ ಸಾಧನೆ ಮಾಡಿದರು.

ಇಲ್ಲಿ 16 ಬಾರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದ ಸ್ಪೇನ್‌ನ ರಫೆಲ್ ನಡಾಲ್ ಅವರ ದಾಖಲೆಯನ್ನು ಮುರಿದರು. ನಡಾಲ್ ಅವರು ಗಾಯದ ಕಾರಣ ಈ ಬಾರಿ ಆಡುತ್ತಿಲ್ಲ. ಜೊಕೊವಿಚ್, ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಒಟ್ಟಾರೆಯಾಗಿ 55 ಬಾರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ.

ವರಿಯಾಸ್ ವಿರುದ್ಧ ಆಕ್ರಮಣಕಾರಿ ಆಟವಾಡಿದ ಅವರು ಎರಡು ಗಂಟೆಗಳ ಒಳಗಾಗಿ ಗೆಲುವಿನ ನಗು ಬೀರಿದರು. ಬೇಸ್‌ಲೈನ್ ಹೊಡೆತಗಳ ದೀರ್ಘ ರ‍್ಯಾಲಿಗೆ ಅವಕಾಶ ನೀಡದ ಅವರು, ನೆಟ್ ಬಳಿ ಧಾವಿಸಿ ಬೇಗನೇ ಪಾಯಿಂಟ್ಸ್ ಕಲೆಹಾಕುವಲ್ಲಿ ಸಫಲರಾದರು.

36 ವರ್ಷದ ಜೊಕೊವಿಚ್, ಕ್ವಾರ್ಟರ್ ಫೈನಲ್‌ನಲ್ಲಿ 11ನೇ ಶ್ರೇಯಾಂಕದ ಆಟಗಾರ ರಷ್ಯಾದ ಕರೆನ್ ಕಚನೊವ್ ವಿರುದ್ಧ ಪೈಪೋಟಿ ನಡೆಸುವರು. ದಿನದ ಮತ್ತೊಂದು ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಕಚನೊವ್ 1-6, 6-4, 7-6, 6-1 ರಲ್ಲಿ ಇಟಲಿಯ ಲೊರೆನ್ಜೊ ಸೋನೆಗೊ ಅವರನ್ನು ಪರಾಭವಗೊಳಿಸಿದರು. ರಷ್ಯಾದ ಆಟಗಾರನ ವಿರುದ್ಧ ಜೊಕೊವಿಚ್ ಅವರು 8-1 ಗೆಲುವಿನ ದಾಖಲೆ ಹೊಂದಿದ್ದಾರೆ.

ಸ್ಪೇನ್‌ನ ಯುವ ಆಟಗಾರ ಅಲ್ಕರಾಜ್ 6-3, 6-2, 6-2 ರಲ್ಲಿ ಇಟಲಿಯ ಲೊರೆನ್ಜೊ ಮುಸೆಟ್ಟಿ ಅವರನ್ನು ಮಣಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಏಳು ಸಲ ಎದುರಾಳಿಯ ಸರ್ವ್ ಬ್ರೇಕ್ ಮಾಡಿದ ಅಲ್ಕರಾಜ್ 2 ಗಂಟೆ 8 ನಿಮಿಷಗಳಲ್ಲಿ ಗೆಲುವು ಸಾಧಿಸಿದರು.

ಎಂಟರ ಘಟ್ಟಕ್ಕೆ ಪವ್ಲಿಚೆಂಕೋವಾ: ರಷ್ಯಾದ ಅನಸ್ತೇಸಿಯಾ ಪವ್ಲಿಚೆಂಕೋವಾ ಅವರು ಮಹಿಳೆಯರ ಸಿಂಗಲ್ಸ್ ವಿಭಾಗದ ಕ್ವಾರ್ಟರ್ ಫೈನಲ್‌ಗೆ ಮುನ್ನಡೆದರು. ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಅವರು 3-6, 7-6, 6-3 ರಲ್ಲಿ ಬೆಲ್ಜಿಯಂನ ಎಲ್ಸೆ ಮೆರ್ಟೆನ್ಸ್ ಅವರನ್ನು ಸೋಲಿಸಿದರು. ಮೊದಲ ಸೆಟ್ ಸೋತರೂ ಪುಟಿದೆದ್ದು ನಿಲ್ಲುವಲ್ಲಿ ಪವ್ಲಿಚೆಂಕೋವಾ ಯಶಸ್ವಿಯಾದರು.


ನೊವಾಕ್ ಜೊಕೊವಿಚ್ ಅವರ ಫೋರ್‌ಹ್ಯಾಂಡ್ ರಿಟರ್ನ್ –ಎಎಫ್‌ಪಿ ಚಿತ್ರ

ಮಹಿಳಾ ಡಬಲ್ಸ್ ಜೋಡಿ ಅನರ್ಹ

ಪ್ಯಾರಿಸ್ (ಎಎಫ್‌ಪಿ): ಮಹಿಳೆಯರ ಡಬಲ್ಸ್ ವಿಭಾಗದ ಪಂದ್ಯದ ವೇಳೆ ಬಾಲ್‌ಗರ್ಲ್ ತಲೆಗೆ ಚೆಂಡು ಹೊಡೆದ ಕಾರಣ, ಜಪಾನ್‌ನ ಮಿಯು ಕಾಟೊ ಮತ್ತು ಇಂಡೊನೇಷ್ಯಾದ ಅಲ್ದಿಲಾ ಸುಟ್ಜಿಯಾದಿ ಜೋಡಿಯನ್ನು ಅನರ್ಹಗೊಳಿಸಲಾಯಿತು.

ಜೆಕ್ ಗಣರಾಜ್ಯದ ಮರಿಯಾ ಬೊಜ್ಕೊವಾ ಮತ್ತು ಸ್ಪೇನ್‌ನ ಸಾರಾ ಸೊರಿಬೆಸ್ ತೊರ್ಮೊ ಎದುರಿನ ಪಂದ್ಯದ ವೇಳೆ ಈ ಘಟನೆ ನಡೆದಿದೆ. ಮೊದಲ ಸೆಟ್ 6-7 ರಲ್ಲಿ ಸೋತಿದ್ದ ಮಿಯು-ಅಲ್ದಿಲಾ, ಎರಡನೇ ಸೆಟ್‌ನಲ್ಲಿ 3-1 ರಲ್ಲಿ ಮುನ್ನಡೆಯಲ್ಲಿದ್ದರು.

ನೆಟ್ ಬಳಿಯಿದ್ದ ಮಿಯು ಅವರು ಚೆಂಡನ್ನು ಬಾಲ್‌ಗರ್ಲ್‌ಗೆ ನೀಡುವ ಉದ್ದೇಶದಿಂದ ಅವರತ್ತ ಹೊಡೆದಿದ್ದಾರೆ. ಆದರೆ ಬಾಲ್‌ಗರ್ಲ್ ಬೇರೆ ಕಡೆ ನೋಡುತ್ತಿದ್ದ ಕಾರಣ ಚೆಂಡು, ತಲೆಯ ಹಿಂಭಾಗಕ್ಕೆ ಬಡಿದಿದೆ. ನೋವಿನಿಂದ ಅಳುತ್ತಿದ್ದ ಬಾಲ್‌ಗರ್ಲ್ ಬಳಿ ಕೂಡಲೇ ಧಾವಿಸಿದ ಮಿಯು, ಕ್ಷಮೆಯಾಚಿಸಿದರು.

ಈ ಘಟನೆಗೆ ಅಂಪೈರ್, ಮಿಯು ಅವರಿಗೆ ಎಚ್ಚರಿಕೆ ನೀಡಿದರು. ಆದರೆ ಶಿಸ್ತು ಕ್ರಮ ತೆಗೆದುಕೊಳ್ಳುವಂತೆ ಎದುರಾಳಿ ಜೋಡಿ ಮನವಿ ಮಾಡಿತು. ಇದರಿಂದ ಮಿಯು- ಅಲ್ದಿಲಾ ಅವರನ್ನು ಅನರ್ಹಗೊಳಿಸಲಾಯಿತು.

ಅಭಿನವ್– ಗೌತಮಿಗೆ ಚಿನ್ನ

ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್ ಶೂಟಿಂಗ್

ಜೂಲ್, ಜರ್ಮನಿ (ಪಿಟಿಐ): ಭಾರತದ ಗೌತಮಿ ಭನೋಟ್ ಮತ್ತು ಅಭಿನವ್ ಶಾ ಅವರು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್ ಶೂಟಿಂಗ್‌ನ 10 ಮೀ. ಏರ್ ರೈಫಲ್ ಮಿಕ್ಸೆಡ್ ತಂಡ ವಿಭಾಗದಲ್ಲಿ ಚಿನ್ನ ಗೆದ್ದರು.

ಭಾನುವಾರ ನಡೆದ ಫೈನಲ್‌ನಲ್ಲಿ ಭಾರತದ ಜೋಡಿ 17-7 ರಲ್ಲಿ ಫ್ರಾನ್ಸ್‌ನ ಓಷಾನ್ ಮುಲ್ಲರ್ ಮತ್ತು ರೊಮೇನ್ ಆಫ್ರೆರ್ ಅವರನ್ನು ಮಣಿಸಿತು. ನಾರ್ವೆಯ ಪೆರ್ನೈಲ್ ನೋರ್ ವಾಲ್-ಜೆನ್ಸ್ ಓಲ್‌ಸ್ರುಡ್ ಜೋಡಿ ಕಂಚು ಜಯಿಸಿತು.

ಗೌತಮಿ ಮತ್ತು ಅಭಿವನ್ ಅವರು ಅರ್ಹತಾ ಹಂತದಲ್ಲಿ 628.3 ಪಾಯಿಂಟ್ಸ್‌ಗಳೊಂದಿಗೆ ಎರಡನೇ ಸ್ಥಾನ ಪಡೆದುಕೊಂಡಿದ್ದರು. ಕಣದಲ್ಲಿದ್ದ ಭಾರತದ ಇನ್ನೊಂದು ಜೋಡಿ ಸ್ವಾತಿ ಚೌಧರಿ- ಸಲೀಂ 624.3 ಪಾಯಿಂಟ್ಸ್‌ಗಳೊಂದಿಗೆ ಏಳನೇ ಸ್ಥಾನ ಗಳಿಸಿತು.

10 ಮೀ. ಏರ್ ಪಿಸ್ತೂಲ್ ಮಿಕ್ಸೆಡ್ ತಂಡ ವಿಭಾಗದಲ್ಲಿ ಭಾರತದ ಸೈನ್ಯಮ್- ಅಭಿನವ್ ಚೌಧರಿ ಜೋಡಿ ಬೆಳ್ಳಿ ಗೆದ್ದಿತು. ಭಾರತದ ಶೂಟರ್‌ಗಳು ಫೈನಲ್‌ನಲ್ಲಿ 12 ಪಾಯಿಂಟ್ಸ್ ಕಲೆಹಾಕಿದರೆ, 16 ಅವಕಾಶಗಳಲ್ಲಿ ನಿಖರ ಗುರಿ ಕಂಡುಕೊಂಡ ಜೂರಿ ಕಿಮ್-ಕಾಂಗ್‌ಹಿನ್ ಕಿಮ್ ಚಿನ್ನ ಜಯಿಸಿದರು.

ಸೈನ್ಯಮ್ ಅವರು ಏರ್ ಪಿಸ್ತೂಲ್ ವೈಯಕ್ತಿಕ ವಿಭಾಗದಲ್ಲಿ ಶನಿವಾರ ಚಿನ್ನ ಜಯಿಸಿದ್ದರು.

ಭಾರತದ ಸುರುಚಿ ಇಂದರ್ ಸಿಂಗ್ ಮತ್ತು ಶುಭಮ್ ಬಿಸ್ಲಾ ಅವರು ಕಂಚು ಪಡೆದುಕೊಂಡರು. ಮೂರನೇ ಸ್ಥಾನಕ್ಕಾಗಿ ನಡೆದ ಪೈಪೋಟಿಯಲ್ಲಿ ಅವರು 16 ಪಾಯಿಂಟ್ಸ್ ಗಳಿಸಿದರೆ, ಉಜ್ಬೆಕಿಸ್ತಾನದ ನಿಗಿನಾ ಸೈದ್‌ಕುಲೊವಾ- ಮುಹಮ್ಮದ್ ಕಮಲೋವ್ (14) ನಾಲ್ಕನೇ ಸ್ಥಾನ ಪಡೆದುಕೊಂಡರು.

ಸ್ಕೀಟ್ ವಿಭಾಗದಲ್ಲಿ ಕಣದಲ್ಲಿದ್ದ ಭಾರತದ ಶೂಟರ್‌ಗಳು ಅರ್ಹತಾ ಸುತ್ತು ದಾಟಲು ವಿಫಲರಾದರು.

ಜೂನಿಯರ್ ಪುರುಷರ ಸ್ಕೀಟ್ ವಿಭಾಗದಲ್ಲಿ ಋತುರಾಜ್ ಬುಂದೇಲಾ 116 ಸ್ಕೋರ್‌ಗಳೊಂದಿಗೆ 19ನೇ ಸ್ಥಾನ ಪಡೆದರೆ, ಅಭಯ್ ಸಿಂಗ್ ಸೆಖೋನ್ (115) ಅವರು 21ನೇ ಸ್ಥಾನ ಗಳಿಸಿದರು.

ಮಹಿಳೆಯರ ವಿಭಾಗದಲ್ಲಿ ರೈಜಾ ಧಿಲ್ಲೋನ್ 11ನೇ ಸ್ಥಾನ, ಮುಫದ್ದಲ್ ದೀಸಾವಾಲಾ 14 ಹಾಗೂ ಸಂಜನಾ ಸೂದ್ 16ನೇ ಸ್ಥಾನ ಪಡೆದುಕೊಂಡರು.


ಗೌತಮಿ ಭನೋಟ್ ಮತ್ತು ಅಭಿನವ್ ಶಾ –ಐಎಸ್‌ಎಸ್‌ಎಫ್ ಟ್ವಿಟರ್ ಚಿತ್ರ

ರಹಾನೆಗೆ ಮರಳಿ ಅರಳುವ ‘ಟೆಸ್ಟ್’

ಲಂಡನ್ (ಪಿಟಿಐ): ಮುಂಬೈಕರ್ ಅಜಿಂಕ್ಯ ರಹಾನೆ ಒಂದೂವರೆ ವರ್ಷದ ನಂತರ ಭಾರತ ಟೆಸ್ಟ್ ತಂಡಕ್ಕೆ ಮರಳಿದ್ದಾರೆ.

ಇದೇ 7ರಿಂದ ದ ಓವಲ್‌ನಲ್ಲಿ ಆರಂಭವಾಗಲಿರುವ ಭಾರತ ಮತ್ತು ಆಸ್ಟ್ರೇಲಿಯಾ ನಡುವಣ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಕಣಕ್ಕಿಳಿಯುವ ನಿರೀಕ್ಷೆಯಲ್ಲಿದ್ದಾರೆ. ಇತ್ತೀಚೆಗೆ ಐಪಿಎಲ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್‌ನಲ್ಲಿ ಮಿಂಚಿದ್ದ ಅವರು ಟಿ20 ಮಾದರಿಯಿಂದ ಟೆಸ್ಟ್‌ಗೆ ಹೊಂದಿಕೊಳ್ಳುವ ಸವಾಲನ್ನು ಎದುರಿಸುತ್ತಿದ್ದಾರೆ.

2022ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಟೆಸ್ಟ್ ಸರಣಿ ಸೋಲಿನ ನಂತರ ರಹಾನೆ ಮತ್ತು ಚೇತೇಶ್ವರ್ ಪೂಜಾರ ಅವರನ್ನು ತಂಡದಿಂದ ಕೈಬಿಡಲಾಗಿತ್ತು. ಆದರೆ ಪೂಜಾರ ಇಂಗ್ಲಿಷ್ ಕೌಂಟಿಯಲ್ಲಿ ಆಡಿ ರನ್ ಗಳಿಸಿದ್ದರು. ಆ ಮೂಲಕ ಅದೇ ವರ್ಷ ಮತ್ತೆ ಭಾರತ ಬಳಗಕ್ಕೆ ಹಿಂದಿರುಗುವಲ್ಲಿ ಯಶಸ್ವಿಯಾಗಿದ್ದರು.

ಆದರೆ ರಹಾನೆ ಅವರು ದೀರ್ಘ ಅವಧಿಯವರೆಗೆ ಕಾಯಬೇಕಾಯಿತು. 82 ಟೆಸ್ಟ್ ಪಂದ್ಯಗಳನ್ನು ಆಡಿರುವ ಅನುಭವಿ ರಹಾನೆ ಕಳೆದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಉತ್ತಮ ಬ್ಯಾಟಿಂಗ್ ಮಾಡಿದ್ದರು. ನಂತರ ಐಪಿಎಲ್‌ನಲ್ಲಿಯೂ ಬೆಳಗಿದ್ದರು.

ಇದೇ ಸಂದರ್ಭದಲ್ಲಿ ಶ್ರೇಯಸ್ ಅಯ್ಯರ್ ಶಸ್ತ್ರಚಿಕಿತ್ಸೆಗೊಳಗಾದ ಕಾರಣ ರಹಾನೆಗೆ ಅವಕಾಶ ಒಲಿದಿದೆ.

2021ರಲ್ಲಿ ರಹಾನೆ ಆಸ್ಟ್ರೇಲಿಯಾದಲ್ಲಿ ವಿರಾಟ್ ಕೊಹ್ಲಿ ಅನುಪಸ್ಥಿತಿಯಲ್ಲಿ ಭಾರತ ತಂಡವನ್ನು ಮುನ್ನಡೆಸಿ ಟ್ರೋಫಿ ಗೆದ್ದು ಇತಿಹಾಸ ಬರೆದಿದ್ದರು.

’ಈ ಪಂದ್ಯಕ್ಕೆ ರಹಾನೆ ಅವರನ್ನು ಆಯ್ಕೆ ಮಾಡಿರುವುದು ಸೂಕ್ತವಾಗಿದೆ. ಮುಂದೆ ಶ್ರೇಯಸ್ ಅಯ್ಯರ್ ಫಿಟ್ ಆದ ಮೇಲೆ ಪರಿಸ್ಥಿತಿ ಬೇರೆ ಎದುರಾಗಬಹುದು. ರಹಾನೆ ಇಲ್ಲಿಯ ಅವಕಾಶವನ್ನು ಯಾವ ರೀತಿ ಬಳಸಿಕೊಳ್ಳುತ್ತಾರೆಂಬುದೂ ಮುಖ್ಯ‘ ಎಂದು ಹಿರಿಯ ಕ್ರಿಕೆಟಿಗ ಶರಣದೀಪ್ ಸಿಂಗ್ ಅಭಿಪ್ರಾಯಪಟ್ಟರು.


ಅಭ್ಯಾಸನಿರತ ಅಜಿಂಕ್ಯ ರಹಾನೆ –ಬಿಸಿಸಿಐ ಟ್ವಿಟರ್ ಚಿತ್ರ

ಆಸ್ಟ್ರೇಲಿಯಾಗೆ ಜೋಶ್ ಅಲಭ್ಯ

ಲಂಡನ್ (ಪಿಟಿಐ): ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಆಡಲಿರುವ ಆಸ್ಟ್ರೇಲಿಯಾ ತಂಡಕ್ಕೆ ವೇಗದ ಬೌಲರ್ ಜೋಶ್ ಹ್ಯಾಜಲ್‌ವುಡ್ ಅವರು ಲಭ್ಯವಿಲ್ಲ

ಜೋಶ್ ಅವರು ಗಾಯದಿಂದ ಸಂಪೂರ್ಣವಾಗಿ ಚೇತರಿಸಿಕೊಂಡಿಲ್ಲ. ಆದ್ದರಿಂದ ಅವರನ್ನು ತಂಡದಿಂದ ಕೈಬಿಡಲಾಗಿದೆ. ಜೋಶ್ ಬದಲಿಗೆ ಮೈಕೆಲ್ ನೆಸೆರ್ ಅವರಿಗೆ ಅವಕಾಶ ನೀಡಲಾಗಿದೆ. ಜೋಶ್ ಅವರು ಮುಂಬರುವ ಆ್ಯಷಸ್ ಸರಣಿಯ ವೇಳೆಗೆ ಫಿಟ್ ಆಗುವ ನಿರೀಕ್ಷೆ ಇದೆ.

ಏಷ್ಯನ್ 20 ವರ್ಷದೊಳಗಿನವರ ಅಥ್ಲೆಟಿಕ್ಸ್: ಭಾರತಕ್ಕೆ ಎರಡು ಚಿನ್ನ

ಯೆಚೊಯಾನ್, ಕೊರಿಯಾ (ಪಿಟಿಐ): ಭಾರತದ ರೆಜೋನಾ ಮಲ್ಲಿಕ್ ಹೀನಾ ಮತ್ತು ಭರತ್‌ಪ್ರೀತ್ ಸಿಂಗ್ ಇಲ್ಲಿ ಆರಂಭಗೊಂಡ ಏಷ್ಯನ್ 20 ವರ್ಷದೊಳಗಿನವರ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಮಹಿಳೆಯರ 200 ಮೀ. ಓಟ ಮತ್ತು ಪುರುಷರ ಡಿಸ್ಕಸ್ ಥ್ರೋನಲ್ಲಿ ಭಾರತಕ್ಕೆ ಚಿನ್ನದ ಪದಕ ಗಳಿಸಿಕೊಟ್ಟರು.

ರೆಜೋನಾ ಮಲ್ಲಿಕ್ ಹೀನಾ ನಿಗದಿತ ಗುರಿಯನ್ನು 53.31 ಸೆಕೆಂಡ್‌ಗಳಲ್ಲಿ ತಲುಪಿ, ಭಾರತಕ್ಕೆ ಮೊದಲ ಪದಕ ಕಾಣಿಕೆ ಕೊಟ್ಟರು. ಅವರು ಏಪ್ರಿಲ್‌ನಲ್ಲಿ ನಡೆದ ಏಷ್ಯನ್ 18 ವರ್ಷದೊಳಗಿನವರ ಅಥ್ಲೆಟಿಕ್ಸ್ ಚಾಂಪಿಯನ್ ಷಿಪ್‌ನ ಇದೇ ವಿಭಾಗದಲ್ಲಿ ಚಿನ್ನದ ಪದಕಕ್ಕೆ ಮುತ್ತಿಕ್ಕಿದ್ದರು. ಭರತ್‌ಪ್ರೀತ್ ಸಿಂಗ್ 55.66 ಮೀಟರ್ ಡಿಸ್ಕಸ್ ಎಸೆಯುವ ಮೂಲಕ ಭಾರತಕ್ಕೆ ಎರಡನೇ ಚಿನ್ನದ ಪದಕವನ್ನು ತಂದುಕೊಟ್ಟರು. ಮಹಿಳೆಯರ 5 ಸಾವಿರ ಮೀಟರ್ ಓಟದ ಸ್ಪರ್ಧೆಯಲ್ಲಿ ಅಂತಿಮಾ ಪಾಲ್ ಕಂಚಿನ ಪಡೆದರು. ಅವರು 17ನಿಮಿಷ, 17.11 ಸೆಕೆಂಡ್‌ನಲ್ಲಿ ಗುರಿ ತಲುಪಿದರು.

ಕುಸ್ತಿ: ‘ಪ್ಲೇ ಆಫ್’ನಲ್ಲಿ ಪಂಕಜ್, ಮುಲಾಯಂಗೆ ನಿರಾಸೆ

ಹಿಂದೆ ಸರಿದ ರವಿ ದಹಿಯಾ

ಬಿಷ್ಕೆಕ್ (ಪಿಟಿಐ): ಭಾರತದ ಕುಸ್ತಿಪಟು ರವಿ ದಹಿಯಾ ಅವರು ಮಂಡಿನೋವಿನ ಕಾರಣ ಯುಡಬ್ಲ್ಯುಡಬ್ಲ್ಯು ರ‍್ಯಾಂಕಿಂಗ್ ಸಿರೀಸ್ ಕುಸ್ತಿ ಚಾಂಪಿಯನ್‌ಷಿಪ್‌ನಿಂದ ಹಿಂದೆ ಸರಿದರು.

ಪುರುಷರ 61 ಕೆ.ಜಿ. ವಿಭಾಗದಲ್ಲಿ ಕಣದಲ್ಲಿದ್ದ ಅವರು ಭಾನುವಾರ ಮೊದಲ ಸುತ್ತಿನಲ್ಲಿ ಕಿರ್ಗಿಸ್ತಾನದ ತೈರ್‌ಬೆಕ್ ಜುಮಶ್‌ಬೆಕ್ ಅವರನ್ನು ಎದುರಿಸಬೇಕಿತ್ತು. ಆದರೆ ಹಣಾಹಣಿಗಾಗಿ ತಾಲೀಮು ನಡೆಸುತ್ತಿದ್ದಾಗ ಮಂಡಿಯಲ್ಲಿ ನೋವು ಕಾಣಿಸಿಕೊಂಡಿದೆ.

‘ಈ ವರ್ಷದ ಜನವರಿಯಲ್ಲಿ ಬಲ ಮಂಡಿಯ ಗಾಯಕ್ಕೆ ಒಳಗಾಗಿದ್ದ ರವಿ, ಚೇತರಿಸಿಕೊಂಡಿದ್ದರು. ಆದರೆ ಭಾನುವಾರ ತಾಲೀಮು ಕೈಗೊಂಡಿದ್ದಾಗ ಅದೇ ಮಂಡಿಯಲ್ಲಿ ನೋವು ಕಾಣಿಸಿ ಕೊಂಡಿದೆ. ಏಷ್ಯನ್ ಕ್ರೀಡಾ ಕೂಟದ ಟ್ರಯಲ್ಸ್‌ಗೆ ಕೆಲವೇ ದಿನಗಳಿರುವುದರಿಂದ ಗಾಯ ಉಲ್ಬಣಿಸಬಾರದು ಎಂದು ಮುನ್ನೆಚ್ಚರಿಕೆ ಕ್ರಮವಾಗಿ ಈ ಚಾಂಪಿಯನ್‌ಷಿಪ್‌ನಿಂದ ಹಿಂದೆ ಸರಿಯಲು ನಿರ್ಧರಿಸಿದರು’ ಎಂದು ಭಾರತ ಕೋಚಿಂಗ್ ತಂಡದ ಸಿಬ್ಬಂದಿಯೊಬ್ಬರು ಹೇಳಿದ್ದಾರೆ.

ಸೆಪ್ಟೆಂಬರ್‌ನಲ್ಲಿ ಬೆಲ್‌ಗ್ರೇಡ್‌ನಲ್ಲಿ ನಡೆದಿದ್ದ ವಿಶ್ವ ಚಾಂಪಿಯನ್‌ಷಿಪ್ ಬಳಿಕ ರವಿ ಅವರ ಮೊದಲ ಅಂತರರಾಷ್ಟ್ರೀಯ ಕೂಟ ಇದಾಗಿತ್ತು. ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಅವರು ಆರನೇ ಸ್ಥಾನ ಗಳಿಸಿದ್ದರು.

ಪಂಕಜ್‌ಗೆ ನಿರಾಸೆ: ಪುರುಷರ 61 ಕೆ.ಜಿ. ವಿಭಾಗದಲ್ಲಿ ಕಂಚಿನ ಪದಕಕ್ಕಾಗಿ ನಡೆದ ‘ಪ್ಲೇ ಆಫ್’ನಲ್ಲಿ ಭಾರತದ ಪಂಕಜ್ 1-6 ರಲ್ಲಿ ಟರ್ಕಿಯ ಎಮ್ರಾ ಅರ್ಮನೊಗ್ಲು ಎದುರು ಪರಾಭವಗೊಂಡರು. ಸೆಮಿಫೈನಲ್‌ನಲ್ಲಿ ಅವರು 0-7 ರಲ್ಲಿ ತೈರ್‌ಬೆಕ್ ಕೈಯಲ್ಲಿ ಸೋತಿದ್ದರು.

ಅದಕ್ಕೂ ಮುನ್ನ ನಡೆದಿದ್ದ ‘ಆಲ್ ಇಂಡಿಯನ್’ ಕ್ವಾರ್ಟರ್ ಫೈನಲ್‌ನಲ್ಲಿ ಪಂಕಜ್, 23 ವರ್ಷದೊಳಗಿನ ವಿಶ್ವ ಚಾಂಪಿಯನ್ ಅಮನ್ ಸೆಹ್ರಾವತ್‌ಗೆ 8-1 ರಲ್ಲಿ ಆಘಾತ ನೀಡಿದ್ದರು.

ಮುಲಾಯಂ ಯಾದವ್ 70 ಕೆ.ಜಿ. ವಿಭಾಗದ ಮೊದಲ ಸುತ್ತಿನಲ್ಲಿ 9-4 ರಲ್ಲಿ ಕಜಕಸ್ತಾನದ ದೋಶನ್ ಅಸೆತೊವ್ ವಿರುದ್ಧ ಗೆದ್ದರೆ, ಆ ಬಳಿಕ ಜಾರ್ಜಿಯದ ದವಿತ್ ಪಟ್ಸನಶ್ವಿಲಿ ಅವರನ್ನು 6-4 ರಲ್ಲಿ ಮಣಿಸಿ ಸೆಮಿಗೆ ಲಗ್ಗೆಯಿಟ್ಟಿದ್ದರು.

ಆದರೆ ಸೆಮಿಯಲ್ಲಿ1-7 ರಲ್ಲಿ ಸ್ಥಳೀಯ ಫೇವರಿಟ್, ಒರೊಜೊಬೆಕ್ ತೊಕ್ತೊಮಂಬೆತೊವ್ ಎದುರು ಮುಗ್ಗರಿಸಿದರು. ಕಂಚಿನ ಪದಕದ ‘ಪ್ಲೇ ಆಫ್’ ಹಣಾಹಣಿಯಲ್ಲಿ ಟರ್ಕಿಯ ಸೆರ್ವೆಟ್ ಕಾಸ್ಕನ್‌ಗೆ ಮಣಿದರು.

65 ಕೆ.ಜಿ. ವಿಭಾಗದಲ್ಲಿ ಕಣದಲ್ಲಿದ್ದ ಅನುಜ್ ಕುಮಾರ್ ಪ್ರಬಲ ಪೈಪೋಟಿ ಒಡ್ಡಿದರೂ 6-7 ರಲ್ಲಿ ಅಜರ್‌ಬೈಜಾನ್‌ನ ಅಲಿ ರಹೀಂಜಾದ ಎದುರು ಪರಾಭವಗೊಂಡರು. ಭಾರತವು ಪುರುಷರ 74 ಕೆ.ಜಿ, 79 ಕೆ.ಜಿ ಮತ್ತು 92 ಕೆ.ಜಿ. ವಿಭಾಗಗಳಲ್ಲಿ ಸ್ಪರ್ಧಿಗಳನ್ನು ಕಣಕ್ಕಿಳಿಸಿಲ್ಲ.


ರವಿ ದಹಿಯಾ

ಮ್ಯಾಡ್ರಿಡ್‌ಗೆ ಬೆಂಜೆಮಾ ಗುಡ್‌ಬೈ

ಮ್ಯಾಡ್ರಿಡ್ (ರಾಯಿಟರ್ಸ್): ಫ್ರಾನ್ಸ್‌ನ ಫುಟ್‌ಬಾಲ್ ಆಟಗಾರ ಕರೀಂ ಬೆಂಜೆಮಾ, ರಿಯಲ್ ಮ್ಯಾಡ್ರಿಡ್ ಕ್ಲಬ್ ತೊರೆಯಲು ನಿರ್ಧರಿಸಿದ್ದಾರೆ. ಇದರಿಂದ ಕ್ಲಬ್ ಜೊತೆಗಿನ 14 ವರ್ಷಗಳ ಅವರ ನಂಟು ಕೊನೆಗೊಳ್ಳಲಿದೆ.

35 ವರ್ಷದ ಬೆಂಜೆಮಾ ಅವರು ಸೌದಿ ಅರೇಬಿಯಾದ ಅಲ್ ಇತ್ತಿಹಾದ್ ಕ್ಲಬ್ ಸೇರಲಿದ್ದಾರೆ ಎನ್ನಲಾಗಿದೆ. ‘ಬೆಂಜೆಮಾ ಅವರು ದಾಖಲೆಯ ಮೊತ್ತಕ್ಕೆ ಅಲ್ ಇತ್ತಿಹಾದ್ ಕ್ಲಬ್ ಜೊತೆ 2 ವರ್ಷಗಳ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ’ ಎಂದು ಸೌದಿ ಅರೇಬಿಯಾದ ಸರ್ಕಾರಿ ಸ್ವಾಮ್ಯದ ‘ಅಲ್ ಎಕ್ಬರಿಯಾ’ ವಾಹಿನಿ ವರದಿ ಮಾಡಿದೆ.

ಬೆಂಜೆಮಾ ಅವರು 2022-23ರ ಋತುವಿನಲ್ಲಿ ಗಾಯದ ಕಾರಣ ಮ್ಯಾಡ್ರಿಡ್ ಪರ ಹೆಚ್ಚು ಪಂದ್ಯಗಳನ್ನು ಆಡಿರಲಿಲ್ಲ. ಇದರಿಂದ ಅವರು ಕ್ಲಬ್‌ನಲ್ಲಿ ಇನ್ನೊಂದು ವರ್ಷ ಮುಂದುವರಿಯುವರು ಎಂದು ನಿರೀಕ್ಷಿಸಲಾಗಿತ್ತು.

‘ನಮ್ಮ ತಂಡದ ನಾಯಕ ಬೆಂಜೆಮಾ ಅವರು ಕ್ಲಬ್ ಜತೆಗಿನ ಅದ್ಭುತ ಹಾಗೂ ಸ್ಮರಣೀಯ ನಂಟನ್ನು ಕೊನೆಗೊಳಿಸಲು ನಿರ್ಧರಿಸಿದ್ದಾರೆ’ ಎಂದು ರಿಯಲ್ ಮ್ಯಾಡ್ರಿಡ್ ಕ್ಲಬ್ ಪ್ರಕಟಣೆ ತಿಳಿಸಿದೆ.

‘ರಿಯಲ್ ಮ್ಯಾಡ್ರಿಡ್‌ನಲ್ಲಿ ಬೆಂಜೆಮಾ ಅವರ ವೃತ್ತಿಜೀವನವು ಉತ್ತಮ ನಡವಳಿಕೆ ಮತ್ತು ವೃತ್ತಿಪರತೆಗೆ ಉಜ್ವಲ ಉದಾಹರಣೆಯಾಗಿದೆ. ಅವರು ನಮ್ಮ ಕ್ಲಬ್‌ನ ಮೌಲ್ಯಗಳನ್ನು ಪ್ರತಿನಿಧಿಸಿದ್ದಾರೆ’ ಎಂದಿದೆ.

2009 ರಲ್ಲಿ ರಿಯಲ್ ಮ್ಯಾಡ್ರಿಡ್ ಸೇರಿದ್ದ ಬೆಂಜೆಮಾ, 350ಕ್ಕೂ ಅಧಿಕ ಗೋಲುಗಳನ್ನು ಗಳಿಸಿದ್ದಾರೆ. ಕ್ಲಬ್ ಪರ ಅತಿಹೆಚ್ಚು ಗೋಲು ಗಳಿಸಿದವರಲ್ಲಿ ರೊನಾಲ್ಡೊ ಬಳಿಕ ಎರಡನೇ ಸ್ಥಾನದಲ್ಲಿದ್ದಾರೆ.


ಕರೀಂ ಬೆಂಜೆಮಾ

ಅಥ್ಲೆಟಿಕ್ಸ್: ಅಮ್ಲಾನ್ ಚಿನ್ನ ‘ಡಬಲ್’ ಸಾಧನೆ

ನವದೆಹಲಿ (ಪಿಟಿಐ): ಭಾರತದ ಸ್ಪ್ರಿಂಟರ್ ಅಮ್ಲಾನ್ ಬೊರ್ಗೊಹೈನ್ ಅವರು ಬೆಲ್ಜಿಯಂನಲ್ಲಿ ನಡೆದ ಫ್ಲೆಂಡರ್ಸ್ ಕಪ್ ಅಥ್ಲೆಟಿಕ್ ಕೂಟದ 100 ಮೀ. ಮತ್ತು 200 ಮೀ. ಓಟದಲ್ಲಿ ಅಗ್ರಸ್ಥಾನ ಪಡೆದು ಚಿನ್ನ ‘ಡಬಲ್’ ಸಾಧನೆ ಮಾಡಿದರು.

ಭಾನುವಾರ ನಡೆದ 100 ಮೀ. ಓಟದ ಸ್ಪರ್ಧೆಯಲ್ಲಿ ಅವರು 10.70 ಸೆ.ಗಳಲ್ಲಿ ಗುರಿ ತಲುಪಿದರು.

ಜಮೈಕದ ಅಬ್ರೆ ಅಲೆನ್ (10.80) ಮತ್ತು ಬೆಲ್ಜಿಯಂನ ವಿಕ್ಟರ್ ಹೋಫ್‌ಮನ್ಸ್ (11.01) ಕ್ರಮವಾಗಿ ಎರಡು ಹಾಗೂ 3ನೇ ಸ್ಥಾನ ಗಳಿಸಿದರು.

25 ವರ್ಷದ ಅಮ್ಲಾನ್ 200 ಮೀ. ಓಟವನ್ನು 20.96 ಸೆ.ಗಳಲ್ಲಿ ಪೂರೈಸಿದರು.

ಹೋಫ್‌ಮನ್ (21.42) ಮತ್ತು ಜಮೈಕದ ಸ್ಯಾಮುಯೆಲ್ ರೋವ್ (21.88 ಸೆ.) ಬೆಳ್ಳಿ ಹಾಗೂ ಕಂಚು ಪಡೆದರು.

ಮೆಂಡಿಸ್, ದಿಮುತ್ ಮಿಂಚು: ಲಂಕಾಗೆ ಜಯ

ಹಂಬಂಟೋಟ (ಎಪಿ): ಕುಶಾಲ ಮೆಂಡಿಸ್ ಮತ್ತು ದಿಮುತ ಕರುಣರತ್ನೆ ಅವರ ಅರ್ಧಶತಕಗಳ ಬಲದಿಂದ ಶ್ರೀಲಂಕಾ ತಂಡವು ಅಫ್ಗಾನಿಸ್ತಾನ ವಿರುದ್ಧದ ಏಕದಿನ ಸರಣಿಯ ಎರಡನೇ ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ಭಾನುವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಶ್ರೀಲಂಕಾ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಮೆಂಡಿಸ್ (78 ರನ್) ಹಾಗೂ ದಿಮುತ (52ರನ್) ಅವರ ಬ್ಯಾಟಿಂಗ್ ನೆರವಿನಿಂದ ಲಂಕಾ ತಂಡವು 50 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 324 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಅಫ್ಗಾನಿಸ್ತಾನ ತಂಡಕ್ಕೆ 42.1 ಓವರ್‌ಗಳಲ್ಲಿ 191 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಲಂಕಾ ತಂಡವು 132 ರನ್‌ಗಳ ಭಾರಿ ಗೆಲುವು ಸಾಧಿಸಿ, ಸರಣಿಯಲ್ಲಿ 1-1ರ ಸಮಬಲ ಸಾಧಿಸಿತು. ಸರಣಿಯ ಮೂರನೇ ಹಾಗೂ ಕೊನೆಯ ಪಂದ್ಯ 7ರಂದು ನಡೆಯಲಿದೆ.

ಸಂಕ್ಷಿಪ್ತ ಸ್ಕೋರ್: ಶ್ರೀಲಂಕಾ: 50 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 324 (ಕುಶಾಲ ಮೆಂಡಿಸ್ 78, ದಿಮುತ್ ಕರುಣರತ್ನೆ 52, ಸಾದೀರ ಸಮರವಿಕ್ರಮ 44, ಪಥುಮ್ ನಿಸ್ಸಾಂಕ 44, ಮಹಮ್ಮದ್ ನಬಿ 52ಕ್ಕೆ 2, ಫರೀದ್ ಅಹಮ್ಮದ್ 61ಕ್ಕೆ 2). ಅಫ್ಗಾನಿಸ್ತಾನ 42.1 ಓವರ್‌ಗಳಲ್ಲಿ 191 (ಹಶ್ಮತುಲ್ಲ ಶಾಹೀದಿ 57, ಇಬ್ರಾಹಿಂ ಜದ್ರಾನ್ 54, ರೆಹಮತ್ ಶಾ 36, ಧನಂಜಯ ಡಿಸಿಲ್ವಾ 39ಕ್ಕೆ 3, ವಣಿಂದು ಹಸರಂಗ 42ಕ್ಕೆ 3, ದುಷ್ಯಂತ ಚಾಮೀರ 18ಕ್ಕೆ 2)



ವಿಕೆಟ್ ಪಡೆದ ಸಂಭ್ರಮದಲ್ಲಿ ಶ್ರೀಲಂಕಾ ಆಟಗಾರರು –ಎಎಫ್‌ಪಿ ಚಿತ್ರ

ಮೆಸ್ಸಿ ಕೊನೆ ಪಂದ್ಯ: ಪಿಎಸ್‌ಜಿಗೆ ಸೋಲು

ಪ್ಯಾರಿಸ್ (ಎಪಿ): ಅರ್ಜೆಂಟೀನಾ ಫುಟ್‌ಬಾಲ್ ಆಟಗಾರ ಲಯೊನೆಲ್ ಮೆಸ್ಸಿ ಅವರಿಗೆ ಪ್ಯಾರಿಸ್ ಸೇಂಟ್ ಜರ್ಮನ್ (ಪಿಎಸ್‌ಜಿ) ಪರ ಆಡಿದ ಕೊನೆ ಪಂದ್ಯದಲ್ಲಿ ನಿರಾಸೆ ಉಂಟಾಯಿತು.

ಪಾರ್ಕ್ ಡೆ ಪಾಸ್‌ನಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಪಿಎಸ್‌ಜಿಯು 2-3 ರಲ್ಲಿ ಕ್ಲೆರ್‌ಮಾಂಟ್ ಎದುರು ಸೋತಿತು. ಕೊನೆಯ ಪಂದ್ಯದಲ್ಲಿ ಮೆಸ್ಸಿಗೆ ಗೋಲು ಗಳಿಸಲು ಆಗಲಿಲ್ಲ. ಪಿಎಸ್‌ಜಿ ಪರ ಎರಡು ಋತುಗಳಲ್ಲಿ ಆಡಿರುವ ಅವರು 32 ಗೋಲುಗಳನ್ನು ಗಳಿಸಿದ್ದಾರೆ.

‘ಪಿಎಸ್‌ಜಿ ಕ್ಲಬ್, ಪ್ಯಾರಿಸ್ ನಗರ ಮತ್ತು ಅಲ್ಲಿನ ಜನರಿಗೆ ಧನ್ಯವಾದ ಹೇಳಲು ಬಯಸುತ್ತೇನೆ. ನಿಮ್ಮೆಲ್ಲರ ಭವಿಷ್ಯ ಉಜ್ವಲವಾಗಲಿ ಎಂದು ಹಾರೈಸುತ್ತೇನೆ’ ಎಂದು ಮೆಸ್ಸಿ ಅವರು ಕ್ಲಬ್‌ನ ವೆಬ್‌ಸೈಟ್‌ನಲ್ಲಿ ತಿಳಿಸಿದ್ದಾರೆ.


ಇಂಡಿಯನ್ ಪ್ರೀಮಿಯರ್ ಲೀಗ್‌ನ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಆಟಗಾರ ಋತುರಾಜ್ ಗಾಯಕವಾಡ್ ಅವರು ಶನಿವಾರ ತಮ್ಮ ದೀರ್ಘ ಕಾಲದ ಗೆಳತಿ, ಮಹಾರಾಷ್ಟ್ರ ಮಹಿಳಾ ಕ್ರಿಕೆಟ್ ತಂಡದ ಆಟಗಾರ್ತಿ ಉತ್ಕರ್ಷಾ ಪವಾರ್ ಅವರನ್ನು ವಿವಾಹವಾದರು –ಟ್ವಿಟರ್ ಚಿತ್ರ

ಕ್ರಿಕೆಟ್: ನಮೀಬಿಯಾ ವಿರುದ್ಧ ಕರ್ನಾಟಕಕ್ಕೆ ಸೋಲು

ಚೇತನ್, ನಿಕಿನ್ ಜೋಸ್ ಶತಕ ವ್ಯರ್ಥ

ವಿಂಡ್‌ಹೋಕ್, ನಮೀಬಿಯಾ: ಎಲ್.ಆರ್.ಚೇತನ್ ಮತ್ತು ನಿಕಿನ್ ಜೋಸ್ ಅವರ ಶತಕಗಳ ಹೊರತಾಗಿಯೂ ಕರ್ನಾಟಕ ತಂಡ, ಎರಡನೇ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ನಮೀಬಿಯಾ ಎದುರು 5 ವಿಕೆಟ್‌ಗಳಿಂದ ಸೋತಿತು.

ಭಾನುವಾರ ಮೊದಲು ಬ್ಯಾಟ್ ಮಾಡಿದ ಕರ್ನಾಟಕ 50 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 360 ರನ್ ಕಲೆಹಾಕಿತು. ಎರಡನೇ ವಿಕೆಟ್‌ಗೆ 258 ರನ್ ಸೇರಿಸಿದ ಚೇತನ್ (169 ರನ್, 147 ಎ., 4X13, 6X8) ಮತ್ತು ನಿಕಿನ್ ಜೋಸ್ (103 ರನ್, 109 ಎ., 4X5, 6X2) ಅವರು ಬೃಹತ್ ಮೊತ್ತಕ್ಕೆ ಕಾರಣರಾದರು.

ಭರ್ಜರಿ ಬ್ಯಾಟಿಂಗ್ ಪ್ರದರ್ಶನ ನೀಡಿದ ನಮೀಬಿಯಾ ತಂಡ ಒಂದು ಎಸೆತ ಬಾಕಿಯಿರುವಂತೆಯೇ ಐದು ವಿಕೆಟ್ ಕಳೆದುಕೊಂಡು ಗೆಲುವಿನ ಗುರಿ ತಲುಪಿತು. ಇದೀಗ ಐದು ಪಂದ್ಯಗಳ ಸರಣಿ 1-1 ರಲ್ಲಿ ಸಮಬಲದಲ್ಲಿದೆ.

ಸಂಕ್ಷಿಪ್ತ ಸ್ಕೋರ್: ಕರ್ನಾಟಕ 50 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 360 (ಎಲ್.ಆರ್.ಚೇತನ್ 169, ನಿಕಿನ್ ಜೋಸ್ 103, ಕೆ.ಸಿದ್ದಾರ್ಥ್ ಔಟಾಗದೆ 59, ಕಾರ್ಲ್ ಬರ್ಕೆನ್‌ಸ್ಟಾಕ್ 63ಕ್ಕೆ 1) ನಮೀಬಿಯಾ 49.5 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 362 (ನಿಕೊಲಸ್ ಡೇವಿನ್ 70, ಮೈಕಲ್ ವಾನ್ ಲಿಂಜೆನ್ 104, ಗೆರಾರ್ಡ್ ಎರಸ್ಮಸ್ 91, ವಿದ್ವತ್ ಕಾವೇರಪ್ಪ 66ಕ್ಕೆ 1, ಶುಭಾಂಗ್ ಹೆಗ್ಡೆ 61ಕ್ಕೆ 1, ವೈಶಾಖ್ 78ಕ್ಕೆ 1, ಸಮರ್ಥ್ 32ಕ್ಕೆ 1) ಫಲಿತಾಂಶ: ನಮೀಬಿಯಾಕ್ಕೆ 5 ವಿಕೆಟ್ ಗೆಲುವು

ಅಥ್ಲೆಟಿಕ್ಸ್: 200 ಮೀ. ಓಟದಲ್ಲಿ ಶಶಿಕಾಂತ್ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿ.ಎ. ಶಶಿಕಾಂತ್ ಇಲ್ಲಿ ನಡೆದ ರಾಜ್ಯ ಸೀನಿಯರ್ ಓಪನ್ ಅಥ್ಲೆಟಿಕ್ ಕೂಟದ ಪುರುಷರ 200 ಮೀಟರ್ ಓಟದ ಸ್ಪರ್ಧೆಯಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನದ ಪದಕ ಗಳಿಸಿದರು.

ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪುರುಷರ ವಿಭಾಗದ ಸ್ಪರ್ಧೆಯಲ್ಲಿ ರಾಜ್ಯ ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ (ಡಿವೈಇಎಸ್) ವಸತಿ ನಿಲಯದ ಶಶಿಕಾಂತ್ ಅವರು ನಿಗದಿತ ಗುರಿಯನ್ನು 20.8 ಸೆಕೆಂಡ್‌ನಲ್ಲಿ ತಲುಪಿದರು. ಕ್ಲಿಫರ್ಡ್ ಜೋಸ್ವಾ (ಕಾಲ: 21.0 ಸೆ) 2000ನೇ ಇಸವಿಯಲ್ಲಿ ನಿರ್ಮಿಸಿದ್ದ ದಾಖಲೆಯನ್ನು ಶಶಿಕಾಂತ್ ಮುರಿದರು. ಅವರು ಶನಿವಾರ 100 ಮೀಟರ್ ಓಟದಲ್ಲೂ ಚಿನ್ನದ ಪದಕ ಗಳಿಸಿದ್ದರು.

200 ಮೀ. ಓಟದಲ್ಲಿ ಉಡುಪಿಯ ಅಭಿನ್ ದೇವಾಡಿಗ (ಕಾಲ: 20.8 ಸೆ), ಉಡುಪಿಯ ನಿಖಿಲ್ ಸಿದ್ದರಾಮ (ಕಾಲ: 21.1 ಸೆ) ಕ್ರಮವಾಗಿ ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದರು.

ಭಾನುವಾರ ನಡೆದ ಸ್ಪರ್ಧೆಗಳ ಫಲಿತಾಂಶ: ಪುರುಷರು: 200 ಮೀ. ಓಟ: ವಿ.ಎ. ಶಶಿಕಾಂತ್ (ಬೆಂಗಳೂರು, ಕಾಲ: 20.8 ಸೆ)-1, ಅಭಿನ್ ದೇವಾಡಿಗ (ಉಡುಪಿ)- 2, ನಿಖಿಲ್ ಸಿದ್ದರಾಮ (ಉಡುಪಿ)-3

400 ಮೀ. ಹರ್ಡಲ್ಸ್: ಅಕ್ಷಯ್ ಚವಾಣ್ (ಬೆಳಗಾವಿ, ಕಾಲ:53.7 ಸೆ)-1, ಆರ್ಯನ್ ಪ್ರಜ್ವಲ್ ಕಶ್ಯಪ್ (ಮೈಸೂರು)-2, ಸೂರಜ್ ಆರ್. ಬಾಳೇಕುಂದ್ರಿ (ಬೆಳಗಾವಿ)-3

800 ಮೀ. ಓಟ: ರಾಹುಲ್ ಚೌಧರಿ (ಮೈಸೂರು, ಕಾಲ: 1ನಿ.53.3 ಸೆ)-1, ಎಸ್. ಕಮಲ ಕಣ್ಣನ್ (ಬೆಂಗಳೂರು ನಗರ)-2, ಟಿ.ಕೆ. ಬೋಪಣ್ಣ (ಮೈಸೂರು)-3

3 ಸಾವಿರ ಮೀ. ಸ್ಟೀಪಲ್‌ಚೇಸ್: ನಾಗರಾಜ್ ದಿವಟೆ (ಧಾರವಾಡ, ಕಾಲ: 9ನಿ, 29.8 ಸೆ)-1, ಮುಹ್ಯುದ್ದೀನ್ ಅಜ್ಮಲ್ (ಬೆಂಗಳೂರು ನಗರ)-2, ಡಿ. ನರೇಂದ್ರ (ಕೆಎಸ್‌ಪಿ)-3

10 ಸಾವಿರ ಮೀ. ಓಟ: ವೈಭವ್ ಎಂ. ಪಾಟೀಲ (ಡಿವೈಇಎಸ್, ಕಾಲ: 32 ನಿ.26 ಸೆ)-1, ಆರ್.ಪುರುಷೋತ್ತಮ್ (ಬಳ್ಳಾರಿ)-2, ಅನಂತ್ ಗಾಂವ್ಕರ್ (ಬೆಳಗಾವಿ)-3

ಹ್ಯಾಮರ್ ಥ್ರೋ: ಸಚಿನ್ (ಕೊಪ್ಪಳ, ದೂರ: 43.32 ಮೀ)-1, ಮುತ್ತಪ್ಪ (ಖೇಲೊ ಇಂಡಿಯಾ ಸೆಂಟರ್)-2, ಧೀರಜ್ (ಡಿವೈಇಎಸ್ ಬೆಂಗಳೂರು)-3

ಮಹಿಳೆಯರು: 200 ಮೀ. ಓಟ: ಕಾವೇರಿ ಪಾಟೀಲ (ಬೆಂಗಳೂರು ನಗರ, ಕಾಲ: 24.6 ಸೆ)-1, ಜ್ಯೋತಿಕಾ (ಎಎಸ್‌ಎಫ್)-2, ಶ್ರದ್ಧಾ (ಉಡುಪಿ)-3

400 ಮೀ. ಹರ್ಡಲ್ಸ್: ಸಿಂಚಲ್ ಕಾವೇರಮ್ಮ (ಬೆಂಗಳೂರು ನಗರ, ಕಾಲ: 1ನಿ.00.1 ಸೆ)-1, ಮೇಘಾ ಮುನವಳ್ಳಿ ಮಠ (ಧಾರವಾಡ)-2, ಕೆ.ಪ್ರಜ್ಞಾ (ಉಡುಪಿ)-3

800 ಮೀ. ಓಟ: ಇ.ಬಿ. ಅರ್ಪಿತಾ (ಶಿವಮೊಗ್ಗ, ಕಾಲ: 2ನಿ, 11.2 ಸೆ)-1, ಜ್ಯೋತಿ ಕಟ್ಟೀಮನಿ (ಧಾರವಾಡ)-2 ಶರಣ್ಯಾ (ಬೆಂಗಳೂರು ನಗರ)-3

10 ಸಾವಿರ ಮೀ. ಓಟ: ಎನ್.ಎಲ್. ತೇಜಸ್ವಿ (ಕೆಎಸ್‌ಪಿ, ಕಾಲ: 40ನಿ.51. ಸೆ)-1, ಎಚ್.ಎನ್.ನಾಗಶ್ರೀ (ಶಿವಮೊಗ್ಗ)-2, ಪಿ.ಎಸ್. ಸ್ಪಂದನಾ (ಬೆಂಗಳೂರು ನಗರ)-3

ಪೋಲ್‌ವಾಲ್ಟ್: ಜಿ. ಸಿಂಧುಶ್ರೀ (ಬೆಂಗಳೂರು ನಗರ, ಎತ್ತರ: 3.80 ಮೀ)-1, ಎ.ನಿಶಾ ಬಾನು (ರೈಲ್ವೆಸ್)-2

ಹ್ಯಾಮರ್ ಥ್ರೋ: ಅಮ್ರೀನ್ (ದಕ್ಷಿಣ ಕನ್ನಡ, ದೂರ: 45.33 ಮೀ)-1, ಎಲ್. ಶ್ರಾವ್ಯಾ ಕರ್ಮರನ್ (ದಕ್ಷಿಣ ಕನ್ನಡ)-2, ಸೌಜನ್ಯಾ (ಕೊಪ್ಪಳ)-3

ಲಾಂಗ್ ಜಂಪ್: ಪಾವನಾ ನಾಗರಾಜ್ (ಎಸ್‌ಎಐ ಬೆಂಗಳೂರು, ದೂರ:5.84 ಮೀ)-1, ವಿ.ಎಸ್. ಶ್ರೀದೇವಿಕಾ (ದಕ್ಷಿಣ ಕನ್ನಡ)-2. ಐಶ್ವರ್ಯ ಪಾಟೀಲ (ದಕ್ಷಿಣ ಕನ್ನಡ)-3

ಹೈಜಂಪ್: ಎಂ.ಎಸ್. ಸಿಂಚನಾ (ದಕ್ಷಿಣ ಕನ್ನಡ, ಎತ್ತರ: 1.70 ಮೀ)-1, ಅಭಿನಯ ಶೆಟ್ಟಿ (ಉಡುಪಿ)-2, ಪಲ್ಲವಿ ಪಾಟೀಲ (ದಕ್ಷಿಣ ಕನ್ನಡ)-3

ಹೆಪ್ಟಾಥ್ಲಾನ್: ರಕ್ಷಿತಾ (ಉಡುಪಿ, 3,515 ಪಾಯಿಂಟ್ಸ್)-1, ದೀಪ್ತಾ ಬಾಲರಾಜ್ (ಬೆಂಗಳೂರು ನಗರ)-2.

3 ಸಾವಿರ ಮೀ.ಸ್ಟೀಪಲ್‌ಚೇಸ್: ಶಾಹಿನ್ ಸಂಶುದ್ದಿನ್ (ಧಾರವಾಡ, ಕಾಲ: 12 ನಿ.10.8 ಸೆ)-1


ವಿ.ಎ. ಶಶಿಕಾಂತ್